ರಂಜನೆ ಬೋಧನೆ ಪ್ರಬೋಧನೆ

ಲಂಕೇಶ್

ಏಪ್ರಿಲ್ 7, 2010 ರೂ. 12/-

ಮಾವೋಗಳೊಂದಿಗೆ ಅರುಂಧತಿ ರಾಯ್



ರಕ್ಷಣಾ ಇಲಾಖೆ ಖರೀದಿ ಹಗರಣದಲ್ಲಿ ಬೆಂಗಳೂರು ಡಾನ್



ಕಾಗಿನೆಲೆಗೆ ಬಿಜೆಪಿ ಜನಿವಾರ

-ಸ್ವಾಮೀಜಿ ಆಕ್ರೋಶ




ಪಾಲಿಕೆ ಕಣದಲ್ಲಿ ಪಾಪಿಷ್ಠರು

ಪ್ರಮುಖ ಕ್ಷೇತ್ರಗಳ ಸಮೀಕ್ಷೆಗಳು


ಭಾರತದಲ್ಲಿ ವಿದೇಶಿ ವಿಶ್ವವಿದ್ಯಾಲಯಗಳು

ಜಂಕ್ ಫುಡ್, ಜಂಕ್ ಕಲ್ಚರ್ ಮತ್ತು ಜಂಕ್ ಯೂನಿವರ್ಸಿಟಿಗಳು!



ಇತ್ತ ಕರ್ನಾಟಕದಲ್ಲಿ ಬಿಜೆಪಿ ಸರ್ಕಾರ ಹ್ಯೋಂಜಿ ಮತ್ತು ಅಲೈಯನ್ಸ್ ಖಾಸಗಿ ವಿಶ್ವವಿದ್ಯಾಲಯಗಳಿಗೆ ಅನುಮತಿ ಕೊಡುವ ವೇಳೆಯಲ್ಲೇ ಅತ್ತ ಕೇಂದ್ರದಲ್ಲಿ ಯುಪಿಎ ಸರ್ಕಾರದ ಸಚಿವ ಸಂಪುಟ ಭಾರತದಲ್ಲಿ ವಿದೇಶಿ ವಿಶ್ವವಿದ್ಯಾಲಯಗಳು ತಮ್ಮ ಅಂಗಡಿ ತೆಗೆಯಲು ಅನುಮತಿ ನೀಡುವ **Foreign Educational Institution (Regulation of Entry and Operation) Bill, 2010**- ವಿದೇಶಿ ಶೈಕ್ಷಣಿಕ ಸಂಸ್ಥೆ (ಪ್ರವೇಶ ಮತ್ತು ನಿರ್ವಹಣೆ ನಿಯಂತ್ರಣ) ಮಸೂದೆ 2010 ಕ್ಕೆ ಅನುಮೋದನೆ ನೀಡಿದೆ. ಆದರೂ ಸ್ವದೇಶಿ ಇತ್ಯಾದಿಗಳ ಬಗ್ಗೆ ಇನ್ನಿಲ್ಲದ ಡ್ರಾಮಾಬಾಜಿ ಮಾಡುವ ಅಧಿಕೃತ ವಿರೋಧಿ ಪಕ್ಷವಾದ ಬಿಜೆಪಿ ಮಾತ್ರ ಈ ದೇಶದ ಯುವಜನರ ಕನಸುಗಳಿಗೆ ಪ್ಲಾಸ್ಟಿಕ್ ರೆಕ್ಕೆಗಳನ್ನು ಮಾತ್ರ ನೀಡುವ ಈ ಮಸೂದೆಯ ಬಗ್ಗೆ ಯಾವುದೇ ವಿರೋಧ ವ್ಯಕ್ತಪಡಿಸಲಿಲ್ಲ.

ಭಾರತದ ಶೈಕ್ಷಣಿಕ ಕ್ಷೇತ್ರವು ಒಂದು ದೊಡ್ಡ ಲಾಭದಾಯಕ ಮಾರುಕಟ್ಟೆಯನ್ನು ಒದಗಿಸಿಕೊಡುತ್ತದೆ ಎಂದು ಬಲ್ಲ ದೈತ ವಿದೇಶಿ - ಅದರಲ್ಲೂ ಅಮೆರಿಕ ಹಾಗೂ ಐರೋಪ್ಯ - ಸರ್ಕಾರಗಳು, ವಿವಿಗಳು ಮತ್ತು ಬಹುರಾಷ್ಟ್ರೀಯ ಕಂಪನಿಗಳು ಭಾರತದ ಉನ್ನತ ಶಿಕ್ಷಣ ಕ್ಷೇತ್ರವನ್ನು ಆದಷ್ಟು ಬೇಗನೆ ವಿದೇಶೀ ನೇರ ಹಣಹೂಡಿಕೆಗೆ ಮುಕ್ತಗೊಳಿಸಬೇಕೆಂದು ಆಗ್ರಹಿಸುತ್ತಲೇ ಬರುತ್ತಿದ್ದವು. ಈ ಮಸೂದೆಯು ಶೈಕ್ಷಣಿಕ ಕ್ಷೇತ್ರದಲ್ಲಿರುವ ವಿದೇಶಿ ಕಂಪನಿಗಳ ಆ ಎಲ್ಲಾ ಆಶಯಗಳನ್ನೂ ಈಡೇರಿಸುತ್ತದೆ. ವಿದೇಶಿ ಉನ್ನತ ಶಿಕ್ಷಣ ವಲಯ - ಅದರಲ್ಲೂ ಅಮೆರಿಕ ಹಾಗೂ ಐರೋಪ್ಯ ದೇಶಗಳ - ಕಳೆದ ಒಂದು ದಶಕದಲ್ಲಿ ತೀವ್ರವಾದ ಬಿಕ್ಕಟ್ಟನ್ನೇ ಎದುರಿಸುತ್ತಿದೆ. ಒಂದು ಕಡೆ ಆರ್ಥಿಕ ಸಂಕಷ್ಟದಿಂದ ಆ ದೇಶಗಳ ಸರ್ಕಾರಗಳು ಶೈಕ್ಷಣಿಕ ಕ್ಷೇತ್ರಕ್ಕೆ ನೀಡುತ್ತಿದ್ದ ಅನುದಾನ ಕಡಿತ ಮಾಡುತ್ತಿವೆ. ಇನ್ನೊಂದೆಡೆ ವಿದ್ಯಾರ್ಥಿಗಳ ಮೇಲೆ ಅಧಿಕ ಶುಲ್ಕವನ್ನು ಹೇರಿ ಆ ಭಾರವನ್ನು ವರ್ಗಾಯಿಸಲೂ ಆಗದಂತೆ ವಿದ್ಯಾರ್ಥಿಗಳು ಮತ್ತವರ ಪೋಷಕರು ಹೋರಾಟಗಳನ್ನು ನಡೆಸುತ್ತಿದ್ದಾರೆ.



ಇಂಥಾ ಪರಿಸ್ಥಿತಿಯಲ್ಲಿ ಭಾರತದಲ್ಲಿ ವಿದೇಶಿ ವಿಶ್ವವಿದ್ಯಾಲಯಗಳಿಗೆ ಮುಕ್ತ ಪರವಾನಗಿ ನೀಡಲಾಗಿದೆ.

ಹೀಗೆ ವಿದೇಶಿ ವಿವಿಗಳಿಗೆ ಅನುಮತಿ ನೀಡಿರುವುದರ ಹಿಂದಿನ ಅಸಲೀ ಕಾರಣ ಇದೇ! ಆದರೆ ಸರ್ಕಾರದ ಈ ದಲ್ಲಾಳಿ ನೀತಿಗೆ ಮಖಮಲ್ ಮುಖವಾಡ ತೊಡಿಸಲೆಂದೇ "ವಿದೇಶಿ ವಿವಿಯಿಂದ ಭಾರತದ ಉನ್ನತ ಶಿಕ್ಷಣದ ಗುಣಮಟ್ಟ ಏರುತ್ತದೆ", "ಭಾರತದಲ್ಲೇ ವಿದೇಶಿ ವಿವಿಗಳು ತಮ್ಮ ಕ್ಯಾಂಪಸ್‌ಗಳನ್ನು ತೆರೆಯುವುದರಿಂದ ಭಾರತೀಯ ವಿದ್ಯಾರ್ಥಿಗಳು ಲಕ್ಷಾಂತರ ಡಾಲರ್ ಅಮೂಲ್ಯ ವಿದೇಶಿ ವಿನಿಮಯವನ್ನು ವೆಚ್ಚ ಮಾಡುತ್ತಾ ವಿದೇಶಕ್ಕೆ ಹೋಗುವುದು ತಪ್ಪುತ್ತದೆ. ಇದರಿಂದ ಏನಿಲ್ಲವೆಂದರೂ ವರ್ಷಕ್ಕೆ 35,000 ಕೋಟಿ ವಿದೇಶಿ ವಿನಿಮಯ ಉಳಿಯುತ್ತದೆ" ಎಂಬಿತ್ಯಾದಿ ವಾದಗಳನ್ನು ಸರ್ಕಾರ ಮತ್ತವರ ಭಟ್ಟಂಗಿ ಬುದ್ಧಿಜೀವಿಗಳು ಮುಂದಿಡುತ್ತಿದ್ದಾರೆ.

ಆದರೆ ಇವೆಲ್ಲವೂ ಕನ್ನಡಿಯೊಳಗಿನ ಗಂಟಿನಂಥಾ ವಾದಗಳೇ ಆಗಿವೆ. ಭಾರತದಲ್ಲಿ ವಿದೇಶಿ ವಿವಿಗಳಿಗೆ ಅನುಮತಿ ನೀಡುವ ಬಗ್ಗೆ ರಚಿಸಲಾಗಿದ್ದ ಖ್ಯಾತ ಶಿಕ್ಷಣ ತಜ್ಞ ಯಶ್‌ಪಾಲ್ ನೇತೃತ್ವದ ಸಮಿತಿ ವಿದೇಶಿ ವಿವಿಗೆ ಅನುಮತಿ ನೀಡಿದ ತಕ್ಷಣ ಅಮೆರಿಕದ ಹೆಸರಾಂತ ಎಮ್.ಐ.ಟಿ, ಹಾರ್ವರ್ಡ್, ಯೇಲ್, ಸ್ಟಾನ್‌ಫೋರ್ಡ್, ಕೆಲ್ಲೋಗ್, ಹಾಪ್‌ಕಿನ್ಸ್ ಮೆಡಿಕಲ್ ಇನ್‌ಸ್ಟಿಟ್ಯೂಟ್‌ನಂಥ ವಿವಿಗಳಾಗಲೀ, ಯೂರೋಪಿನ ಕೇಂಬ್ರಿಡ್ಜ್, ಆಕ್ಸ್‌ಫರ್ಡ್‌ನಂಥ ವಿವಿಗಳಾಗಲೀ ಭಾರತದಲ್ಲಿ ತಮ್ಮ ಕ್ಯಾಂಪಸ್‌ಅನ್ನು ಪ್ರಾರಂಭಿಸುತ್ತವೆ ಎಂದು ಎಣಿಸಲು ಸಾಧ್ಯವಿಲ್ಲ ಎಂದು ಅಭಿಪ್ರಾಯಪಟ್ಟಿದ್ದರು. ಏಕೆಂದರೆ ಅಮೆರಿಕದ ಈ ಹೆಸರಾಂತ ವಿವಿಗಳು ಭಾರತದಲ್ಲಿರಲಿ ಈವರೆಗೆ ಯೂರೋಪಿನಲ್ಲಿ ತಮ್ಮ ಶಾಖೆಗಳನ್ನು ತೆರೆದಿಲ್ಲ! ಹೀಗಾಗಿ ಯಶ್‌ಪಾಲ್ ಸಮಿತಿ ಭಾರತಕ್ಕೆ ಮೂರನೇ ದರ್ಜೆ ವಿದೇಶಿ ವಿವಿಗಳೇ ಬರಬಹುದು ಎಂಬ ಆತಂಕವನ್ನು ವ್ಯಕ್ತಪಡಿಸಿತ್ತು.

ಇದರರ್ಥ ಭಾರತಕ್ಕೆ ಬರಲಿರುವುದು ನಮ್ಮ ಯಡಿಯೂರಪ್ಪನಿಗೆ ಡಾಕ್ಟರೇಟ್ ಕೊಟ್ಟ ಅಡ್ರೆಸ್‌ಗಿಲ್ಲದ ಯೂನಿವರ್ಸಿಟಿಗಳು. ಈಗಾಗಲೇ ಅಂತಹ ಮೂರನೇ ದರ್ಜೆ ಯೂನಿವರ್ಸಿಟಿಗಳಾದ ಫೀನಿಕ್ಸ್ ಆನ್‌ಲೈನ್ ಯೂನಿವರ್ಸಿಟಿ, ಸುಲ್ಲಿವನ್ ಯೂನಿವರ್ಸಿಟಿ, ಗೌಷರ್ ಕಾಲೇಜ್, ಸೋಜರ್ನರ್ ಡೌಗ್ಲಾಸ್ ಕಾಲೇಜು ಹಾಗೂ ಇನ್ನಿತರ ಅಮೆರಿಕನ್ನರಿಂದಲೇ ಕಳಪೆಯೆಂದು ಉಗಿಸಿಕೊಂಡು ತಿರಸ್ಕರಿಸಲ್ಪಟ್ಟಿರುವ ವಿವಿಗಳೇ ಭಾರತದಲ್ಲಿ ತಮ್ಮ ಅಂಗಡಿ ತೆಗೆಯಲು ಉತ್ಸುಕವಾಗಿವೆ. ವಿದೇಶದ ಹೆಸರಲ್ಲಿ ಸಗಣಿಯನ್ನು ಪ್ಯಾಕೇಜು ಮಾಡಿಕೊಟ್ಟರೂ "ಕ್ರಂಚಿ, ಕ್ರಿಸ್ಪಿ" ಎಂದು ಬಾಯಿ ಚಪ್ಪರಿಸಿ ತಿನ್ನುವ ಭಾರತದ ಮಧ್ಯಮ ವರ್ಗದ ಸ್ವಾಭಿಮಾನ ಶೂನ್ಯ ಪರಾಧೀನ ಮನಸ್ಥಿತಿಯನ್ನೇ ವಿದೇಶಿ ವಿವಿಯ ಹೆಸರಲ್ಲಿ ಈ ಉದ್ಯಮಿಗಳು ನಗದು ಮಾಡಿಕೊಳ್ಳಲು ಹೊರಟಿದ್ದಾರೆ.

ವಿದೇಶಿ ವಿವಿಗಳು ಭಾರತದ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸುತ್ತದೆ ಎಂಬ ವಾದವೇ ಅರ್ಥರಹಿತವಾದದ್ದು. ಇಂದು ಉನ್ನತ ಶಿಕ್ಷಣದಲ್ಲಿ ಭಾರತ ಹಿಂದುಳಿದಿರುವುದು ಮೂಲ ವಿಜ್ಞಾನ ಶಿಕ್ಷಣದಲ್ಲಿ, ಉನ್ನತ ತಂತ್ರಜ್ಞಾನದ ವಿಷಯದಲ್ಲಿ. ಇವುಗಳಲ್ಲಿ ಭಾರತವು ತಲೆ ಎತ್ತಬೇಕೆಂದರೆ

ಚಾರ್ವಾಕ

ಶಿವಸುಂದರ್

ಸಾಕಷ್ಟು ಹಣವನ್ನು ಈ ಕ್ಷೇತ್ರದ ಮೂಲ ಅಧ್ಯಯನ ಮತ್ತು ಸಂಶೋಧನೆಯಲ್ಲಿ ಹೂಡಬೇಕಾಗಿದೆ. ಆದರೆ ಸರ್ಕಾರದ ಬಳಿ ಹಣವಿಲ್ಲದಿರುವುದರಿಂದ ಖಾಸಗಿಯವರ ಪ್ರವೇಶ ಅನಿವಾರ್ಯವೆಂಬುದು ಸರ್ಕಾರದ ಮತ್ತೊಂದು ವಾದ. ವಿದೇಶದ ಹೆಸರಾಂತ ವಿವಿಗಳಲ್ಲಿ ಈ ಬಗೆಯ ಅಧ್ಯಯನ ಇಡೀ ವಿಶ್ವದಲ್ಲೇ ಅತ್ಯುತ್ಕೃಷ್ಟವಾದದ್ದು ಎಂಬುದರಲ್ಲಿ ಸಂದೇಹವಿಲ್ಲ. ಆದರೆ ಅದಕ್ಕೆ ಹಣಹೂಡಿದ್ದು ಅಲ್ಲಿನ ಸರ್ಕಾರಗಳೇ ವಿನಃ ಖಾಸಗಿಯವರಲ್ಲ. ಈಗ ಅವರು ತಮ್ಮ ಬಂಡವಾಳ ಮತ್ತು ಪರಿಣಿತಿಯನ್ನು ಕೊಟ್ಟು ಭಾರತದ ಅಗತ್ಯಗಳನ್ನು ಪೂರೈಸುತ್ತಾರೆ ಎಂದು ನಿರೀಕ್ಷಿಸುವುದೇ ಮುಠಾಳತನ. ಏಕೆಂದರೆ ಅಣು ವಿಜ್ಞಾನ, ಬಾಹ್ಯಾಕಾಶ, ಔಷಧಿ, ರಕ್ಷಣಾ ತಂತ್ರಜ್ಞಾನ ಇನ್ನಿತರ ಎಲ್ಲಾ ಕ್ಷೇತ್ರಗಳ ಸಣ್ಣ ಪುಟ್ಟ ಸಂಶೋಧನೆಗಳನ್ನು ಪೇಟೆಂಟ್ ಮಾಡಿಕೊಂಡು ಇಡೀ ವಿಶ್ವ ಶಾಶ್ವತವಾಗಿ ತಮ್ಮ ಬೌದ್ಧಿಕ ವಸಾಹತುವಾಗಿರಬೇಕೆಂಬ ವ್ಯೂಹದಲ್ಲಿ ಭಾರತದಂಥ ರಾಷ್ಟ್ರಗಳನ್ನು ಸೆರೆಹಿಡಿದಿರುವ ಈ ದೇಶಗಳು ಭಾರತವನ್ನು ಶೈಕ್ಷಣಿಕವಾಗಿ ಅರ್ಥಾತ್ ಬೌದ್ಧಿಕವಾಗಿ ಸ್ವಾವಲಂಬಿಯಾಗುವಂತೆ ಮಾಡುವಲ್ಲಿ ಸಹಕರಿಸುತ್ತದೆ ಎಂದು ನಿರೀಕ್ಷಿಸಲಾದೀತೇ?

ಹಾಗಿದ್ದಲ್ಲಿ ಭಾರತಕ್ಕೆ ಬರಬಹುದಾದ ವಿದೇಶಿ ವಿವಿಗಳು ಎಂಥವು? ಈಗಾಗಲೇ ಕ್ಯೂ ಹಚ್ಚಿ ನಿಂತಿರುವ ಕೆಲವು ವಿವಿಗಳನ್ನು ನೋಡಿದರೆ ಅದರ ಚಿತ್ರಣ ಸ್ಪಷ್ಟವಾಗುತ್ತದೆ. ಅಮೆರಿಕದ ಡ್ಯೂಕ್ ವಿವಿಯು ಭಾರತದಲ್ಲಿ ಎಂಬಿಎ ಕಲಿಸುವ ಪರವಾನಗಿ ಕೇಳುತ್ತಿದೆ. ಶ್ಯೂಲಿಚ್ ಸ್ಕೂಲ್ ಆಫ್ ಬಿಸಿನೆಸ್, ನ್ಯೂ ಕ್ಯಾಸಲ್ ಬಿಸಿನೆಸ್ ಸ್ಕೂಲ್, ಮೆರಿಟ್ ಸ್ವಿಸ್ ಏಷಿಯನ್ ಸ್ಕೂಲ್ ಆಫ್ ಹೋಟೆಲ್ ಮ್ಯಾನೇಜ್‌ಮೆಂಟ್ ಇತ್ಯಾದಿಗಳು ಹೋಟೆಲ್ ಮ್ಯಾನೇಜ್‌ಮೆಂಟ್ ಮತ್ತು ಬಿಸಿನೆಸ್ ಅಡ್ಮಿನಿಸ್ಟ್ರೇಷನ್ ಕಲಿಸಲು ಉತ್ಸುಕವಾಗಿವೆಯೇ ವಿನಃ ಭಾರತಕ್ಕೆ ಅಗತ್ಯವಿರುವ ಜ್ಞಾನ, ವಿಜ್ಞಾನವನ್ನಾಗಲೀ ಮತ್ತದಕ್ಕೆ ಬೇಕಾದ ಮೂಲಸೌಕರ್ಯಗಳನ್ನಾಗಲೀ ತರಲು ಹೂಡಿಕೆ ಮಾಡುತ್ತಿಲ್ಲ. ಇಷ್ಟು ಮಾತ್ರವಲ್ಲ, ಇವುಗಳ ಶೈಕ್ಷಣಿಕ ಅರ್ಹತೆ ಮತ್ತು ಮೂಲಸೌಕರ್ಯಗಳ ಲಭ್ಯತೆಗಳು ಭಾರತದಲ್ಲಿ ಈಗಾಗಲೇ ಇರುವ ಹಲವಾರು ಸರ್ಕಾರಿ ಮತ್ತು ಖಾಸಗೀ ಕಾಲೇಜು ಮತ್ತು ಇನ್‌ಸ್ಟಿಟ್ಯೂಟ್ ಗಳಿಗಿಂತಲೂ ಅಧ್ವಾನದ್ದಾಗಿವೆ. ಹೀಗಾಗಿಯೇ ವಿದೇಶದಲ್ಲಿ ಆ ಸಂಸ್ಥೆಗಳಿಗೆ ಮಾರುಕಟ್ಟೆ ಕುಸಿಯುತ್ತಿದೆ. ಸರ್ಕಾರದ ಬೆಂಬಲವೂ ಇಲ್ಲದೆ, ದುಬಾರಿ ಶುಲ್ಕ ಕೊಡಬಲ್ಲ ವಿದ್ಯಾರ್ಥಿಗಳೂ ದೊರಕದೆ ಈಗ ಅವು ವಿದೇಶೀ ವಿವಿ ಎಂಬ ಮಖಮಲ್ ಟೋಪಿಯನ್ನು ಭಾರತದ ಮಧ್ಯಮ ವರ್ಗದ ಜನರಿಗೆ ಹಾಕಿ ಲಾಭ ಮಾಡಲು ಧಾವಿಸುತ್ತಿವೆ.

ಇವೆಲ್ಲ ಭಾರತದಲ್ಲಿ ತಮ್ಮ ಅಂಗಡಿಗಳನ್ನು ತೆಗೆದರೂ ಭಾರತದಿಂದ ಪ್ರತಿವರ್ಷ ಹೊರದೇಶಗಳಿಗೆ ಓದಲು ಹೋಗುತ್ತಿರುವವರ ಸಂಖ್ಯೆ ಇಳಿಮುಖವಾಗಿ ಅಷ್ಟು ವಿದೇಶಿ ವಿನಿಮಯ ಉಳಿಯಬಹುದೇ? ಖಂಡಿತಾ ಇಲ್ಲ. ಇಂದು ಉನ್ನತ ವಿದ್ಯಾಭ್ಯಾಸಕ್ಕೆಂದು ವಿದೇಶಕ್ಕೆ ಹೋಗುತ್ತಿರುವ ವಿದ್ಯಾರ್ಥಿಗಳಲ್ಲಿ ಹೆಚ್ಚಿನ ಪಾಲು ಅಲ್ಲಿಯೇ ನೆಲೆಸುವ ಉದ್ದೇಶದಿಂದ ಹೋಗುತ್ತಿದ್ದಾರೆಯೇ ವಿನಃ ವಾಪಸ್ ಬರಲೆಂದಲ್ಲ. ಆಸ್ಟ್ರೇಲಿಯಾದಲ್ಲಿ ಭಾರತೀಯ ವಿದ್ಯಾರ್ಥಿಗಳ ಮೇಲೆ ಆಸ್ಟ್ರೇಲಿಯನ್ನರಲ್ಲಿ ಜನಾಂಗೀಯ ದ್ವೇಷ ಬೆಳೆಯಲು ಇದೂ ಒಂದು ಕಾರಣ. ಇನ್ನು ಅತಿ ಬುದ್ಧಿವಂತರು ಮತ್ತು ಪರಿಣತರಿಗೆ ಭಾರತದ ಸರ್ಕಾರ ಸರಿಯಾದ ಸಂಬಳ ಮತ್ತು ಸೌಕರ್ಯ ಒದಗಿಸುವುದಿಲ್ಲವೆಂದೇ ಓದಲು ಹೋದವರು ಗ್ರೀನ್ ಕಾರ್ಡ್ ಪಡೆದುಕೊಂಡು ಅಮೆರಿಕದಲ್ಲೇ ನೆಲೆಸುತ್ತಿದ್ದಾರೆ. ಕಳಪೆ ವಿದೇಶಿ ವಿವಿಗೆ ಭಾರತದಲ್ಲಿ ಅವಕಾಶ ಮಾಡಿಕೊಡುವುದರಿಂದ ಈ ಯಾವುದೇ ಸಮಸ್ಯೆಗಳು ಬಗೆಹರಿಯುವುದಿಲ್ಲ.

ಈ ಹೊಸ ಮಸೂದೆ ವಿದೇಶಿ ವಿವಿಗಳು ಕನಿಷ್ಠ 50 ಕೋಟಿ ರೂ.ವನ್ನು ಹೂಡಬೇಕೆಂದು ನಿಗದಿಪಡಿಸುತ್ತದಾದರೂ ವಿದ್ಯಾರ್ಥಿಗಳ ಮೇಲೆ ಎಷ್ಟು ಬೇಕಾದರೂ ಶುಲ್ಕ ವಿಧಿಸಲು ಅವಕಾಶ ಮಾಡಿಕೊಡುತ್ತದೆ. ಸ್ವದೇಶದ್ದಾಗಿದ್ದರೆ ಚೌಕಾಸಿ ಮಾಡುವ ಭಾರತದ ಮಧ್ಯಮ ವರ್ಗ ವಿದೇಶವೆಂಬ ಬ್ರಾಂಡಿದ್ದರೆ ಮಾತ್ರ ಗುಣಮಟ್ಟದಲ್ಲಿ ಯಾವ ಚೌಕಾಸಿಯನ್ನು ಮಾಡದೆ ಶುಲ್ಕ ತೆರುತ್ತಾರೆ ಎಂದು ಅವರಿಗೆ ಗೊತ್ತಿದೆ. ಆದರೆ ಈ ವಿದೇಶಿ ವಿವಿಗಳು ಕೇವಲ ಶುಲ್ಕದಿಂದ ಮಾತ್ರ ಲಾಭ ಮಾಡಿಕೊಳ್ಳುವುದಿಲ್ಲ. ನಮ್ಮ ಅಭಿವೃದ್ಧಿ ಮಾದರಿಯಲ್ಲಿ ಈಗ ಕಡ್ಡಾಯವಾಗಿ ಸರ್ಕಾರದ ಎಲ್ಲಾ ಯೋಜನೆಗಳಲ್ಲೂ ಖಾಸಗಿ ಸಹಯೋಗ (**Public-Private Partnership-PPP**) ಇರಲೇಬೇಕು. ಅದೇರೀತಿ ಶಿಕ್ಷಣದಲ್ಲೂ ಬರಲಿರುವ ದಿನಗಳಲ್ಲಿ 40 ದಶಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ಲಭಿಸುವಂತೆ ಮಾಡುವ ಸವಾಲು ಸರ್ಕಾರಕ್ಕಿದೆ.

ಆದರೆ ಶಿಕ್ಷಣವಿರಲಿ, ಆರೋಗ್ಯ, ಪಡಿತರ, ರಸ್ತೆ ಆಸ್ಪತ್ರೆ, ಶಾಲೆಗಳನ್ನೂ ಒದಗಿಸಲು ಸರ್ಕಾರಕ್ಕೆ ಸಾಧ್ಯವಿಲ್ಲವೆಂದು ಹಿಂದೆಸರಿದಿರುವ ನಮ್ಮ ಕಲ್ಯಾಣ ರಾಜ್ಯ ಎಲ್ಲಕ್ಕೂ ಖಾಸಗಿ ಮತ್ತು ವಿದೇಶಿ ಬಂಡವಾಳವನ್ನೇ ಆಶ್ರಯಿಸುವ ಮಾದರಿಯನ್ನು ಈಗಾಗಲೇ ಶಾಸನಬದ್ಧಗೊಳಿಸಿದೆ. ಆದ್ದರಿಂದ ಶಿಕ್ಷಣ ಕ್ಷೇತ್ರಕ್ಕೆ ದೊರೆಯುತ್ತಿದ್ದ ಎಲ್ಲಾ ಸಬ್ಸಿಡಿ, ಸೌಲಭ್ಯಗಳನ್ನು ಈಗ ಈ PPP ಮಾದರಿಯಲ್ಲಿ ಖಾಸಗಿಯವರಿಗೆ ಧಾರೆ ಎರೆಯುತ್ತಾ ಬಂದಿದೆ. ಉಚಿತ ನೆಲ, ತೆರಿಗೆ ರಿಯಾಯತಿ, ಪ್ರೋತ್ಸಾಹಧನ ಇನ್ನಿತ್ಯಾದಿಗಳ ರೂಪದಲ್ಲಿ ಆ ವಿವಿಗಳು ಹೂಡುವ ದುಪ್ಪಟ್ಟು ಹಣವನ್ನು ಮೊದಲನೇ ವರ್ಷವೇ ಅವು ಗಳಿಸಿಕೊಳ್ಳುವಂತೆ ಸರ್ಕಾರ ನೀತಿಗಳನ್ನು ಮಾಡಿದೆ. ಹೀಗಾಗಿಯೇ ವಿದೇಶಗಳಲ್ಲಿ ಕಳಪೆಯೆಂದು ತಿರಸ್ಕರಿಸಲ್ಪಟ್ಟ ಅಡ್ರೆಸ್ಸಿಗಿಲ್ಲದ ಕಳಪೆ ವಿದೇಶಿ ವಿವಿಗಳು ಭಾರತದತ್ತ ಎಂಜಲು ಸುರಿಸಿಕೊಂಡು ಕಾಯುತ್ತಿವೆ.

ಇದು ಕೇವಲ ಶಿಕ್ಷಣ ಕ್ಷೇತ್ರದ ದುರಂತ ಮಾತ್ರವಲ್ಲ. ವಿದ್ಯುತ್ ಕ್ಷೇತ್ರದಲ್ಲಿ ಕೊಜೆಂಟ್ರಿಕ್ಸ್, ಎನ್ರಾನ್‌ಗಳು, ಹಣಕಾಸು ಕ್ಷೇತ್ರದಲ್ಲಿ ಜೆಪಿ ಮೋರ್ಗಾನ್, ಗೋಲ್ಡ್‌ಮನ್ ಸ್ಯಾಕ್‌ಗಳು, ಉತ್ಪಾದನಾ ಕ್ಷೇತ್ರದಲ್ಲಿ ಯೂನಿಯನ್ ಕಾರ್ಬೈಡ್‌ಗಳು ಸಹ ಜಾಗತೀಕರಣದ ಭಾಗವಾಗಿ ಭಾರತ ಸರ್ಕಾರ ಅನುಸರಿಸುತ್ತಿರುವ ನೀತಿಗಳ ದುರ್ಲಾಭ ಮಾಡಿಕೊಂಡು ಆಯಾ ಕ್ಷೇತ್ರಗಳಲ್ಲಿ ಮಾಡಿದ ದುರಂತಕ್ಕೆ ಇತಿಹಾಸ ಸಾಕ್ಷಿಯಾಗಿದೆ. ಈಗ ಶಿಕ್ಷಣ ಕ್ಷೇತ್ರದ ಸರದಿ. ಜಂಕ್‌ಫುಡ್, ಜಂಕ್ ಕಲ್ಚರ್ ಮತ್ತು ಜಂಕ್ ಶಿಕ್ಷಣಗಳು ಭಾರತದ ಯುವ ಜನಾಂಗವನ್ನು ದೇಶ ಕಟ್ಟಲಾಗದ ಜಂಕ್ ಜನಾಂಗವನ್ನಾಗಿಸುತ್ತದಷ್ಟೇ. ●

ನೋ ಕಾಮೆಂಟ್ಸ್

"ಹಿಂದಿ ಚಿತ್ರರಂಗದ ವಿಲನ್‌ಗಳ ಪಾತ್ರದ ಇತಿಹಾಸವು ಒಂದರ್ಥದಲ್ಲಿ ನಮ್ಮ ದೇಶದ ಸಾಮಾಜಿಕ-ರಾಜಕೀಯ ಇತಿಹಾಸವನ್ನೇ ಪ್ರತಿಫಲಿಸುತ್ತದೆ. 1940-50ರ ದಶಕದಲ್ಲಿ ಹಿಂದಿ ಚಿತ್ರದ ವಿಲನ್‌ಗಳು ದೊಡ್ಡದೊಡ್ಡ ಭೂಮಾಲೀಕರಾಗಿರುತ್ತಿದ್ದರು. 1950-80ರ ದಶಕದಲ್ಲಿ ಕಾರ್ಖಾನೆ ಮಾಲೀಕ-ಬಡ್ಡಿ ವ್ಯಾಪಾರಿ ಸೇಟುಗಳೇ ವಿಲನ್‌ಗಳು. 1960-70ರ ದಶಕದಲ್ಲಿ ನಗರೀಕರಣ ಪ್ರಕ್ರಿಯೆ ಪ್ರಾರಂಭವಾಗುತ್ತಿದ್ದಂತೆ ನಗರಗಳ ಭೂಗತ ರೌಡಿ-ಮಾಫಿಯಾಗಳು ವಿಲನ್‌ಗಳಾದರು. 1970-80ರ ದಶಕದಲ್ಲಿ ಮಾಫಿಯಾಗಳೇ ಹೀರೋಗಳೂ ಆದರು. 1980-90ರ ದಶಕದಲ್ಲಿ ಪೊಲೀಸರು-ರಾಜಕಾರಣಿಗಳು ಹಿಂದಿ ಚಿತ್ರದ ವಿಲನ್‌ಗಳು. ಎಲ್ಲರೂ ಸಹಜವಾಗಿಯೇ ಊಹಿಸಬಹುದಾಗಿರುವಂತೆ 1990-2000ರ ದಶಕದಲ್ಲಿ ಪಾಕಿಸ್ತಾನವೇ ಹಿಂದಿ ಚಿತ್ರದ ವಿಲನ್ ಮತ್ತು ಈ ದಶಕದಲ್ಲಿ ನಮ್ಮ ಮತ್ತು ವಿಲನ್‌ಗಳ ನಡುವೆ ವ್ಯತ್ಯಾಸಗಳು ಮಾಯವಾಗುತ್ತಿರುವುದರಿಂದ ಹಿಂದಿ ಚಿತ್ರದಲ್ಲಿ ವಿಲನ್ ಎಂಬ ಪ್ರತ್ಯೇಕ ಪಾತ್ರ ಮಾಯವಾಗುತ್ತಿದೆ."

- ಜಾವೇದ್ ಅಖ್ತರ್

"ಕರ್ನಾಟಕದ ಜಾನುವಾರು ಹತ್ಯಾ ಪ್ರತಿಬಂಧಕ ಮತ್ತು ಸಂರಕ್ಷಣಾ ವಿಧೇಯಕದಲ್ಲಿನ ಅಂಶಗಳು ಸಮರ್ಥಕವಾಗಿಲ್ಲ. ಹೀಗಾಗಿ ಅದಕ್ಕೆ ಕಾನೂನುರೀತ್ಯ ಅನುಮೋದನೆ ಸಿಗುವ ಸಾಧ್ಯತೆ ಕಡಿಮೆ."

- ಹಂಸರಾಜ್ ಭಾರದ್ವಾಜ್, ರಾಜ್ಯಪಾಲರು

"ಪ್ರಜಾಪ್ರತಿನಿಧಿಗಳು ಪ್ರಜಾಸೇವಕರ ಮನೋಭಾವದಿಂದ ಕಾರ್ಯನಿರ್ವಹಿಸಬೇಕೇ ಹೊರತು ಪ್ರಜೆಗಳ ಪ್ರಭುಗಳಾಗಿ ಅಲ್ಲ."

-ಸಂತೋಷ್ ಹೆಗ್ಡೆ ಲೋಕಾಯುಕ್ತರು

"ಗೋಹತ್ಯಾ ನಿಷೇಧ ಕಾನೂನು ಜಾರಿಗೆ ಬಂದರೆ ಮೃಗಾಲಯಗಳಲ್ಲಿರುವ ಹುಲಿ, ಸಿಂಹ, ಚಿರತೆಗಳ ಆಯುಷ್ಯ ಕಡಿಮೆಯಾಗುವುದಂತೂ ಖಚಿತ. ಏಕೆಂದರೆ ಪ್ರತಿನಿತ್ಯ ಮೃಗಾಲಯಗಳಿಗೆ ಏನಿಲ್ಲವೆಂದರೂ 2 ಟನ್ ಗೋಮಾಂಸ ಸರಬರಾಜಾಗುತ್ತದೆ."

-ಪತ್ರಿಕಾ ವರದಿ

"ಕೇಂದ್ರ ಸರ್ಕಾರವು ಕರ್ನಾಟಕ ರಾಜ್ಯಕ್ಕೆ 3171 ಮೆಟ್ರಿಕ್ ಟನ್ ಅಕ್ಕಿಯನ್ನೂ, 19,697 ಮೆಟ್ರಿಕ್ ಟನ್ ಗೋಧಿಯನ್ನೂ ಹಂಚಿಕೆ ಮಾಡಿದೆ. ಆದರೆ ರಾಜ್ಯ ಸರ್ಕಾರ ಅದನ್ನು ಪಡೆದುಕೊಂಡೇ ಇಲ್ಲ."

-ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್ ಆಫ್ ಇಂಡಿಯಾ

ನಂಬಿದ್ರೆನಂಬಿ ಬಿಟ್ರೆಬಿಡಿ

"ಉತ್ತರ ಕರ್ನಾಟಕದಲ್ಲಿ ಪ್ರಕೃತಿ ವಿಕೋಪ ಸಂತ್ರಸ್ತರಿಗೆ 'ಆಸರೆ' ಯೋಜನೆಯಡಿ ಪುನರ್ವಸತಿ ಕಲ್ಪಿಸುವ ಕಾಮಗಾರಿ ಮಳೆಗಾಲಕ್ಕೆ ಮುನ್ನ ಪೂರ್ಣಗೊಳ್ಳಲಿದೆ."

-ಯಡಿಯೂರಪ್ಪ

"ಬೆಂಗಳೂರು ನಗರಸಭೆ ಚುನಾವಣೆಗಳಲ್ಲಿ ಪ್ರಪ್ರಥಮವಾಗಿ ಮಹಿಳೆಯರಿಗೆ ಮತದಾನದ ಅಧಿಕಾರ ಸಿಕ್ಕಿದ್ದು 1923ರಲ್ಲಿ."

-ಪತ್ರಿಕಾ ವರದಿ

"ವಾಸ್ತವವಾಗಿ ನಿತ್ಯಾನಂದ ಸ್ವಾಮಿ ತಮ್ಮ ಆಶ್ರಮದಲ್ಲಿ ತಮ್ಮ ಭಕ್ತೆಯೊಬ್ಬರ ಜೊತೆ ಧ್ಯಾನಮಗ್ನರಾಗಿದ್ದರಷ್ಟೆ. ಅದನ್ನೇ ಮಾಧ್ಯಮಗಳು ತಿರುಚಿವೆ. ಇದೂ ಸಹ ಹಿಂದೂಗಳ ವಿರುದ್ಧ ನಡೆದಿರುವ ಷಡ್ಯಂತ್ರದ ಭಾಗವಾಗಿದೆ."

-ವಿಶ್ವ ಹಿಂದೂ ಪರಿಷತ್ ಹೇಳಿಕೆ

ಭಾರದ್ವಾಜನಾಗಿಯಲ್ಲದೆ ರಾಜ್ಯಪಾಲನಾಗಿ ಯೋಚಿಸಿದ್ದರೆ ಇನ್ನೂ ಉತ್ತಮವಾಗಿರುತ್ತಿತ್ತು!

"ಗೋಹತ್ಯೆಯನ್ನು ಪರಿಣಾಮಕಾರಿಯಾಗಿ ನಿಷೇಧಿಸುವ ವಿಧೇಯಕ ತಂದಿದ್ದರೆ ಉತ್ತಮವಾಗಿರುತ್ತಿತ್ತು. ಆದರೆ ಈ ವಿಧೇಯಕ ಗೋವಿನ ಜೊತೆ ಇತರ ಜಾನುವಾರುಗಳನ್ನೂ ಸೇರಿಸಿ ಗೊಂದಲಮಯಗೊಳಿಸಿದೆ."

-ರಾಜ್ಯಪಾಲ ಹಂಸರಾಜ್ ಭಾರದ್ವಜ್

ಆದರೆ ನಿಮ್ಮ ಬಂದೂಕಿನಲ್ಲಿ ಗುಂಡೇ ಇರುವುದಿಲ್ಲ!

"ಭ್ರಷ್ಟರನ್ನು ಪ್ರೋತ್ಸಾಹಿಸುವ ಮಠಾಧೀಶರನ್ನು ಗುಂಡಿಟ್ಟು ಕೊಲ್ಲಬೇಕು."

-ದೇಜಗೌ

ಒಡೆದಾಳುವ ನೀತಿಯನ್ನು ಬ್ರಿಟಿಷರು ಕಲಿತಿದ್ದೇ ಇವರಿಂದ!

"ದೇಶದ 12 ಕೋಟಿ ಮುಸ್ಲಿಮರನ್ನು ಸಂತಸಗೊಳಿಸುವ ಸಲುವಾಗಿ ಆಂಧ್ರ ಮತ್ತು ಬಂಗಾಳ ಸರ್ಕಾರ ಮುಸ್ಲಿಮರಿಗೆ ಶೇ.10ರಷ್ಟು ವಿಶೇಷ ಮೀಸಲಾತಿಯನ್ನು ನೀಡಲು ಮುಂದಾಗಿವೆ. ಇದಕ್ಕಾಗಿ ಎಸ್‌ಸಿಯಿಂದ ಶೇ.2, ಎಸ್‌ಟಿಯಿಂದ ಶೇ.3 ಮತ್ತು ಇತರ ಹಿಂದುಳಿದ ವರ್ಗಗಳಿಂದ ಶೇ.5ರಷ್ಟು ಮೀಸಲಾತಿಯನ್ನು ಕಿತ್ತುಕೊಳ್ಳಲಾಗುವುದು."

-ಪ್ರವೀಣ್ ತೊಗಾಡಿಯಾ

...ಾಮ್ರೇಡ್‌ಗಳೊಂದಿಗೆ ಹೆಜ್ಜೆ ಹಾಕುತ್ತಾ....



ಕಂಡಹಾಗೆ

ಗೌರಿ ಲಂಕೇಶ್

...ಖ್ಯಾತ ಲೇಖಕಿ ಮತ್ತು ಚಿಂತಕಿ ಅರುಂಧತಿ ರಾಯ್ ಅವರು ಇತ್ತೀಚೆಗೆ ದಂಡಕಾರಣ್ಯದ ಕಾಡುಗಳಲ್ಲಿ ಮಾವೋವಾದಿಗಳೊಂದಿಗೆ ಹಲವು ವಾರಗಳನ್ನು ಕಳೆದು, ಆ ಕುರಿತು 'ಔಟ್‌ಲುಕ್' ಪತ್ರಿಕೆಗೆ ಒಂದು ಸುದೀರ್ಘ ಲೇಖನವನ್ನು ಬರೆದಿದ್ದಾರೆ. ಭಾರತದ ಪ್ರಸ್ತುತ ಪ್ರಜಾಪ್ರಭುತ್ವ ವ್ಯವಸ್ಥೆ, ಬಡ ಆದಿವಾಸಿಗಳ ನರಕ, ಮಾವೋವಾದಿಗಳ ಬದುಕು ಕುರಿತ ಆ ಲೇಖನ ಕನ್ನಡ ಓದುಗರಿಗೂ ಸಿಗುವಂತಾಗಬೇಕು. ಆದ್ದರಿಂದ ಅದರ ಮೊದಲ ಹಲವು ಪುಟಗಳನ್ನು ಅನುವಾದಿಸಿ ಇಲ್ಲಿ ನೀಡಿದ್ದೇನೆ. ಉಳಿದ ಭಾಗಗಳನ್ನು ಬರುವ ಸಂಚಿಕೆಗಳಲ್ಲಿ ಪ್ರಕಟಿಸುತ್ತೇವೆ. ಇವತ್ತು ನಮ್ಮ ದೇಶದಲ್ಲಿ ಏನೇನಾಗುತ್ತಿದೆ ಎಂದು ಅರಿತುಕೊಳ್ಳಲು ಈ ಲೇಖನದ ಓದು ಎಲ್ಲರಿಗೂ ಅತ್ಯಗತ್ಯ ಎನಿಸುತ್ತದೆ.

...ನ್ನ ಮನೆಯ ಬಾಗಿಲ ಅಡಿಯಿಂದ ತೂರಿಸಲ್ಪಟ್ಟ ...ಮುಚ್ಚಿದ ಕವರ್‌ನಲ್ಲಿ ಟೈಪ್ ಮಾಡಿದ್ದ ಸಂಕ್ಷಿಪ್ತ ...ಶವಿದ್ದು ಭಾರತ ಎದುರಿಸುತ್ತಿರುವ 'ಅತಿ ಗಂಭೀರ ...ಕ ಭದ್ರತಾ ಭಯೋತ್ಪಾದಕ'ರೊಂದಿಗೆ ನನ್ನ ಭೇಟಿ ...ಯಾಯಿತು. ಅವರಿಂದ ಇಂತಹ ಸಂದೇಶಕ್ಕಾಗಿ ... ಹಲವು ತಿಂಗಳುಗಳಿಂದ ಕಾದಿದ್ದೆ. ಆ ಸಂದೇಶದ ... ಛತ್ತೀಸಗಢದ ದಾಂತೆವಾಡದ ಮಾ ದಾಂತೇಶ್ವರಿ ...ರದ ಎದುರು ಯಾವುದೇ ಎರಡು ದಿನಗಳಲ್ಲಿ ...ಸಲಾಗಿದ್ದ ನಾಲ್ಕು ವಿವಿಧ ಸಮಯದಲ್ಲಿ ನಾನು ...ಬೇಕಿತ್ತು. ಈ ವ್ಯವಸ್ಥೆ ಏಕೆಂದರೆ ಪ್ರಾಕೃತಿಕ ವೈಪರೀತ್ಯ ...ಪಂಕ್ಚರ್, ದಿಗ್ಬಂಧನ, ವಾಹನಗಳ ಮುಷ್ಕರ ಮತ್ತು ... ದುರಾದೃಷ್ಟ ತರಹದ ಆಕಸ್ಮಿಕಗಳನ್ನು ನಿವಾರಿಸಿ ...ಲು. ಆ ಪತ್ರದಲ್ಲಿ ಹೀಗೆ ನಮೂದಿಸಲಾಗಿತ್ತು: ...ಗಾರರು ಕ್ಯಾಮೆರ ಹೊಂದಿರಬೇಕು. ಹಣೆ ಮೇಲೆ ...ಹಚ್ಚಿಕೊಂಡಿರಬೇಕು ಮತ್ತು ಕೈಯಲ್ಲಿ ತೆಂಗಿನಕಾಯಿ ...ರಬೇಕು. ಅವರನ್ನು ಭೇಟಿ ಆಗುವವರ ತಲೆ ... ಒಂದು ಕ್ಯಾಪ್ ಇರುತ್ತದೆ ಮತ್ತು ಕೈಯಲ್ಲಿ ...'ಔಟ್‌ಲುಕ್' ಪತ್ರಿಕೆಯ ಪ್ರತಿ ಮತ್ತು ಬಾಳೆಹಣ್ಣು ...ತ್ತವೆ. ಪಾಸ್‌ವರ್ಡ್: 'ನಮಸ್ಕಾರ ಗುರೂಜಿ.'

...ಮಸ್ಕಾರ ಗುರೂಜಿ? ಭೇಟಿಯಾಗಲು ಹೋಗುತ್ತಿರು... ಮತ್ತು ಅವರನ್ನು ಭೇಟಿ ಆಗಲು ಬರುತ್ತಿರುವವರೂ ...ರೇ ಆಗಿರುತ್ತಾರೆಂಬುದು ಅವರ ನಿರೀಕ್ಷೆಯೇ ... ಯೋಚಿಸಿದೆ. ಹಾಗಾದರೆ ನಾನೊಂದು ಮೀಸೆ ...ಎಲ್ಲಿಂದಾದರೂ ಪಡೆಯಬೇಕಾಗುತ್ತದೆಯೇ ಎಂದು ...ದೆ.

...ಂತೆವಾಡವನ್ನು ವಿಭಿನ್ನ ರೀತಿಗಳಲ್ಲಿ ವಿವರಿಸ...ಬಹುದು. ಅದೊಂದು ವಿರೋಧಾಭಾಸಗಳ ಪಟ್ಟಣ. ... ರಾಜ್ಯಗಳ ಗಡಿಗಳಿಗೆ ಹೊಂದಿಕೊಂಡಿರುವ ...ಪಟ್ಟಣ ಭಾರತದ ಹೃದಯಭಾಗದಲ್ಲಿದೆ. ಈಗ ... ಯುದ್ಧದ ಕೇಂದ್ರವೂ ಆಗಿದೆ. ಇದು ಒಂದು ...ಲ್ಲಿ ಉಲ್ಟಾಪಲ್ಟಾ, ತಿರುಗಮುರುಗ ಆಗಿರುವ ...

...ಂತೆವಾಡದಲ್ಲಿ ಪೊಲೀಸರು ಮುಫ್ತಿ ಧರಿಸಿದ್ದರೆ, ...ಯುಗಾರರು ಸಮವಸ್ತ್ರ ಧರಿಸಿದ್ದಾರೆ. ಜೈಲಿನ ಮುಖ್ಯ... ಅದೇ ಜೈಲಿನಲ್ಲಿ ಬಂಧಿಯಾಗಿದ್ದರೆ, ಕೈದಿಗಳೆಲ್ಲ ...ಯಾಗಿದ್ದಾರೆ (ಎರಡು ವರ್ಷಗಳ ಹಿಂದೆ ಆ ...ಲ್ಲಿದ್ದ ಮುನ್ನೂರು ಜನ ಓಡಿಹೋದರು). ...ಾರಕ್ಕೊಳಗಾಗಿರುವ ಮಹಿಳೆಯರು ಪೊಲೀಸರ ...ದ್ದರೆ, ಅತ್ಯಾಚಾರಿಗಳು ಬಜಾರಿನಲ್ಲಿ ಭಾಷಣ ...ತ್ತಿರುತ್ತಾರೆ.

...ದಿರಾವತಿ ನದಿಯ ಆಚೆಗೆ ಮಾವೋವಾದಿಗಳ ...ಲ್ಲಿರುವ ಪ್ರದೇಶವನ್ನು ಇಲ್ಲಿನ ಪೊಲೀಸರು ...ರ' ಎಂದು ಕರೆಯುತ್ತಾರೆ. ಆ ಪ್ರದೇಶದಲ್ಲಿನ ...ಲ್ಲ ಖಾಲಿಯಾಗಿದ್ದು ಅಲ್ಲಿನ ಕಾಡುಗಳಲ್ಲಿ ಜನ ...ದ್ದಾರೆ. ಶಾಲೆಗಳಲ್ಲಿರಬೇಕಿದ್ದ ಮಕ್ಕಳು ಬೀದಿಯಲ್ಲಿ ...ತ್ತಿದ್ದಾರೆ. ಕಾಡಿನಲ್ಲಿರುವ ಸುಂದರ ಹಳ್ಳಿಗಳಲ್ಲಿನ ...ಕಟ್ಟಡಗಳು ಒಂದೋ ಛಿದ್ರವಾಗಿ ಧೂಳಿನ ...ಾಗಿವೆ ಅಥವಾ ಅವುಗಳನ್ನು ಪೊಲೀಸರು ...ಕೊಂಡಿದ್ದಾರೆ. ಈ ಕಾಡುಗಳಲ್ಲಿ ಬಿಚ್ಚಿಕೊಳ್ಳುತ್ತಿರುವ ... ಯುದ್ಧದ ಬಗ್ಗೆ ಭಾರತ ಸರ್ಕಾರಕ್ಕೆ ಒಂದೆಡೆ ...ಮೂ ಇದೆ, ಇನ್ನೊಂದೆಡೆ ನಾಚಿಕೆಯೂ ಇದೆ. ...ನ್ ಗ್ರೀನ್‌ಹಂಟ್ ಎಂಬ ಈ ಯುದ್ಧವನ್ನು ...ಘೋಷಿಸಿಯೂ ಆಗಿದೆ, ಅದನ್ನು ನಿರಾಕರಿಸಿಯೂ ... ಈ ದೇಶದ ಗೃಹಮಂತ್ರಿ (ಮತ್ತು ಯುದ್ಧದ ...ಕೂಡ) ಆಗಿರುವ ಪಿ. ಚಿದಂಬರಂ ಪ್ರಕಾರ ...ಗಿ ಈ ಯುದ್ಧ ನಡೆಯುತ್ತಿಲ್ಲವಾದರೂ ಮಾಧ್ಯಮ...ದನ್ನು ಸೃಷ್ಟಿಸಿವೆ. ಹಾಗಿದ್ದರೂ ಯುದ್ಧಕ್ಕೆಂದು ...ಮೊತ್ತದ ಹಣವನ್ನು ಎತ್ತಿಡಲಾಗಿದೆ ಮತ್ತು ... ಸೈನಿಕರನ್ನು ಸಜ್ಜುಗೊಳಿಸಲಾಗಿದೆ. ಈ ...ಗ ಮಧ್ಯಭಾರತದ ಅರಣ್ಯಗಳಲ್ಲಿದ್ದರೂ ಇದರ ... ನಮ್ಮೆಲ್ಲರ ಮೇಲೆ ಬೀರಲಿದೆ.

... ವಾಸ್ತವದಲ್ಲಿದ್ದ ಯಾರದ್ದೋ, ಯಾವುದರದ್ದೋ ಆತ್ಮವನ್ನು ನಾವು ಭೂತ ಎಂದು ಕರೆಯಬಹುದಾದರೆ, ಈ ಕಾಡುಗಳನ್ನು ಸೀಳಿಕೊಂಡು ಹೋಗಿರುವ ನಾಲ್ಕು ಪಥಗಳ ಹೆದ್ದಾರಿಯನ್ನು ಭೂತದ ವೈದೃಶ್ಯ ಎನ್ನಬಹುದು. ಯಾಕೆಂದರೆ ಬರುವ ದಿನಗಳಲ್ಲಿ ನಡೆಯಲಿರುವುದಕ್ಕೆ ಇದು ಭವಿಷ್ಯಸೂಚಿಯಂತಿದೆ.

ಕಾಡಿನಲ್ಲಿರುವ ಎದುರಾಳಿಗಳು ಎಲ್ಲ ರೀತಿಗಳಿಂದಲೂ ವಿದೃಶ ಮತ್ತು ಅಸಮಾನರಾಗಿದ್ದಾರೆ. ಒಂದೆಡೆ ಅಪಾರ ಸಂಖ್ಯೆಯಲ್ಲಿರುವ ಅರೆಸೈನಿಕ ಶಕ್ತಿಯೊಂದಿಗೆ ಹಣಬಲ, ಕ್ಷಿಪಣಿಗಳು, ಮಾಧ್ಯಮಗಳು ಮತ್ತು ತಾನು ಸೂಪರ್‌ಪವರ್ ಆಗಿ ಬೆಳೆಯುತ್ತಿರುವ ದೇಶವೆಂಬ ಮದ ಇದೆ. ಇನ್ನೊಂದೆಡೆ ತಮ್ಮ ಸಾಂಪ್ರದಾಯಿಕ ಅಸ್ತ್ರಗಳನ್ನು ಹಿಡಿದಿರುವ ಸಾಮಾನ್ಯ ಗ್ರಾಮಸ್ಥರು ಮತ್ತು ಅವರ ಬೆಂಬಲಕ್ಕೆ ನಿಂತಿರುವ ಇಲ್ಲಿಯತನಕ ಅಸಾಧಾರಣವಾದ ಹಾಗು ರಕ್ತಸಿಕ್ತ ಸಶಸ್ತ್ರ ಬಂಡಾಯವನ್ನು ಮಾಡಿಕೊಂಡು ಬಂದಿರುವ, ಸಂಘಟಿತರಾಗಿರುವ, ಸಿದ್ಧಾಂತ ಬದ್ಧ ಪ್ರೇರಣೆ ಹೊಂದಿರುವ ಮಾವೋವಾದಿ ಯೋಧರು ಇದ್ದಾರೆ. ಮಾವೋವಾದಿ ಮತ್ತು ಅರೆಸೈನಿಕ ಪಡೆಗಳು ಹಳೇ ಎದುರಾಳಿಗಳಾಗಿದ್ದು ಈ ಹಿಂದೆ ಪರಸ್ಪರರ ವಿವಿಧ ರೀತಿಯ ಯುದ್ಧಗಳನ್ನು



ಮಾವೋವಾದಿಗಳ ಕ್ಯಾಂಪ್‌ನಲ್ಲಿ ಅರುಂಧತಿ ರಾಯ್.....

ಮಾಡುತ್ತಲೇ ಬಂದಿದ್ದಾರೆ. 50 ರ ದಶಕದಲ್ಲಿ ತೆಲಂಗಾಣ 60 ಮತ್ತು 70 ರ ದಶಕಗಳಲ್ಲಿ ಪಶ್ಚಿಮ ಬಂಗಾಳ, ಬಿಹಾರ, ಆಂಧ್ರ ಪ್ರದೇಶದ ಶ್ರೀಕಾಕುಳಂ; 80 ರ ದಶಕದ ಆರಂಭದಿಂದ ಇವತ್ತಿನವರೆಗೂ ಆಂಧ್ರ ಪ್ರದೇಶ, ಬಿಹಾರ ಮತ್ತು ಮಹಾರಾಷ್ಟ್ರಗಳಲ್ಲಿ ಈ ಯುದ್ಧಗಳು ನಡೆದಿವೆ. ಪರಸ್ಪರರ ಯುದ್ಧ ತಂತ್ರಗಳು ಎರಡೂ ಕಡೆಗಳಿಗೆ ಗೊತ್ತಿದೆ. ಪರಸ್ಪರರ ಕದನ ಕೈಪಿಡಿಗಳನ್ನು ಎರಡೂ ಕಡೆಯವರು ಅಭ್ಯಸಿಸಿದ್ದಾರೆ. ಪ್ರತಿ ಬಾರಿ ಮಾವೋವಾದಿಗಳನ್ನು (ಅಥವಾ ಅವರ ಮುಂಚಿನ ಅವತಾರಗಳನ್ನು) ಸೋಲಿಸಿದಂತೆ, ಅಕ್ಷರಶಃ ನಿರ್ನಾಮ ಮಾಡಿದಂತೆ ಕಂಡುಬರುತ್ತಿತ್ತು, ಆದರೆ ಪ್ರತಿಬಾರಿ ಅವರು ಮತ್ತೆ ಉದ್ಭವಿಸಿದ್ದಾರೆ; ಇನ್ನು ಹೆಚ್ಚು ಸಂಘಟಿತರಾಗಿ, ಇನ್ನೂ ದೃಢಸಂಕಲ್ಪಿತರಾಗಿ; ಇನ್ನೂ ಹೆಚ್ಚು ಪ್ರಭಾವಶಾಲಿಗಳಾಗಿ ಎದ್ದು ಬಂದಿದ್ದಾರೆ. ಇವತ್ತು ಅವರ ಪ್ರಭಾವ ಅಪಾರ ಖನಿಜ ಸಂಪತ್ತನ್ನು ಹೊಂದಿರುವ ಛತ್ತೀಸಗಢ, ಜಾರ್ಖಂಡ್, ಒಡಿಶಾ ಮತ್ತು ಪಶ್ಚಿಮ ಬಂಗಾಳದ ಕಾಡುಗಳಲ್ಲಿ ಹರಡಿದೆ. ಈ ಕಾಡುಗಳು ಭಾರತದ ಲಕ್ಷಾಂತರ ಆದಿವಾಸಿಗಳ ಮಾತೃಭೂಮಿ ಆಗಿದ್ದರೆ, ಕಾರ್ಪೊರೇಟ್ ಜಗತ್ತಿಗೆ ಕನಸಿನ ಭೂಮಿ ಆಗಿದೆ.

ಕಾಡುಗಳಲ್ಲಿ ನಡೆಯುತ್ತಿರುವ ಈ ಯುದ್ಧವನ್ನು ಭಾರತ ಸರ್ಕಾರ ಮತ್ತು ಮಾವೋವಾದಿಗಳ ನಡುವೆ ನಡೆಯುತ್ತಿರುವ ಯುದ್ಧ ಎಂದೂ; ಹೇಗಿದ್ದರೂ ಮಾವೋವಾದಿಗಳು ಚುನಾವಣೆಗಳನ್ನು ವಂಚನೆ ಎಂದೂ, ಪಾರ್ಲಿಮೆಂಟನ್ನು ಹಂದಿಗಳ ಗೂಡು ಎಂದೂ, ಭಾರತದ ಪ್ರಭುತ್ವವನ್ನೇ ಕಿತ್ತೊಗೆಯುವ ಸಂಕಲ್ಪ ಮಾಡಿದ್ದಾರೆಂದೂ ಉದಾರವಾದಿಗಳು ಸುಲಭವಾಗಿ ನಂಬಬಹುದು. ಹಾಗೆಯೇ ಮಾವೋಗಿಂತಲೂ ಹಲವು ಶತಮಾನಗಳ ಮುಂಚೆ ನಿಂದಲೂ ಮಧ್ಯ ಭಾರತದ ಆದಿವಾಸಿಗಳು ಪ್ರತಿರೋಧದ ಇತಿಹಾಸವನ್ನೇ ಹೊಂದಿದ್ದಾರೆಂಬುದನ್ನೂ ಸುಲಭವಾಗಿ ಮರೆಯಬಹುದು. (ನಿಜವಾಗಲೂ ಅದೊಂದು ಸ್ವಯಂಸಿದ್ಧೋಕ್ತಿ; ಅವರು ಪ್ರತಿರೋಧಿಸದಿದ್ದರೆ ಇವತ್ತು ಅವರು ಅಸ್ತಿತ್ವದಲ್ಲೇ ಇರುತ್ತಿರಲಿಲ್ಲ). ಹೋಗಳು, ಓರಾನ್‌ಗಳು, ಕೋಲ್‌ಗಳು, ಸಂತಾಲರು, ಮುಂಡಾಗಳು, ಗೋಂಡ್‌ಗಳು ಹಲವಾರು ಬಾರಿ ಬ್ರಿಟಿಷರ ವಿರುದ್ಧ ಜಮೀನುದಾರರ ವಿರುದ್ಧ, ಬಡ್ಡಿ ವ್ಯಾಪಾರಿಗಳ ವಿರುದ್ಧ ದಂಗೆ ಎದ್ದಿದ್ದಾರೆ. ಪ್ರತಿಬಾರಿ ಅವರ ದಂಗೆಗಳನ್ನು ಅಮಾನುಷವಾಗಿ ಹತ್ತಿಕ್ಕಲಾಯಿತು, ಸಾವಿರಾರು ಜನ ಸಾವಿಗೀಡಾದರು, ಆದರೆ ಅವರ ಸಮುದಾಯಗಳನ್ನು ಯಾರಿಂದಲೂ ವಶಪಡಿಸಿಕೊಳ್ಳಲಾಗಿರಲಿಲ್ಲ, ಸ್ವಾತಂತ್ರ್ಯದ ನಂತರವೂ ಭುಗಿಲೆದ್ದ ಪ್ರಥಮ ಮಾವೋವಾದಿ ದಂಗೆಯ ಅಂತರಾಳದಲ್ಲೂ ಆದಿವಾಸಿಗಳೇ ಇದ್ದರು. (ಪಶ್ಚಿಮ ಬಂಗಾಳದ ನಕ್ಸಲ್‌ಬರಿ ಎಂಬ ಗ್ರಾಮದಲ್ಲಿ ಇದು ಪ್ರಾರಂಭವಾಗಿದ್ದರಿಂದ ನಕ್ಸಲೈಟ್ ಎಂಬ ಪದ ಹುಟ್ಟಿಕೊಂಡು ಈಗ ಹಲವೊಮ್ಮೆ ಮಾವೋವಾದಿ ಬದಲಾಗಿ ನಕ್ಸಲ್ ಪದವೂ ಬಳಕೆಯಲ್ಲಿದೆ). ಅಂದಿನಿಂದ ನಕ್ಸಲೈಟರ ರಾಜಕೀಯವು ಆದಿವಾಸಿಗಳ ದಂಗೆಗಳೊಂದಿಗೆ ಬಿಡಿಸಲಾಗದಂತೆ ಬೆಸೆದುಕೊಂಡಿದೆ.

ಪರಂಪರಾಗತವಾಗಿ ಪ್ರತಿರೋಧಿಸುತ್ತಲೇ ಬಂದಿರುವ ಆದಿವಾಸಿಗಳನ್ನು ಭಾರತ ಸರ್ಕಾರ ಬೇಕಂತಲೇ ದೂರವಿಟ್ಟದ್ದರಿಂದ, ಅಮುಖ್ಯವಾಗಿಸಿದ್ದರಿಂದ ಅವರು ಇವತ್ತು ಆಕ್ರೋಶಗೊಂಡಿದ್ದಾರೆ. ಭಾರತದ ಪ್ರಜಾಪ್ರಭುತ್ವಕ್ಕೆ ನೈತಿಕ ಅಡಿಪಾಯವಾಗಿರುವ ನಮ್ಮ ಸಂವಿಧಾನವನ್ನು 1950 ರಲ್ಲಿ ಪಾರ್ಲಿಮೆಂಟ್ ಅಂಗೀಕರಿಸಿತು. ಆದಿವಾಸಿಗಳ ಪಾಲಿಗೆ ಅದೊಂದು ದುರಂತಮಯ ದಿನವಾಗಿತ್ತು. ವಸಾಹತುಶಾಹಿಗಳ ನೀತಿಯನ್ನೇ ಅನುಮೋದಿಸಿದ ನಮ್ಮ ಸಂವಿಧಾನ ಆದಿವಾಸಿಗಳ ಮಾತೃಭೂಮಿಯನ್ನು ಸರ್ಕಾರಿ ಸ್ವತ್ತು ಎಂದು ಘೋಷಿಸಿ ಅದನ್ನು ತನ್ನ ಅಧೀನ ದಲ್ಲಿಟ್ಟುಕೊಂಡಿತು. ಆದರಿಂದಾಗಿ ತಮ್ಮ ಭೂಮಿಯಲ್ಲಿ ಬದುಕಿದ್ದ ಆದಿವಾಸಿಗಳ ಬದುಕನ್ನೇ ರಾತ್ರೋರಾತ್ರಿ ಅಕ್ರಮಗೊಳಿಸಿತು. ಕಾಡಿನ ಉತ್ಪನ್ನಗಳ ಮೇಲೆ ಅವರ ಸಾಂಪ್ರದಾಯಿಕ ಹಕ್ಕುಗಳನ್ನು ನಿರಾಕರಿಸಿತು. ಅವರ ಜೀವನಕ್ರಮವನ್ನೇ ಕಾನೂನುಬಾಹಿರವಾಗಿಸಿತು. ಮತದಾನದ ಹಕ್ಕನ್ನು ನೀಡಿ ಅವರ ಘನತೆ ಮತ್ತು ಬದುಕುವ ಹಕ್ಕನ್ನೇ ಕಸಿದುಕೊಂಡಿತು.

ಹೀಗೆ ಅವರನ್ನು ಸ್ಥಾನಭ್ರಷ್ಟ ಮಾಡಿದ್ದಲ್ಲದೆ ಅವರನ್ನು ದಾರಿದ್ರ್ಯದ ಸುಳಿಗೆ ಸಿಕ್ಕಿಸಿದ ಸರ್ಕಾರ ಕ್ರೂರವಾದ ಕೈಚಳಕ ಪ್ರದರ್ಶಿಸಿ ಅವರ ಬಡತನವನ್ನೇ ಅವರ ವಿರುದ್ಧ ಪ್ರಯೋಗಿಸಿತು. ಪ್ರತಿ ಬಾರಿ ದೊಡ್ಡ ಯೋಜನೆಗಳಿಗೆ-ಅದು ಡ್ಯಾಮ್‌ಗಳಿರಲಿ, ನೀರಾವರಿ ಯೋಜನೆಗಳಿರಲಿ, ಗಣಿಗಾರಿಕೆ ಇರಲಿ- ಅಪಾರ ಸಂಖ್ಯೆಯಲ್ಲಿ ಜನರನ್ನು ಒಕ್ಕಲೆಬ್ಬಿಸಬೇಕಾದಾಗ ಸರ್ಕಾರ "ಆದಿವಾಸಿಗಳನ್ನು ಮುಖ್ಯ ವಾಹಿನಿಗೆ ತರಬೇಕು", "ಅವರಿಗೂ ಆಧುನಿಕ ಅಭಿವೃದ್ಧಿಯ ಫಲ ಸಿಗಬೇಕು" ಎಂದಿತು. ಹೀಗೆ ಆಂತರಿಕವಾಗಿ ಒಕ್ಕಲೆಬ್ಬಿಸಲ್ಪಟ್ಟ ಕೋಟ್ಯಂತರ (ದೊಡ್ಡ ಡ್ಯಾಮ್‌ಗಳಿಂದಾಗಿ ಒಕ್ಕಲೆಬ್ಬಿಸಲ್ಪಟ್ಟ ಜನರೇ 30 ಮಿಲಿಯನ್‌ಗಳಿಗಿಂತ ಹೆಚ್ಚು) ಜನರಲ್ಲಿ, ಭಾರತದ 'ಅಭಿವೃದ್ಧಿ'ಗಾಗಿ ನಿರಾಶ್ರಿತರಾದವರಲ್ಲಿ, ಹೆಚ್ಚಿನವರು ಆದಿವಾಸಿಗಳೇ. ಆದ್ದರಿಂದ ಯಾವಾಗ ಸರ್ಕಾರ ಆದಿವಾಸಿಗಳ ಹಿತರಕ್ಷಣೆ ಬಗ್ಗೆ ಮಾತನಾಡಲಾರಂಭಿಸುತ್ತದ್ದೋ, ಆಗ ನಾವೆಲ್ಲ ಚಿಂತೆ ಮಾಡಬೇಕಾಗುತ್ತದೆ.

ಇತ್ತೀಚೆಗೆ ಇಂತಹ ಹಿತರಕ್ಷಣೆ ಬಗ್ಗೆ ಕಾಳಜಿ ವ್ಯಕ್ತಪಡಿಸಿರುವ ಗೃಹಮಂತ್ರಿ ಪಿ. ಚಿದಂಬರಂ ಆದಿವಾಸಿಗಳು "ಸಂಗ್ರಹಾಲಯ ಸಂಸ್ಕೃತಿಯಲ್ಲಿ" ವಾಸವಾಗಿರುವುದು ತನಗೆ ಇಷ್ಟವಿಲ್ಲ ಎಂದಿದ್ದಾರೆ. ಆದರೆ ಈತ ಹಲವಾರು ದೊಡ್ಡ ಗಣಿಗಾರಿಕಾ ಕಂಪನಿಗಳ ವಕೀಲರಾಗಿದ್ದಾಗ ಇದೇ ಆದಿವಾಸಿಗಳ ಹಿತರಕ್ಷಣೆ ಈತನಿಗೆ ಅಷ್ಟು ಮುಖ್ಯವಾಗಿರಲಿಲ್ಲ, ಆದ್ದರಿಂದ ಈತನ ಈಗಿನ ಕಾಳಜಿಗೆ ಕಾರಣವೇನು ಎಂದು ಪ್ರಶ್ನಿಸುವುದು ಸೂಕ್ತ ಎನಿಸುತ್ತದೆ.

ಕಳೆದ ಐದಾರು ವರ್ಷಗಳಲ್ಲಿ ಛತ್ತೀಸಗಢ, ಜಾರ್ಖಂಡ್, ಒಡಿಶಾ ಮತ್ತು ಪಶ್ಚಿಮ ಬಂಗಾಳದ ಸರ್ಕಾರಗಳು ಕಾರ್ಪೊರೇಟ್ ಕಂಪನಿಗಳೊಂದಿಗೆ ನೂರಾರು ಒಪ್ಪಂದಗಳಿಗೆ ಸಹಿ ಹಾಕಿವೆ. ಸ್ಟೀಲ್ ಕಾರ್ಖಾನೆ, ಉಕ್ಕಿನ ಫ್ಯಾಕ್ಟರಿ, ಅಲ್ಯೂಮಿನಿಯಂ ಸಂಸ್ಕರಣಾ ಘಟಕ, ಡ್ಯಾಮ್ ಮತ್ತು ಗಣಿಗಾರಿಕೆಗೆ ಗೌಪ್ಯವಾಗಿ ಮಾಡಿಕೊಳ್ಳಲಾಗಿರುವ ಈ ಒಪ್ಪಂದಗಳು ಹಲವಾರು ಬಿಲಿಯನ್ ಡಾಲರ್ ಮೌಲ್ಯಗಳದ್ದು. ಈ ಒಪ್ಪಂದಗಳೆಲ್ಲ ಈಗ ನಿಜವಾದ ಹಣವಾಗಿ ಪರಿವರ್ತಿತವಾಗಬೇಕಾದರೆ ಅಲ್ಲಿರುವ ಆದಿವಾಸಿಗಳನ್ನು ಹೊರದಬ್ಬಬೇಕು.

ಅದಕ್ಕೆಂದೇ ಈ ಯುದ್ಧ.

ತನ್ನನ್ನು ಪ್ರಜಾಪ್ರಭುತ್ವ ಎಂದು ಕರೆದುಕೊಳ್ಳುವ ದೇಶವೊಂದು ತನ್ನ ಗಡಿಯೊಳಗೇ ಯುದ್ಧವನ್ನು ಘೋಷಿಸಿದರೆ ಆ ಯುದ್ಧ ಹೇಗಿರುತ್ತದೆ? ಅದರ ವಿರುದ್ಧ ಪ್ರತಿರೋಧಕ್ಕೆ ಕಿಂಚಿತ್ತಾದರೂ ಅವಕಾಶವಿದೆಯೇ? ಪ್ರತಿರೋಧಿಸಬೇಕೆ? ಈ ಮಾವೋವಾದಿಗಳು ಯಾರು? ಹಳತಾದ ಸಿದ್ಧಾಂತವನ್ನು ಆದಿವಾಸಿಗಳ ಮೇಲೆ ಹೇರಿ ಅವರು ಆಶಾರಹಿತ ದಂಗೆಯಲ್ಲಿ ತೊಡಗುವಂತೆ ಪ್ರಚೋದಿಸುತ್ತಿರುವ ಹಿಂಸಾವಾದಿ ಶೂನ್ಯವಾದಿಗಳೇ ಮಾವೋವಾದಿಗಳು? ಹಿಂದಿನ ಅನುಭವಗಳಿಂದ ಅವರು ಕಲಿತಿರುವ ಪಾಠಗಳು ಎಂತಹವು? ಸಶಸ್ತ್ರ ಹೋರಾಟ ಮೂಲಭೂತವಾಗಿ ಅಪ್ರಜಾತಾಂತ್ರಿಕವೇ?

ಸರ್ಕಾರ ಮಾವೋವಾದಿಗಳ ಗುಂಡುದಾಳಿಗಳ ನಡುವೆ 'ಸಾಮಾನ್ಯ' ಆದಿವಾಸಿಗಳು ಸಿಲುಕಿಕೊಂಡಿದ್ದಾರೆ ಎಂಬ 'ಸ್ಯಾಂಡ್‌ವಿಚ್ ಥಿಯರಿ' ಅದೆಷ್ಟು ಕರಾರುವಾಕ್ಕಾದ್ದು? ಈಗ ಬಿಂಬಿಸಲ್ಪಡುತ್ತಿರುವಂತೆ 'ಮಾವೋವಾದಿಗಳು' ಮತ್ತು 'ಆದಿವಾಸಿಗಳು' ಎರಡು ಪ್ರತ್ಯೇಕ ಮತ್ತು ನಿರ್ದಿಷ್ಟ ಸಮುದಾಯಗಳೇ? ಅವರಿಬ್ಬರ ಕಾಳಜಿಗಳು ಒಮ್ಮುಖವಾಗಿವೆಯೇ? ಪರಸ್ಪರರಿಂದ ಅವರು ಏನನ್ನಾದರೂ ಕಲಿತಿದ್ದಾರೆಯೇ? ಪರಸ್ಪರರನ್ನು ಬದಲಾಯಿಸಿದ್ದಾರೆಯೇ?

ನಾನು ಹೊರಡುವ ಮುನ್ನಾ ದಿನ ನನ್ನ ಅಮ್ಮ ಅರೆನಿದ್ರೆಯಲ್ಲೇ ಫೋನ್ ಮಾಡಿದರು. ಓರ್ವ ತಾಯಿಗೆ ಇರುವ ವಿಚಿತ್ರ ಪ್ರವೃತ್ತಿಯೊಂದಿಗೆ ಆಕೆ ಹೇಳಿದರು: "ನಾನು ಯೋಚಿಸುತ್ತಿದ್ದೇನೆ, ಈ ದೇಶಕ್ಕೆ ಬೇಕಾಗಿರುವುದು ಕ್ರಾಂತಿ."

(ಮುಂದುವರೆಯುವುದು)


ಪಾಲಿಕೆ ಕಣದಲ್ಲಿ ಪಾಪಿಷ್ಠರು

ಪೀಣ್ಯ ಕೈಗಾರಿಕಾ ಪ್ರದೇಶ ವಾರ್ಡಿನ ಬಿಜೆಪಿ ಅಭ್ಯರ್ಥಿ ಜೆ. ಶ್ರೀನಿವಾಸ್‌ನ ಅಡ್ಡ ಹೆಸರೇ ಅಟ್ಯಾಕ್ ಸೀನ!

ವಾರ್ಡ್ ನಂಬರ್ 181 ಅಂದರೆ ಕುಮಾರಸ್ವಾಮಿ ಲೇಔಟಿನ ಬಿಜೆಪಿ ಅಭ್ಯರ್ಥಿ ಎಚ್. ಸುರೇಶ್ ಉರ್ಫ್ ಪಾರ್ಕ್ ಸೂರಿ ಎಂಬ ಮೀಟರ್ ಬಡ್ಡಿ ಗಿರಾಕಿ ತನಗೆ ಬಡ್ಡಿ ಕಟ್ಟದ ಆಸಾಮಿಯನ್ನು ಕಿಡ್ನಾಪ್ ಮಾಡಿ ಚಿತ್ರಹಿಂಸೆ ಕೊಟ್ಟ ಕೇಸಲ್ಲಿ ಜೈಲಿಂದ ಬಂದೇ ಎರಡು ತಿಂಗಳಾಗಿಲ್ಲ. ನಾಗಪುರ ವಾರ್ಡಿಗೆ ಬಿಜೆಪಿ ಅಭ್ಯರ್ಥಿಯಾಗಿರುವ ಪಾತಕಿಯ ಹೆಸರು ನಾಯಿ ಹರೀಶ. ಸಂಪಂಗಿರಾಮನಗರದ ಬಿಜೆಪಿ ಅಭ್ಯರ್ಥಿ ಗೋಪಿ ಮಂತ್ರಿ ಕಟ್ಟಾನ ಮಗ ಜಗ್ಗನ ಗ್ಯಾಂಗಿನ ಖತರ್‌ನಾಕ್ ನೆಲಕಂಟಕ ಮತ್ತು ಬಡರೈತರ ಪಾಲಿಗೆ ಸಿಂಹಸ್ವಪ್ನ.


ಕಟ್ಟಾ ಜಗ್ಗ


ಕಳ್ಳಭಟ್ಟಿ ರಾಣಿ ಮಾರಿಮುತ್ತು, ಹಳೇ ಕಿರಾತಕ ಬಾಂಬ್ ನಾಗ, ಜೋಪಡಿ ರಾಜೇಂದ್ರನ ಹಂತಕ ಕದಿರೇಶ, ಸೈಲೆಂಟ್ ಸುನೀಲನ ರೈಟ್‌ಹ್ಯಾಂಡ್ ಮಾರ್ಕೆಟ್ ವೇಡಿ, ಈತನಿಗೆ ಎದುರಾಗಿ ಮತ್ತೊಬ್ಬ ರೌಡಿ ಪ್ರವೀಣನ ಪತ್ನಿ, ಚಾಮರಾಜಪೇಟೆಯ ಜೆಡಿಎಸ್ ಅಭ್ಯರ್ಥಿಯಾಗಿ ರಾಯಪುರಂನ ಸೈಲೆಂಟ್ ಕ್ರಿಮಿನಲ್ ಶಿವು ಅಲಿಯಾಸ್ ಶಿವಕುಮಾರ್; ಹೀಗೆ ಸಂತೆಗೆ ಮುನ್ನ ಗಂಟುಕಳ್ಳರು ಜಮೆಯಾದಂತೆ, ಮರ್ಡರ್ ಕೇಸಿನಲ್ಲಿ ಕಂಬಿ ಎಣಿಸಿ ಬಂದವರು, ದೈತ್ಯ ಪಾತಕಿಗಳ ಶಿಷ್ಯರು, ರೌಡಿ ಷೀಟರುಗಳು, ವಂಚಕರು, ನೆಲಕಂಟಕರು, ಮೀಟರ್ ಬಡ್ಡಿ ಪೀಡಕರು; ಹೀಗೆ ಪಾಲಿಕೆಯ ನೂರಾ ತೊಂಬತ್ತೆಂಟು ವಾರ್ಡುಗಳ ಪೈಕಿ ಅರ್ಧಕ್ಕರ್ಧ ಅಭ್ಯರ್ಥಿಗಳೆಲ್ಲ ಇಂಥ ಭಯಾನಕ ಹಿನ್ನೆಲೆಯವರೇ.


ಕದಿರೇಶ್

ಮಾರ್ಕೆಟ್ ವೇಡಿ!

ಅಲ್ರೀ... ಇವರೆಲ್ಲ ಗೆದ್ದು ಕೌನ್ಸಿಲರ್‌ಗಳಾದ್ರೆ ಮುಂದೊಂದು ದಿನಂಪ್ರತಿ ಪೊಲೀಸ್ ಠಾಣೆಯಲ್ಲೂ ಲಾಕಪ್ ಇರೋ ಹಾಗೆ ಪಾಲಿಕೆ ಕಚೇರಿಯಲ್ಲೇ ಒಂದು ಕ್ರಿಮಿನಲ್ಸ್ ಸೆಲ್ ಕಟ್ಟಿಸಬೇಕಲ್ರೀ....!

ಇದು ಜೇಪಿನಗರ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಎಸ್.ಕೆ. ಉಮೇಶ್ ರೋಸತ್ತು ಹೇಳಿದ ಮಾತು. ಉಮೇಶ್ ಕಲಾಸಿಪಾಳ್ಯದ ಇನ್ಸ್‌ಪೆಕ್ಟರ್ ಆಗಿದ್ದಾಗ ರೌಡಿ ಪ್ರವೀಣ ಹಾಕುತ್ತಿದ್ದ ಕಟೌಟ್‌ಗಳನ್ನೆಲ್ಲ ಕಿತ್ತು ವಿಕಾರಗೊಳಿಸುತ್ತಿದ್ದರು. ಕಾರಣ ರೌಡಿಯೊಬ್ಬ ಮುಂದೊಮ್ಮೆ ರಾಜಕಾರಣಿಯಾಗಿ ಚಾಲ್ತಿಗೆ ಬರದಿರಲಿ ಎಂದು. ಅದೇ ಕಲಾಸಿಪಾಳ್ಯದ ಮತ್ತೊಬ್ಬ ರೌಡಿ ಸೈಲೆಂಟ್ ಸುನೀಲನ ಬಂಟ ಮಾರ್ಕೆಟ್ ವೇಡಿಯನ್ನು ತಂದು ರುಬ್ಬಿ ಜೈಲಿಗೆ ಹಾಕಿದ್ದರು. ಸುನೀಲನ ಜೊತೆಯಲ್ಲಿ ಬೆಕ್ಕಿನ ಕಣ್ ರಾಜೇಂದ್ರನ ಕೊಲೆ ಕೇಸಿನಲ್ಲಿ ಪ್ರಮುಖ ಆರೋಪಿಯಾಗಿ ಜೈಲಿನಲ್ಲಿದ್ದವನು ಮಾರ್ಕೆಟ್ ವೇಡಿ. ಮೊನ್ನೆಯಷ್ಟೇ ಬುಲೆಟ್ ರವಿ ಕೊಲೆ ಕೇಸಿನಲ್ಲಿ ಜೈಲು ಕಂಡವನು.


ಜಯಪ್ಪರೆಡ್ಡಿ


ಈಗ ಇದೇ ಮಾರ್ಕೆಟ್ ವೇಡಿ ಕಲಾಸಿಪಾಳ್ಯದ ರಾಮಣ್ಣ ಗಾರ್ಡನ್ನಿನ ಪಕ್ಷೇತರ ಅಭ್ಯರ್ಥಿ!

ವಿಕಟ ಹೇಗಿದೆಯೆಂದರೆ ಬರೋಬ್ಬರಿ ನೂರು ಮಂದಿ ರೌಡಿಗಳ ಹಿಂಡು ಕಟ್ಟಿಕೊಂಡು ವೇಡಿ ಮನೆಮನೆಗೂ ಹೋಗಿ ಓಟು ಕೇಳುತ್ತಿದ್ದಾನೆ. ಚಾಮರಾಜಪೇಟೆಯ ಮತ್ತೊಬ್ಬ ಪಾತಕಿ ಮಾಹಿನ್ ಗ್ಯಾಂಗ್ ಕೂಡ ವೇಡಿಯ ಬೆನ್ನಿಗೆ ನಿಂತಿದೆ. ಓಟು ಕೇಳಲು ಬಂದ ರೌಡಿ ಪಡೆಯನ್ನು ಕಂಡಿದ್ದೇ ಕೆ.ಎಸ್. ಗಾರ್ಡನ್, ರಾಮಣ್ಣ ಗಾರ್ಡನ್ ಮತ್ತು ವಿನೋಬಾ ನಗರ ಸ್ಲಮ್ಮುಗಳ ಹೆಂಗಸರೆಲ್ಲ ಕಿಟಕಿ-ಬಾಗಿಲು ಮುಚ್ಚಿಕೊಳ್ಳುತ್ತಾರೆ!

ಇದು ಕೇವಲ ರಾಮಣ್ಣ ಗಾರ್ಡನ್ ವಾರ್ಡಿನ ಕತೆಯಷ್ಟೇ ಅಲ್ಲ. ಪಕ್ಕದ ಆಂಜನಪ್ಪ ಗಾರ್ಡನ್ನಿಗೆ ಬಿಜೆಪಿ ಅಭ್ಯರ್ಥಿಯಾಗಿರುವ ರೌಡಿ ಕದಿರೇಶನ ಗ್ಯಾಂಗ್ ಓಟು ಕೇಳಲೆಂದು ಬಂದ ಕಾಂಗ್ರೆಸ್ ಅಭ್ಯರ್ಥಿ ಶ್ರೀನಿವಾಸ್ ತಂಡದ ಮೇಲೆ ನಡುರಸ್ತೆಯಲ್ಲೇ ಅಟ್ಯಾಕ್ ಮಾಡಿದೆ. ಅಲ್ರಪ್ಪಾ... ಕನಿಷ್ಠ ಓಟು ಕೇಳೋದಕ್ಕಾದ್ರೂ ಅವಕಾಶ ಕೊಡ್ರಪ್ಪಾ... ಎಂದು ಶ್ರೀನಿವಾಸ್ ಗೋಗರೆಯುತ್ತಿದ್ದರೆ; ತನ್ನ ಪಟಾಲಂ ಸಮೇತ ಪ್ರತ್ಯಕ್ಷನಾದ ಕದಿರೇಶ 'ನಾನೇನಾದ್ರೂ ಗೆದ್ದಿಲ್ಲ ಅಂದ್ರೆ..... ರಿಸಲ್ಟ್ ದಿನಾನೇ ನಿನ್ನನ್ನ ಮರ್ಡರ್ ಮಾಡ್ತೀನಿ.....!' ಎಂದು ಪೊಲೀಸರೆದುರೇ ಬೆದರಿಕೆ ಹಾಕಿದ್ದಾನೆ.

ಕ್ರಿಮಿನಲ್ ಜಯಪ್ಪ ರೆಡ್ಡಿ

ಒಂದಲ್ಲ ಮೂರು ಕೊಲೆ ಕೇಸುಗಳಲ್ಲಿದ್ದ ಕದಿರೇಶನಿಗೆ ಬಿಜೆಪಿ ಸಂಸದ ಪಿ.ಸಿ. ಮೋಹನ್ ತಮ್ಮ ಪಕ್ಷದ ಟಿಕೆಟ್ ಕೊಡಿಸುತ್ತಾರೆಂದರೆ, ಕದಿರೇಶನನ್ನು ದೂರಿ ಏನು ಪ್ರಯೋಜನ?


ಅಟ್ಯಾಕ್‌ಸೀನ

ಬೇರೆಲ್ಲ ಪಕ್ಷಗಳಿಗೆ ಹೋಲಿಸಿದರೆ ಆಳುವ ಬಿಜೆಪಿಯೇ ಈ ಬಾರಿ ಹೆಚ್ಚು ಕ್ರಿಮಿನಲ್‌ಗಳಿಗೆ ಟಿಕೆಟ್ ಕೊಟ್ಟಿದೆ. ಅದಕ್ಕೊಂದು ತಾಜಾ ಉದಾಹರಣೆಯಂತಿದ್ದರೆ ಅದು ಹೆಬ್ಬಾಳ ವಾರ್ಡಿನ ಬಿಜೆಪಿ ಅಭ್ಯರ್ಥಿ ಜಯಪ್ಪರೆಡ್ಡಿ. ದಲಿತ ನಾಯಕ ಮುನಿಕೃಷ್ಣರನ್ನು ಬೀದಿಗೆ ಹಾಕಿ ಕ್ರಿಮಿನಲ್ ಜಯಪ್ಪ ರೆಡ್ಡಿಗೆ ಬಿಜೆಪಿ ಟಿಕೆಟ್ ಕೊಡಿಸಿದ ಮಂತ್ರಿ ಕಟ್ಟಾಗೆ ಆತನ ಕ್ರಿಮಿನಲ್ ಹಿನ್ನೆಲೆ ಗೊತ್ತಿಲ್ಲವೆಂದಲ್ಲ. ಜಯಪ್ಪ ರೆಡ್ಡಿ ಬೆಂಗಳೂರು ಕಂಡ ಹಳೇ ಕ್ರಿಮಿನಲ್. ಹತ ರೌಡಿ ಕೊತ್ವಾಲ್ ರಾಮಚಂದ್ರ ಬದುಕಿದ್ದಷ್ಟೂ ಕಾಲ ಆತ ಪೊಲೀಸರಿಂದ ತಲೆ ಮರೆಸಿಕೊಳ್ಳಲು ನೆರವಾಗುತ್ತಿದ್ದವನು ಜಯಪ್ಪ ರೆಡ್ಡಿ. ನಿನ್ನೆಮೊನ್ನೆಯ ತನಕ ಹೆಬ್ಬಾಳ ಪೊಲೀಸ್ ಠಾಣೆಯಲ್ಲಿ ಆತನ ರೌಡಿ ಷೀಟಿತ್ತು. ಒಂದಲ್ಲ ಎರಡು ಕೊಲೆ ಕೇಸಲ್ಲಿ ಜಯಪ್ಪ ರೆಡ್ಡಿ ಜೈಲು ಕಂಡಿದ್ದ.

ಇಂಥ ಪಾತಕಿಯನ್ನು ಬಳಸಿಕೊಂಡೇ ದೇವನಹಳ್ಳಿ ಏರ್‌ಪೋರ್ಟ್ ಹಿಂಭಾಗದ ಬಂಡಿಕೊಡಿಗೇಹಳ್ಳಿಯ ಬಡ ದಲಿತರನ್ನು ಬೆದರಿಸಿ ಭೂಮಿ ನುಂಗಿದ್ದು ಮಂತ್ರಿ ಕಟ್ಟಾ ನಾಯ್ಡು. ಕಟ್ಟಾನನ್ನು ಬೆನ್ನಿಗಿಟ್ಟುಕೊಂಡೇ ಹೆಬ್ಬಾಳ-ನಾಗವಾರ ರಿಂಗ್‌ರೋಡ್ ಪಾಸಲೆಯಲ್ಲಿ ಕಂಡಾಪಟ್ಟೆ ಮುಗ್ಧರ ಸೈಟಿಗೆ ಕಾಂಪೌಂಡ್ ಎಬ್ಬಿಸಿದ. ಈಗ ಆತನನ್ನೇ ಹೆಬ್ಬಾಳದ ಬಿಜೆಪಿ ಕೌನ್ಸಿಲರ್ ಮಾಡಲು ಕಟ್ಟಾ ಆಣೆಯಾಗಿದ್ದಾರೆ. ಇಂಥ ಕ್ರಿಮಿನಲ್ ಪರ ಪ್ರಚಾರ ಮಾಡಬೇಕಲ್ಲ ಎಂದು ಲೋಕಲ್ ಬಿಜೆಪಿ ಕಾರ್ಯಕರ್ತರೆಲ್ಲ ಹಣೆ ಹಣೆ ಚಚ್ಚಿಕೊಳ್ಳುತ್ತಿದ್ದಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 198 ವಾರ್ಡುಗಳಲ್ಲಿ ವಿವಿಧ ಪಕ್ಷಗಳ, ಸ್ಪರ್ಧಿಗಳ ನಡುವೆ ಹಣಾಹಣಿ ನಡೆಯುತ್ತಿದೆ. ಅವರುಗಳಲ್ಲಿ ಯಾರು ಕ್ರಿಮಿನಲ್‌ಗಳು, ಯಾರು ಜನಪರರು, ಯಾರು ಡಮ್ಮಿಗಳು ಎಂದು ವಿಶ್ಲೇಷಿಸುವ ನಿಷ್ಪಕ್ಷಪಾತವಾಗಿ ತಿಳಿಸುವ ವರದಿಗಳು ಇಲ್ಲಿವೆ. ಬೆಂಗಳೂರು ಉತ್ತಮ ಅಭ್ಯರ್ಥಿಗಳನ್ನು ಆರಿಸಲಿ ಎಂಬ ಆಕಾಂಕ್ಷೆ ನಮ್ಮದು.

ಕೆಂಪಾಪುರ ಅಗ್ರಹಾರ


ಚಳವಳಿಗಾರ ಶಿವರಾಮ್‌ಗೆ ಸೋಮಣ್ಣನ ಗೂಟ

ವಾರ್ಡ್ ವಾರ್ BBMP

ಕೆಂಪಾಪುರ ಅಗ್ರಹಾರದ ಮಾಜಿ ಕೌನ್ಸಿಲರ್ ಶಿವರಾಮ್ ಎದೆಬಡಿದುಕೊಂಡು ಅಳುತ್ತಿದ್ದ ದೃಶ್ಯ ಎಂಥವರ ಕರುಳನ್ನೂ ಕಿವುಚುವಂತಿತ್ತು-


"ಸೋಮಣ್ಣ ನನ್ನನ್ನ ಹಾಳು ಮಾಡಿಬಿಟ್ಟ. ಅವನ್ನ ನಂಬಿಕೊಂಡು ಕಾಂಗ್ರೆಸ್ ಬಿಟ್ಟುಬಂದೆ. ಕೈಲಿದ್ದ ದುಡ್ಡೆಲ್ಲಾ ಖರ್ಚು ಮಾಡಿಕೊಂಡೆ. ಕಾಂಗ್ರೆಸ್ಸಲ್ಲೇ ಇದ್ದಿದ್ದರೆ ಲೇಔಟ್ ಕೃಷ್ಣಪ್ಪ ನನ್ನ ಕೈ ಬಿಡ್ತಾ ಇದ್ರಾ? ಸೋಮಣ್ಣನ್ನ ನಂಬಿದ್ದಕ್ಕೆ ನನಗೆ ಶಿಕ್ಷೆಯಾಗಲೇಬೇಕು ಬಿಡಿ.....!"

ಹಾಗೆಂದು ಕೆಂಪಾಪುರ ಅಗ್ರಹಾರದ ನಾಲ್ಕು ಕಂಬ ಸರ್ಕಲ್ಲಿನಲ್ಲಿ ನಿಂತು ಕಣ್ಣೊರೆಸಿಕೊಂಡ ಶಿವರಾಮ್‌ಗೆ ಸೋಮಣ್ಣನ ರಣತಂತ್ರ ಎಲ್ಲಿ ಅರ್ಥವಾಗಬೇಕು? ಕೇವಲ ಶಿವರಾಮ್ ಮಾತ್ರವಲ್ಲ; ಸೋಮಣ್ಣನ ಬಲಗೈ ಬಂಟನಂತಿದ್ದ ಮಾಜಿ ಉಪಮೇಯರ್ ಬಿ.ಎಸ್.ಪುಟ್ಟರಾಜುಗೇ ಬಿಜೆಪಿ ಟಿಕೆಟ್ ಕೊಟ್ಟಿಲ್ಲ. ಸೋಮಣ್ಣನ ಮನೆಮಗನಂತಿದ್ದ ಖದೀಮ ವಿಶ್ವನಾಥಗೌಡನೇ ತನಗೆ ಬಿಜೆಪಿ ಟಿಕೆಟ್ ಕೊಟ್ಟಿಲ್ಲ ಎಂದು ರಾಜ್‌ಕುಮಾರ್ ವಾರ್ಡಿಗೆ ಪಕ್ಷೇತರನಾಗಿ ನಾಮಪತ್ರ ಸಲ್ಲಿಸಬೇಕಾಯ್ತು. ಇದೇ ವಾರ್ಡಿಗಾಗಿ ರಾಗಿಮಿಷನ್ ಕಿಟ್ಟಿಯೂ ಸೋಮಣ್ಣ ಸೇವೆಗೆ ನಿಂತಿದ್ದ. ಕನಿಷ್ಠ ಹಂಪಿನಗರ ವಾರ್ಡಿಗೆ ಸೋಮಣ್ಣನ ಮತ್ತೊಬ್ಬ ಶಿಷ್ಯ ಟ್ರಾವಲ್ಸ್ ಆನಂದನಿಗೆ ಬಿಜೆಪಿ ಟಿಕೆಟ್ ಸಿಗಬೇಕಿತ್ತು. ಸದ್ಯ ಆನಂದನೂ ಸೋಮಣ್ಣನ ವಿರುದ್ಧ ಬಂಡೆದ್ದು ಹಂಪಿನಗರದಿಂದ ಪಕ್ಷೇತರನಾಗಿ ನಿಲ್ಲಬೇಕಾಯ್ತು.



ಇದರರ್ಥ ಯಾರೆಲ್ಲ ತನ್ನನ್ನು ಆವತ್ತಿನಿಂದ ಆರಾಧಿಸಿಕೊಂಡು ಬಂದರೋ ಅವರೆಲ್ಲರನ್ನೂ ಸೋಮಣ್ಣ ನಡುನೀರಿನಲ್ಲಿ ಕೈಬಿಟ್ಟಿದ್ದಾನೆ. ಆದರೆ ಕೆಂಪಾಪುರ ಅಗ್ರಹಾರದ ಮಾಜಿ ಕೌನ್ಸಿಲರ್ ಶಿವರಾಮ್ ಕತೆಯೇ ಬೇರೆ.

ಶಿವರಾಮ್ ಹುಟ್ಟಾ ಕನ್ನಡ ಪರ ಹೋರಾಟಗಾರ. ಪಕ್ಕಾ ರಾಜ್‌ಕುಮಾರ್ ಅಭಿಮಾನಿ. 1991 ರಲ್ಲೇ ವಾಟಾಳ್ ಪಕ್ಷದಿಂದ ನಿಂತು ನಾಲ್ಕು ಸಾವಿರಕ್ಕೂ ಅಧಿಕ ಮತಗಳನ್ನು ಗಿಟ್ಟಿಸಿದ ಶಿವರಾಮ್ ತಾಕತ್ತನ್ನು ಕಂಡೇ ಬಿಜೆಪಿ ಗಾಳ ಹಾಕಿತ್ತು. ಮುಂದೆ 1996 ರ ಪಾಲಿಕೆ ಚುನಾವಣೆ ಹೊತ್ತಿಗೆ ಕೆಂಪಾಪುರ ಅಗ್ರಹಾರ ಮಹಿಳಾ ಮೀಸಲಿಗೊಳಪಟ್ಟಿದ್ದರಿಂದ ತನ್ನ ಪತ್ನಿ ಭಾರತಿ ಶಿವರಾಮ್‌ರನ್ನು ಬಿಜೆಪಿಯಿಂದ ನಿಲ್ಲಿಸಿದ ಶಿವರಾಮ್ 8 ಸಾವಿರದಷ್ಟು ಮತಗಳ ಅಂತರದಿಂದ ಗೆದ್ದುಬಿಟ್ಟ.


ಶಿವರಾಮ್

ಜನ್ಮತಃ ಹೋರಾಟಗಾರ ಶಿವರಾಮ್‌ಗೆ ಬಿಜೆಪಿಯ ಕುತಂತ್ರ ಅರ್ಥವಾಗುವ ಹೊತ್ತಿಗೆ ಕಾಲ ಮಿಂಚಿತ್ತು. ಬಿಜೆಪಿಗೆ ಗುಡ್‌ಬೈ ಹೇಳಿದ್ದೇ ಕಾಂಗ್ರೆಸ್ ಸೇರಿದ ಶಿವರಾಮ್ 2001 ರ ಪಾಲಿಕೆ ಚುನಾವಣೆಯಲ್ಲಿ ಇನ್ನೇನು ಗೆದ್ದೇಬಿಟ್ಟರೆಂಬ ಪರಿಸ್ಥಿತಿಯಿತ್ತು. ಮತದಾನದ ಬೂತ್‌ನಲ್ಲಿ ಗಲಭೆಯಾಗಿ ಯಾವುದೋ ಬೂತ್‌ಗೆ ಮರುಮತದಾನವಾದ ಫಲವಾಗಿ ಶಿವರಾಮ್ ಕೇವಲ 54 ಮತಗಳಿಂದ ಸೋತುಬಿಟ್ಟರು. ಆವತ್ತು ಪತ್ನಿಯ ಬದಲಿಗೆ ತಾನೇ ನಿಂತಿದ್ದ ಶಿವರಾಮ್ ಗೆದ್ದಿದ್ದರೆ ಏನಾಗುತ್ತಿತ್ತೋ!

ಗಲಭೆ ಮತ್ತು ಮರುಮತದಾನದ ಫಲವಾಗಿ ಜೆಡಿಎಸ್‌ನ ದುಂಡೇಗೌಡ ಗೆದ್ದ. ಅಲ್ಲಿಂದ ಶುರುವಾದ ಶಿವರಾಮ್ ದೌರ್ಭಾಗ್ಯ ಕೊನೆಗೆ ಸೋಮಣ್ಣನ ರೂಪದಲ್ಲೇ ಮುಕ್ತಾಯವಾಗಬೇಕಿತ್ತೇನೋ. ಆವತ್ತು ಸೋತ ಶಿವರಾಮ್ ಬಹುಶಃ ಕಾಂಗ್ರೆಸ್ಸಿನಲ್ಲೇ ಉಳಿದಿದ್ದರೆ ಈ ಗತಿ ಬರುತ್ತಿರಲಿಲ್ಲ. ದುರಾಶೆ ಬಿಡಬೇಕಲ್ಲ? ಮೊನ್ನೆಯಷ್ಟೇ ಕಾಂಗ್ರೆಸ್ ತೊರೆದು ಸೋಮಣ್ಣ ಬಿಜೆಪಿಗೆ ಸೇರ್ಪಡೆಯಾದಾಗ ಶಿವರಾಮ್ ಯಾಮಾರಿಬಿಟ್ಟರು.

ಅಣ್ಣಾ... ನೀನು ನನ್ನ ತಮ್ಮಾ ಇದ್ದ ಹಾಗೆ. ನಿನ್ನ ಬಿಟ್ಟರೆ ಕೆಂಪಾಪುರಕ್ಕೆ ಬೇರೆ ಯಾರಣ್ಣಾ ಇದ್ದಾರೆ? ನಿನ್ನನ್ನು ಮತ್ತೆ ಕೌನ್ಸಿಲರ್ ಮಾಡೋ ವಿಷಯ ನನಗೆ ಬಿಡಣ್ಣಾ.... ಎಂದಿದ್ದ ಸೋಮಣ್ಣನ ಮಾತನ್ನು ಶಿವರಾಮ್ ನಂಬಿಬಿಟ್ಟ. ಹಿಂದೆಮುಂದೆ ನೋಡದೆ ಲೇಔಟ್ ಕೃಷ್ಣಪ್ಪನವರನ್ನು ಬಿಟ್ಟು ಬಿಜೆಪಿಗೆ ನಡೆದೇ ಬಿಟ್ಟರು ಶಿವರಾಮ್. ತಾನೆಂಥಾ ಹಳ್ಳಕ್ಕೆ ಬೀಳುತ್ತಿದ್ದೇನೆಂಬುದು ಶಿವರಾಮ್‌ಗೆಲ್ಲಿ ಗೊತ್ತಾಗಬೇಕು?


ಭಾರತಿ ಶಿವರಾಮ್

ತಾನೇ ಕೆಂಪಾಪುರ ಅಗ್ರಹಾರದ ಮುಂದಿನ ಕೌನ್ಸಿಲರ್ ಎಂದು ಸೋಮಣ್ಣನ ಫೋಟೋ ಹಾಕಿ ಬ್ಯಾನರ್ ಕಟ್ಟಿದ್ದೇನು, ಫ್ಲೆಕ್ಸ್ ಹಾಕಿಸಿದ್ದೇನು, ಕರಪತ್ರ, ಸ್ಟಿಕ್ಕರ್, ಹಂಚಿದ್ದೇ ಹಂಚಿದ್ದು! ತಾನಲ್ಲದೇ ಬಿಜೆಪಿಗೆ ಬೇರೆ ಯಾರಿದ್ದಾರೆ ಎಂದೇ ಲೆಕ್ಕ ಹಾಕಿದ್ದ ಶಿವರಾಮ್ ನಿರೀಕ್ಷೆ ಹುಸಿಯಾಗಿದ್ದು ಮಾರ್ಚ್ 12 ರಾತ್ರಿ. ಆತನಕ ನಿನಗೆ 'ಬಿ' ಫಾರ್ಮ್ ಕೊಡ್ತೀನಿ ಎನ್ನುತ್ತಿದ್ದ ಸೋಮಣ್ಣ ಕೆಂಪಾಪುರ ಅಗ್ರಹಾರದ ತನ್ನ ಪಟ್ಟ ಶಿಷ್ಯ ಚಿಕ್ಕಾ ಸುರೇಶ್‌ನ ಪತ್ನಿ ಗೀತಾರಿಗೆ 'ಬಿ' ಫಾರಂ ಕೊಟ್ಟುಬಿಟ್ಟ.

ಶಿವರಾಮ್‌ಗೆ ವಾಸ್ತವ ಗೊತ್ತಾಗುವ ಹೊತ್ತಿಗೆ ಕಾಲ ಮಿಂಚಿತ್ತು. ವಿಧಿಯಿಲ್ಲದೇ ಪಕ್ಷೇತರ ಅಭ್ಯರ್ಥಿಯಾಗಿ ಕೆಂಪಾಪುರ ಅಗ್ರಹಾರಕ್ಕೆ ನಾಮಪತ್ರ ಸಲ್ಲಿಸಿದ ಶಿವರಾಮ್ ಎದೆಬಡಿದುಕೊಂಡು ಅತ್ತಿದ್ದೇ ಬಂತು. ಶಿವರಾಮ್‌ಗೆ ಬಿಜೆಪಿ ಟಿಕೆಟ್ ಕೊಡುವುದು ಸೋಮಣ್ಣನಿಗಿಂತಲೂ ಆತನ ಬಲಗೈ ಬಂಟ ಮಾಜಿ ಕೌನ್ಸಿಲರ್ ರವೀಂದ್ರನಿಗೆ ಇಷ್ಟವಿರಲಿಲ್ಲ. ನಾಯಕರಾದ ಮುಕುಡಪ್ಪನವರನ್ನು ರವೀಂದ್ರನೇ ಪಳಗಿಸಿಬಿಟ್ಟಿದ್ದ. ಎಲ್ಲಕ್ಕೂ ಮಿಗಿಲಾಗಿ ಅನಂತಕುಮಾರ್ ಚೇಲಾ ಟೈಲರ್ ಬಸವರಾಜು ಶಿವರಾಮ್‌ಗೆ ಟಿಕೆಟ್ ಕೊಡದಂತೆ ಬಿಜೆಪಿ ವಲಯದಲ್ಲೇ ಮಸಲತ್ತು ನಡೆಸಿದ್ದ. ಗಾಡಿ ಬಸವಣ್ಣ ಮತ್ತು ಪ್ರಭು ಥರದ ಲೋಕಲ್ ಕುರುಬರ ಲೀಡರುಗಳೂ ಶಿವರಾಮ್ ಕೈಹಿಡಿಯಲಿಲ್ಲ.

ಅದು ಸೋಮಣ್ಣನ ಗೂಟದ ಶೈಲಿ. ಬುಡಕ್ಕೆ ಚುಚ್ಚುವ ತನಕ ಗೊತ್ತೇ ಆಗುವುದಿಲ್ಲ. ಸದ್ಯ ಶಿವರಾಮ್ ಹೊಸಳ್ಳಿಯ ಪಕ್ಷೇತರ ಅಭ್ಯರ್ಥಿ. ಸಾಲದ್ದಕ್ಕೆ ಕೆಂಪಾಪುರ ಅಗ್ರಹಾರದಿಂದ ತಮ್ಮ ಪತ್ನಿ ಭಾರತಿಯವರನ್ನು ಪಕ್ಷೇತರರಾಗಿ ನಿಲ್ಲಿಸಿದ್ದಾರೆ. ಮತ್ತೆ ಕಾಂಗ್ರೆಸ್ಸಿಗೆ ಹೋಗುವಂತಿಲ್ಲ. ಇದ್ದ ಬಿಜೆಪಿ ಕೈಹಿಡಿಯಲಿಲ್ಲ. ಇದು ಒಬ್ಬ ಶಿವರಾಮ್ ಪಾಡಷ್ಟೇ ಅಲ್ಲ. ಹಂಪಿನಗರದ ಮೇಲೆ ಕಣ್ಣಿಟ್ಟಿದ್ದ ಟ್ರಾವಲ್ಸ್ ಆನಂದ, ಹೊಸಳ್ಳಿಗೆ ಅಭ್ಯರ್ಥಿಯಾಗಬೇಕಿದ್ದ ಶಾಂತಣ್ಣ, ಮಾರೇನಹಳ್ಳಿಯ ಪಿಳ್ಳರಾಜು, ದೊಡ್ಡ ಸೋಮೇಗೌಡ, ವಿಶ್ವನಾಥ ಗೌಡ, ಶಿವಪ್ಪ ಶಿಷ್ಯ ನಾರಾಯಣ, ಪುಟ್ಟರಾಜು ಹೀಗೆ ಯಾರೆಲ್ಲ ಸೋಮಣ್ಣನನ್ನು ನಂಬಿದ್ದರೋ ಅವರೆಲ್ಲರನ್ನೂ ಒಂದೇ ಏಟಿಗೆ ನಿವಾಳಿಸಿ ಎಸೆದಿದ್ದಾನೆ ಸೋಮಣ್ಣ!

ಬಹುಶಃ ಹಳಬರನ್ನೆಲ್ಲ ಕೈಬಿಟ್ಟು ಹೊಸ ಹುಡುಗರ ಟೀಮ್ ಕಟ್ಟುವುದು ಸೋಮಣ್ಣನ ಹುನ್ನಾರವೆ? ಅಥವಾ ಸೋಮಣ್ಣನ ಟೈಮೇ ಸರಿಯಿಲ್ಲವೆ?

• ರಾ. ಸೋಮನಾಥ್

ಅಟ್ಯಾಕ್ ಸೀನ

…ಂಥದ್ದೇ ಹಿನ್ನೆಲೆಯವನು ಪೀಣ್ಯ ಕೈಗಾರಿಕಾ ಪ್ರದೇಶ …ನ ಬಿಜೆಪಿ ಅಭ್ಯರ್ಥಿ ಜಿ. ಶ್ರೀನಿವಾಸ್ ಅಲಿಯಾಸ್ …ಕ್ ಸೀನ. ಲಗ್ಗೆರೆ ಮುಖ್ಯರಸ್ತೆಯ ಅಮೋಘ …ಫುಡ್ ಎದುರು ಜೆ.ವಿ.ಎಸ್. ರಿಯಲ್ ಎಸ್ಟೇಟ್ … ಮತ್ತು ಲ್ಯಾಂಡ್ ಡೆವಲಪರ್ಸ್ ಎಂಬ ಅಡ್ಡೆ ತೆರೆದು … ಜಿ. ಶ್ರೀನಿವಾಸ್ ಅಲಿಯಾಸ್ ಅಟ್ಯಾಕ್‌ಸೀನನ ವಿರುದ್ಧ …ಯೆಂದರೂ ಒಂದು ಡಜನ್ ಕ್ರಿಮಿನಲ್ ಕೇಸುಗಳಿವೆ. … ಪ್ರಳಯಾಂತಕನಿಗೆ ಬಿಜೆಪಿ ಟಿಕೆಟ್ ಕೊಡಿಸಿ ಪಾಲಿಕೆಗೆ …ಸಲು ಯತ್ನಿಸುತ್ತಿರುವುದು ಮಂತ್ರಿ ಅಶೋಕ್.

…ಪೀಣ್ಯದ ಗ್ರಹಚಾರ ಕೆಟ್ಟು ಸೀನ ಏನಾದರೂ ಗೆದ್ದನೆಂದರೆ …ಯಾವ ಮರ್ಯಾದಸ್ಥ ತಾನೇ ಬದುಕಲು ಸಾಧ್ಯ?

…ಶಾಕಾಂಬರಿ ನಗರಕ್ಕೆ ಬಿಜೆಪಿ ಅಭ್ಯರ್ಥಿಯಾಗಿರುವ … ಕೌನ್ಸಿಲರ್ ಸೋಮಶೇಖರ್, ರಾಜರಾಜೇಶ್ವರಿ …ದ ಬಿಜೆಪಿ ಅಭ್ಯರ್ಥಿ ರಾಮಚಂದ್ರ, ಶಿವನಗರದ … ಸ್ಪರ್ಧಿ ಜಿ. ಮಂಜುನಾಥ್ ಉರ್ಫ್ ಕೇಡಿ ಮಂಜ, …ದುರ ಬಳಗದ ಬಿಜೆಪಿಯ ಕ್ಯಾಂಡಿಡೇಟ್ …ಂದ್ರಕುಮಾರ್, ಲಗ್ಗೆರೆಯ ಬಿಜೆಪಿ ಹುರಿಯಾಳು …ಂತ ರೆಡ್ಡಿ, ರಾಜಮಹಲ್ ಗುಟ್ಟಹಳ್ಳಿಯ … ಸ್ಪರ್ಧಿ ಕುಮಾರ್, ಯಲಹಂಕ …ನಗರದ ಬಿಜೆಪಿ ಅಭ್ಯರ್ಥಿ ಮುನಿರಾಜು; …ಿ ಕ್ರಿಮಿನಲ್ ಹಿನ್ನೆಲೆಯ ಬಿಜೆಪಿ …ರ್ಥಿಗಳ ಪಟ್ಟಿ ಕೆದಕಿದಷ್ಟೂ …ನಕವಾಗುತ್ತದೆ.

…ಾಯಿ ರಾಣಿ ಮಾರಿಮುತ್ತು

…ಾಗಂತ ಕಾಂಗ್ರೆಸ್-ಜೆಡಿಎಸ್‌ಗಳೇನೂ …ಗಳೆಂದೇನಲ್ಲ. ಕಳೆದ ಬಾರಿಯೇ ಟ್ಯಾನರಿ …ನ ಸಗಾಯಪುರಂ ವಾರ್ಡಿನಿಂದ ಜೆಡಿಎಸ್ …ಯಾಗಿ ಗೆದ್ದು ಕೌನ್ಸಿಲರ್ ಆದವಳು ಕಳ್ಳಭಟ್ಟಿ … ಮಾರಿಮುತ್ತು. ಗೆದ್ದ ನಂತರ ಈಕೆ …ಪುರಂ ಜನಕ್ಕೆ ಮಾಡಿದ ಉಪಕಾರವೆಂದರೆ …ಲ್ಲಿ ಸಾರ್ವಜನಿಕ ಮೂತ್ರ ಮತ್ತು …ಲಯಗಳಿದ್ದವೋ ಅಂಥ ನೂರಕ್ಕೂ ಹೆಚ್ಚು ಪಾಲಿಕೆ …ಲಯಗಳನ್ನು ಧ್ವಂಸಗೊಳಿಸಿ ಆ ಜಾಗವನ್ನೆಲ್ಲ …ಗಳನ್ನಾಗಿ ಮಾಡಿ ತನ್ನ ಚೇಲಾಗಳಿಗೆ …ಬಿಟ್ಟಳು. ಇವತ್ತು ಇಡೀ ಸಗಾಯಪುರಂ …ಯಲ್ಲಿ ಒಂದೇ ಒಂದು ಸಾರ್ವಜನಿಕ …ಲಯವಿಲ್ಲ. ಈಕೆಯ ವಿರುದ್ಧ ಬಿಜೆಪಿ …ಯಾಗಿರುವವನು ಈಕೆಯ ಸಂಬಂಧಿ



ನೊಂಡಿ ಮುನಿಸ್ವಾಮಿ ಎಂಬ ಮತ್ತೊಬ್ಬ ಕಳ್ಳಭಟ್ಟಿ ದೊರೆ. ಇವರಿಬ್ಬರನ್ನೂ ಹೊರತು/ಪಡಿಸಿದರೆ ಈ ಬಾರಿ ಪಳನಿಯಮ್ಮಾಳ್ ಎಂಬ ದಲಿತ ಮಹಿಳೆಯೊಬ್ಬಳಿಗೆ ಕಾಂಗ್ರೆಸ್ ಟಿಕೆಟ್ ಕೊಟ್ಟಿದೆ.

ಮೀಟರ್ ಬಡ್ಡಿ ದಂಧೆ, ಸುಲಿಗೆ, ಗೂಂಡಾಗಿರಿ ಇತ್ಯಾದಿಗಳಲ್ಲೇ ಕಾಲ ಕಳೆದ ಮಾರಿಮುತ್ತು ಮತ್ತು ನೊಂಡಿ ಮುನಿಸ್ವಾಮಿಯ ಮುಂದೆ ಪಳನಿಯಮ್ಮಾಳ್ ಸಗಾಯಪುರದ ಆಶಾಕಿರಣದಂತಿದ್ದಾಳೆ.

ಬಾಂಬ್ ನಾಗನ ಹಾವಳಿ



ಮಾರಿಮುತ್ತು

ಕುಖ್ಯಾತಿಯಲ್ಲಿ ಈಕೆಯಷ್ಟೇ ಅಪಾಯಕಾರಿಯಾದವನು ಸದ್ಯ ಪ್ರಕಾಶ್‌ನಗರದ ಬಿಜೆಪಿ ಅಭ್ಯರ್ಥಿಯಾಗಿರುವ ಬಾಂಬ್‌ನಾಗ ಅಲಿಯಾಸ್ ವಿ. ನಾಗರಾಜ್. ಕಳೆದ ಬಾರಿ ಶ್ರೀರಾಂಪುರದ ಸೇವಾಶ್ರಮ ವಾರ್ಡಿನಲ್ಲಿ ಜೆಡಿಎಸ್‌ನಿಂದ ನಿಂತು ಗೆದ್ದಿದ್ದ. ಮೊನ್ನೆ ನಡೆದ ಲೋಕಸಭಾ ಚುನಾವಣೆಯಲ್ಲಿ ಜಮೀರ್ ಅಹ್ಮದ್‌ನಿಂದ ಸಿಕ್ಕಾಪಟ್ಟೆ ದುಡ್ಡು ಕಿತ್ತು ಕೈಕೊಟ್ಟ. ಕೋಟಿಗಟ್ಟಲೇ ರೊಕ್ಕ ತಿಂದೂ ಜಮೀರ್‌ಗೆ ಓಟು ಕೊಡಿಸಲಾಗದೇ ಕೈಕೊಟ್ಟ ನಾಗನ ವಿರುದ್ಧ ರೊಚ್ಚಿಗೆದ್ದ ಜಮೀರ್ ಆತನನ್ನು ಜೆಡಿಎಸ್‌ನಿಂದಲೇ ಹೊರಹಾಕಿದ್ದಾರೆ. ಕಾಂಗ್ರೆಸ್‌ಗೆ ಕಾಲಿಡುವಂತಿಲ್ಲ. ಬಿಜೆಪಿ ಇಂಥವನನ್ನು ಮುಟ್ಟಿಸಿಕೊಳ್ಳುವುದೂ ಕಷ್ಟ. ವಿಧಿಯಿಲ್ಲದೇ ನಾಗ ಗಾಂಧಿನಗರ ಕ್ಷೇತ್ರದಿಂದಾಚೆಯ ಪ್ರಕಾಶ್ ನಗರಕ್ಕೆ ಪಕ್ಷೇತರ ಅಭ್ಯರ್ಥಿಯಾಗಿ ವಲಸೆ ಬಂದಿದ್ದಾನೆ. ಹೆಸರೇ ಬಾಂಬ್ ನಾಗ. ಹತ ರೌಡಿ ಮಚ್ಚ ರಾಜೇಂದ್ರನ ಮೇಲೆ ಬಾಂಬ್ ಹಾಕಲು ಯತ್ನಿಸಿ ಯಾರನ್ನೋ ಬಲಿಕೊಟ್ಟ. ಮೊದಲ ಪತ್ನಿಗೆ ನಡುರಸ್ತೆಯಲ್ಲೇ ಇಟ್ಟಾಡಿಸಿ ಬೆಂಕಿ ಇಟ್ಟ.

ಈತನ ವಿರುದ್ಧ ಶ್ರೀರಾಂಪುರ ಪೊಲೀಸ್ ಠಾಣೆಯಲ್ಲಿ ಇವತ್ತಿಗೂ ರೌಡಿ ಶೀಟ್ ಹಾಗೇ ಇದೆ. ಈತನ ತಮ್ಮ ಧರ್ಮಾ ಕೂಡ ಪಾತಕಿಯೇ. ಗೆದ್ದು ಕೌನ್ಸಿಲರ್ ಆದಮೇಲೂ ತನ್ನ ಮೀಟರ್ ಬಡ್ಡಿ ಸುಲಿಗೆಯನ್ನು ಕೈಬಿಡದ ಬಾಂಬ್ ನಾಗ ಈಗ ಪ್ರಕಾಶ್‌ನಗರಕ್ಕೆ ಬಂದು ಅಲ್ಲಿನ ತಮಿಳರ ಕಾಲಿಗೆ ಬೀಳುತ್ತಿದ್ದಾನೆ. ಆದರೆ ಪ್ರಕಾಶ್‌ನಗರದ ಜನ ಈಗಾಗಲೇ ಪದ್ಮಾವತಿಯ ಕಾಟಕ್ಕೆ ಬೇಸತ್ತು ರಾ. ಲಕ್ಷ್ಮೀನಾರಾಯಣ (ಚಿನ್ನಿ) ಎಂಬ ಉತ್ಸಾಹಿ ಯುವಕನನ್ನು ಗೆಲ್ಲಿಸಲು ನಿರ್ಧರಿಸಿದ್ದಾಗಿದೆ. ಶಾಲಾಮಕ್ಕಳಿಗೆಂದು ಎಷ್ಟೇ ನೋಟ್‌ಬುಕ್ಕು, ಬಟ್ಟೆ, ಬ್ಯಾಗುಗಳನ್ನು ಉಚಿತವಾಗಿ ಕೊಟ್ಟರೂ ಬಾಂಬ್ ನಾಗನಂಥವನನ್ನು ಗೆಲ್ಲಿಸುವಷ್ಟು ದಡ್ಡರಲ್ಲ ಪ್ರಕಾಶ್‌ನಗರದ ಜನ.



ಬಾಂಬ್‌ನಾಗ

ಇದು ಒಬ್ಬ ಬಾಂಬ್ ನಾಗ, ಮಾರಿಮುತ್ತು, ಜಯಪ್ಪರೆಡ್ಡಿಯಂಥವರ ಹಾವಳಿಯಷ್ಟೇ ಅಲ್ಲ. ಬೆಂಗಳೂರು ಸುತ್ತಲ ರಿಂಗ್‌ರಸ್ತೆಗುಂಟ ಆಯಾ ವಾರ್ಡುಗಳ ಬಹುತೇಕ ಅಭ್ಯರ್ಥಿಗಳೆಲ್ಲರೂ ಲ್ಯಾಂಡ್ ಡೀಲರುಗಳೇ. ನಿನ್ನೆಮೊನ್ನೆಯ ತನಕ ತಮ್ಮದೇ ರೌಡಿ ಪಡೆ ಕಟ್ಟಿಕೊಂಡು ಕಂಡಕಂಡ ಆಸ್ತಿಗೆ ಹಾವಳಿಯಿಡುತ್ತಿದ್ದವರೆಲ್ಲಾ ಈಗ ಅದೇ ದುಡ್ಡಿನಿಂದ ಪಾಲಿಕೆಗೆ ಗೆದ್ದು ಬರುತ್ತಿದ್ದಾರೆ. ಅವರೇ ಸಾಕಿಕೊಂಡಿದ್ದ ಪುಡಿ ರೌಡಿಗಳೆಲ್ಲ ಈಗ ಖಾದಿ ತೊಟ್ಟು ಓಟಿನ ಭಿಕ್ಷೆ ಬೇಡುತ್ತಿದ್ದಾರೆ.

ಇನ್ನು ಮೇಯರ್ ಆಗುವವರಾದರೂ ಯಾರು? ಇಂಥವರಲ್ಲೇ ಒಬ್ಬ ತಾನೆ?

ಬೆಂಗಳೂರು ಉದ್ಧಾರವಾಗಬೇಕೆಂದರೆ ಎಲ್ಲಿಂದ?

• ರಾ. ಸೋಮನಾಥ್


ಕಾಡುಮಲ್ಲೇಶ್ವರ

ವಾಣಿ ಕೃಷ್ಣರಾಜುಗೆ ವಿರೋಧಿಗಳೇ ಇಲ್ಲ!

ಕಾಡು ಮಲ್ಲೇಶ್ವರ ವಾರ್ಡಿನ ಬಿಜೆಪಿ ಮತ್ತು ಜೆಡಿಎಸ್ ಅಭ್ಯರ್ಥಿಗಳಿಗೆ ಕಾರ್ಯಕರ್ತರೇ ಸಿಗುತ್ತಿಲ್ಲ. ವಾಣಿಕೃಷ್ಣರಾಜು ಎಂಬ ಕೊಡುಗೈದಾನಿಯನ್ನು ಕಾಂಗ್ರೆಸ್ ಕಣಕ್ಕಿಳಿಸಿದ ಮೇಲಂತೂ ಬಿಜೆಪಿ-ಜೆಡಿಎಸ್ ಅಭ್ಯರ್ಥಿಗಳಿಬ್ಬರೂ ನೆಪಕ್ಕಷ್ಟೇ ಪ್ರಚಾರಕ್ಕಿಳಿದಿರುವಂತಿದೆ.

ಅದು ವಾಣಿಕೃಷ್ಣರಾಜುವಿನ ಸಭ್ಯತೆಗೆ ಸಾಕ್ಷಿಯಷ್ಟೆ. ಮಲ್ಲೇಶ್ವರ, ಕೋದಂಡರಾಂಪುರ, ಪೈಪ್‌ಲೈನ್ ಸುತ್ತಮುತ್ತಲ ಏರಿಯಾಗಳಲ್ಲಿ ಯಾವುದೇ ಹೋರಾಟ, ಪ್ರತಿಭಟನೆಗಳಾದರೂ ಅಲ್ಲಿ ಕೃಷ್ಣರಾಜು ತಲೆ ಕಾಣಿಸಲೇಬೇಕು. ಕೃಷ್ಣರಾಜು ವೃತ್ತಿಯಲ್ಲಿ ಕಂಟ್ರಾಕ್ಟರ್. ವೈಯಾಲಿಕಾವಲ್ ಪುಟ್‌ಬಾಲ್ ಮೈದಾನ ನಿರ್ಮಿಸಿಕೊಟ್ಟರು. ಮಲ್ಲೇಶ್ವರದ ಆಟದ ಮೈದಾನಕ್ಕೆ ಹೊಸ ರೂಪ ಕೊಟ್ಟರು. ಕೇಂದ್ರ ಸರ್ಕಾರದಿಂದ ಹಿಡಿದು ಪಾಲಿಕೆಯ ಕಾಮಗಾರಿಗಳನ್ನೂ ಬಿಡದೇ ಆ ಕಾಲದಿಂದಲೂ ಕಂಟ್ರಾಕ್ಟರಿಕೆ ಮಾಡಿಕೊಂಡೇ ಬಂದ ಕೃಷ್ಣರಾಜು ವಿಶೇಷವೆಂದರೆ ದುಡಿದ ದುಡ್ಡೆಲ್ಲವನ್ನೂ ಹೋರಾಟ ಪ್ರತಿಭಟನೆಯಲ್ಲೇ ಕಳೆಯುವುದು.

ಈ ಥರದ ವ್ಯಕ್ತಿತ್ವ ಕೃಷ್ಣರಾಜುಗೆ ರಕ್ತಗತವಾಗಿದ್ದು ಹಿರಿಯ ಕಾಂಗ್ರೆಸ್ ನಾಯಕ ಬಿ.ಕೆ. ಹರಿಪ್ರಸಾದ್ ಸಹವಾಸದಿಂದ. ಹರಿಪ್ರಸಾದ್, ಶಿವರಾಮ್ ಮತ್ತು ಕೃಷ್ಣರಾಜು ಬಾಲ್ಯದ ಗೆಳೆಯರು. ಇಂಥಾ ದೋಸ್ತಿ ಕಾಂಗ್ರೆಸ್ಸಿನಲ್ಲೂ ಮುಂದುವರಿಯಿತು. ಕಳೆದ 20 ವರ್ಷಗಳಿಂದ ಜಿಲ್ಲಾ ಕಾಂಗ್ರೆಸ್ ಸಮಿತಿ ಸದಸ್ಯರಾಗಿರುವ ಕೃಷ್ಣರಾಜು ಕಾಂಗ್ರೆಸ್ ಹಿಂದುಳಿದ ಘಟಕ ಪ್ರಧಾನ ಕಾರ್ಯದರ್ಶಿಯಾಗಿದ್ದೇ ಕೊನೆ.



ಕೃಷ್ಣರಾಜು

ಆನಂತರ ಹೋರಾಟ ಮತ್ತು ಪರೋಪಕಾರದಲ್ಲೇ ಮುಳುಗಿಹೋದರು. ತಾವೇ ನಿಂತು ಕಾಡು ಮಲ್ಲೇಶ್ವರ ದೇವಸ್ಥಾನವನ್ನು ಜೀರ್ಣೋದ್ಧಾರಗೈದರು. ಕಲ್ಲಿನ ನಂದಿಯ ಬಾಯಿಂದ ಸದಾಕಾಲ ನೀರು ಹರಿಯುತ್ತಿದ್ದದ್ದನ್ನು ಗಮನಿಸಿದ ಮುಂಬಯಿ ಮಾರ್ವಾಡಿಯೊಬ್ಬ ಕಾಡುಮಲ್ಲೇಶ್ವರ ದೇವಸ್ಥಾನವನ್ನು ಕಬಳಿಸಲು ಯತ್ನಿಸಿದಾಗ ಕೃಷ್ಣರಾಜುವೇ ಬೀದಿಗಿಳಿದು ಪಟೇಲ್ ಸರ್ಕಾರದ ವಿರುದ್ಧ ಪ್ರತಿಭಟಿಸಿದರು.

ಇವತ್ತು ಕಾಡುಮಲ್ಲೇಶ್ವರ ದೇವಸ್ಥಾನ ಮಲ್ಲೇಶ್ವರದ ಜನರಿಗೆ ಉಳಿದಿದೆಯೆಂದರೆ ಅದಕ್ಕೆ ಹರಿಪ್ರಸಾದ್ ಮತ್ತು ಕೃಷ್ಣರಾಜು ನಡೆಸಿದ ಹೋರಾಟವೇ ಕಾರಣ. ಹೀಗೆ ಯಾವುದೇ ಹೋರಾಟ-ಪ್ರತಿಭಟನೆಗಳಾದರೂ ಬಂದ ಜನಕ್ಕೆ ತಮ್ಮ ಖರ್ಚಲ್ಲೇ ಊಟ-ತಿಂಡಿ ಕೊಡಿಸುವುದು ಕೃಷ್ಣರಾಜು ಹುಟ್ಟುಗುಣ. ಏನೇ ಚರ್ಚೆ ಇರಲಿ, ಯಾವುದೇ ಹೋರಾಟ ಇರಲಿ ಗಣೇಶ, ಅಣ್ಣಮ್ಮ, ರಾಜ್ಯೋತ್ಸವ ಏನೇ ಆದರೂ ಅಲ್ಲಿಗೆ ಊಟ-ತಿಂಡಿ ಕಳಿಸುವ ಏಕೈಕ ವ್ಯಕ್ತಿಯೆಂದರೆ ಅದು ಕೃಷ್ಣರಾಜು.

ಇದ್ಯಾವುದನ್ನೂ ಆತ ರಾಜಕೀಯದ ಉದ್ದೇಶದಿಂದ ಮಾಡಿದ್ದಿಲ್ಲ. ಬಹುಶಃ ಹರಿಪ್ರಸಾದ್ ಮತ್ತು ಶಿವರಾಮ್ ಒತ್ತಾಯಿಸದೇ ಹೋಗಿದ್ದರೆ ಕೃಷ್ಣರಾಜು ಪಾಲಿಕೆ ಚುನಾವಣೆಗೂ ನಿಲ್ಲುತ್ತಿರಲಿಲ್ಲ.

ಕೃಷ್ಣರಾಜು ವಿರುದ್ಧ ಬಿಜೆಪಿ ಮಂಜುನಾಥ ರಾಜುವನ್ನು ನಿಲ್ಲಿಸಿದೆ. ಜೆಡಿಎಸ್ ಪಿ.ಕೆ. ರಾಜು ಎಂಬ ಮತ್ತೊಬ್ಬ ರಾಜುವನ್ನು ಹಾಕಿದೆ. ಇವರಿಬ್ಬರೂ ಕೃಷ್ಣರಾಜು ಸಂಬಂಧಿಗಳೇ. ಮಲ್ಲೇಶ್ವರದ ಒಳಿತಿಗಾಗಿ ದುಡಿದಿದ್ದೆಲ್ಲವನ್ನೂ ಕಳೆದ ಕೃಷ್ಣರಾಜು ಗೆಲ್ಲುವುದಾದರೆ ಅದಕ್ಕೆ ನಾವೇಕೆ ಅಡ್ಡಗಾಲಿಡಬೇಕೆಂದು ಬಿಜೆಪಿ-ಜೆಡಿಎಸ್‌ನ ರಾಜುಗಳಿಬ್ಬರೂ ನೆಪಕ್ಕಷ್ಟೇ ಪ್ರಚಾರಕ್ಕಿಳಿದಿದ್ದಾರಂತೆ.

ಸಭ್ಯನೊಬ್ಬ ಗೆಲ್ಲುವುದಾದರೆ ಮನುಷ್ಯತ್ವವುಳ್ಳ ಯಾರು ತಾನೇ ಅಡ್ಡಗಾಲಿಡುತ್ತಾರೆ?

ವಾಣಿ ಎಂಬುದು ಕೃಷ್ಣರಾಜುವಿನ ಅಪ್ಪ ಹೆಸರಂತೆ. ಕಾಟಾಚಾರಕ್ಕಷ್ಟೇ ಇಲ್ಲಿ ಬಿಜೆಪಿ-ಜೆಡಿಎಸ್ ಪ್ರಚಾರಕ್ಕಿಳಿದಿವೆ. ಸರ್ವಪಕ್ಷಗಳ ಕಾರ್ಯಕರ್ತರೆಲ್ಲ ಕಾಂಗ್ರೆಸ್ಸಿಗಲ್ಲದೇ ಹೋದರೂ ಕೃಷ್ಣರಾಜು ಮುಖ ನೋಡಿ ಒಪ್ಪಲೇಬೇಕು. ಸದ್ಯ ಬೆಂಗಳೂರಿನ ಮಟ್ಟಿಗೆ ಕಾಂಗ್ರೆಸ್ ಭದ್ರಕೋಟೆಯೆಂದರೆ ಇದೊಂದೇ ಇರಬೇಕು. ●

ಶಾಕಾಂಬರಿ -179

ಡೆಡ್ಲಿ ಸೋಮನ ಹಾವಳಿಗೆ ಕಾಂಗ್ರೆಸ್ ಬ್ರೇಕ್?


…ಬ್ಬ ಕೌನ್ಸಿಲರ್ ಏನೆಲ್ಲಾ ಅನಾಹುತ …ಬಹುದೆಂಬುದಕ್ಕೆ ತಕ್ಕ ನಿದರ್ಶನ ಅಂತಿದ್ದರೆ …ಪಟ್ಟಾಭಿರಾಮನಗರದ ಮಾಜಿ ಬಿಜೆಪಿ …ರ್ ಸೋಮಶೇಖರ್.

…ನ್ನನ್ನು ಕೌನ್ಸಿಲರ್ ಮಾಡಿದ್ದ ರಾಮಮೂರ್ತಿಗೇ …ಬಿದ್ದು ನಡುರಸ್ತೆಯಲ್ಲೇ ಕೊರಳುಪಟ್ಟಿ ಹಿಡಿದ …ಶೇಖರ್ ಈಗ ಶಾಕಾಂಬರಿ ವಾರ್ಡ್‌ನ ಬಿಜೆಪಿ …. ಹಿಂದಿನ ವಾರ್ಡ್‌ಗೂ ಈಗಿನ ವಾರ್ಡ್‌ಗೂ …ಮೈಲಿಯ ಅಂತರವಿದೆ.

…ಲ್ಲ. ಕನಿಷ್ಠ ಒಳ್ಳೆಯ …ದರೂ ಇದ್ದಿದ್ದರೆ ಬಿಜೆಪಿ …ಕೊಟ್ಟಿದ್ದಕ್ಕೊಂದು …ಾದರೂ ಇರುತ್ತಿತ್ತು. ಹಿಂದೆ …ರಾಮನಗರಕ್ಕೆ ಕೌನ್ಸಿಲರ್ …ಾಗಲೇ ಆತ ಯಾವ ಪರಿ …ತ್ತಿದ್ದ ಎಂಬುದಕ್ಕೆ ಶಾಲಿನಿ … ಒಂದೇ ಸಾಕ್ಷಿ. ಒಳಗಿದ್ದ … ಎತ್ತಿ ಆಚೆಗೆ ಹಾಕುವುದು …ಅದೇ ಮಣ್ಣನ್ನು ಎತ್ತಿ ಒಳಕ್ಕೆ …ದು ಮಾಡಿಯೇ ಸೋಮ ಎರಡು ಕೋಟಿ …ಬುಗಳಷ್ಟನ್ನು ನಿವಾಳಿಸಿಬಿಟ್ಟ. ಮಣ್ಣೆತ್ತಿ ಆಚೆ … 500 ರೂಪಾಯಿ ಖರ್ಚಾದರೆ ಸೋಮ 20 …ಬಿಲ್ ನುಂಗುತ್ತಿದ್ದ!

…ೀ ಶಾಲಿನಿ ಪಾರ್ಕ್‌ನಲ್ಲಿ ಮಕ್ಕಳಿಗೆಂದು ಸ್ಕೇಟಿಂಗ್ …ನಿರ್ಮಿಸಹೊರಟರೆ ಅದನ್ನೇ ಬಳಸಿಕೊಂಡು …ಕ್ಲಬ್ ಮಾಡಿ ಅದರ ನಿರ್ವಹಣೆಯ ಕಾಂಟ್ರ್ಯಾಕ್ಟನ್ನೂ …ಷ್ಟನಿಗೆ ಕೊಡುವಂತೆ ಸೋಮಶೇಖರ್ ಹಠಕ್ಕೆ …ದರ ಹುನ್ನಾರವೇನೆಂದರೆ ಸ್ಕೇಟಿಂಗ್‌ಗೆಂದು ಬರುವ …ಮಕ್ಕಳಿಂದ ತಿಂಗಳಿಗೆ ತಲಾ ಐನೂರು ರೂಪಾಯಿ …ದು!

… ತಾನೇ ಬೇನಾಮಿಯಾಗಿ ಸ್ಕೇಟಿಂಗ್ …ಮಕ್ಕಳನ್ನು ಸುಲಿಯುವ ಸೋಮನ




ಸೋಮಶೇಖರ್

ಷಡ್ಯಂತ್ರವಾಗಿತ್ತು. ಇದು ಗೊತ್ತಾಗಿದ್ದೇ ತಿರುಗಿ ಬಿದ್ದ ಜನ ಪಾಲಿಕೆಗೆ ದೂರು ಕೊಟ್ಟು ಸೋಮನಿಗೆ ಮಂಗಳಾರತಿ ಎತ್ತಿದ್ದರು. ಹಾಗಂತ ಶಾಲಿನಿ ಗ್ರೌಂಡನ್ನು ಕಬಳಿಸುವ ದುರ್ಬುದ್ಧಿಯನ್ನು ಸೋಮ ಬಿಡಲಿಲ್ಲ.

ಮೊದಲು ಅರವಿಂದ್ ಕಾನ್ವೆಂಟಿಗೆ ಗುತ್ತಿಗೆ ಆಧಾರದ ಮೇಲೆ ಶಾಲಿನಿ ಗ್ರೌಂಡನ್ನು ಒಪ್ಪಿಸಲು ಹವಣಿಸಿದ. ಅದನ್ನು ಜನ ಪ್ರತಿಭಟಿಸಿದಾಗ ವಿಜಯಾ ಕಾಲೇಜು ದಣಿಗಳಿಗೆ ಗ್ರೌಂಡನ್ನು ಪರಭಾರೆ ಮಾಡಲು ಹೋಗಿ ಮತ್ತೆ ಜನರ ಕೈಲಿ ಉಗಿಸಿಕೊಂಡ. ರೋಸತ್ತ ಜನ ಕೊನೆಗೆ ಶಾಲಿನಿ ಗ್ರೌಂಡನ್ನು ಉಳಿಸಿಕೊಳ್ಳಲು ಅಲ್ಲೊಂದು ದೇವಸ್ಥಾನ ಕಟ್ಟಿಸಿ ಆಟದ ಮೈದಾನ ಮಾಡುವಂತೆ ಪ್ರತಿಭಟನೆಗಿಳಿಯಬೇಕಾಯ್ತು.

ಇಂತಹ ಹತ್ತೋ ಹದಿನೈದು ಪಾರ್ಕುಗಳ ಮೇಲೆ ಅವನ ಕಣ್ಣು ಬಿದ್ದಿತ್ತು. ಕೌನ್ಸಿಲರ್ ಆಗಿದಷ್ಟೂ ದಿನ ಸೋಮ ಪಾಲಿಕೆ ಅಧಿಕಾರಿಗಳನ್ನೂ ಸುಲಿದ. ಒಂದಾನೊಂದು ಕಾಲಕ್ಕೆ ಜೆರಾಕ್ಸ್ ಅಂಗಡಿಯೊಂದನ್ನು ಹಾಕಿಕೊಂಡು ಸ್ಲಮ್ಮಿನಲ್ಲಿ ವಾಸಿಸುತ್ತಿದ್ದ ಸೋಮಶೇಖರ್ ಇವತ್ತು ಕಮ್ಮಿಯೆಂದರೂ ಐವತ್ತು ಕೋಟಿಯ ಆಸ್ತಿವಂತ. ಹೇಳಿಕೇಳಿ ಶಾಕಾಂಬರಿ ವಾರ್ಡ್‌ಗೆ ಒಂದೇ ಒಂದು ಆಟದ ಮೈದಾನವಿಲ್ಲ. ಪೈಪ್‌ಲೈನ್ ಬಳಿ ಇದ್ದ ಮೂರೆಕರೆ ಸರ್ಕಾರಿ ಭೂಮಿಯನ್ನು ಆಟದ ಮೈದಾನಕ್ಕೆ ಮೀಸಲಿಡಿ ಎಂದು ನಾಗರಿಕರ ವೇದಿಕೆಯವರು ಪಾಲಿಕೆಗೆ ಮನವಿ ಕೊಟ್ಟರೆ ಸೋಮ ಅದನ್ನು ಬಿಜೆಪಿ ಕಾರ್ಯಕರ್ತರಿಗೆ ಸೈಟು ಮಾಡಿ ಹಂಚ್ತೀನಿ ಎಂದು ಕಬಳಿಸಲು ಯತ್ನಿಸಿದ್ದ. ಇದನ್ನು ತಿಳಿದದ್ದೇ ಶಾಕಾಂಬರಿನಗರ ವೆಲ್‌ಫೇರ್ ಅಸೋಸಿಯೇಷನ್ನಿನ ಸದಸ್ಯರು ಬೀದಿಗಿಳಿದು ಪ್ರತಿಭಟಿಸಬೇಕಾಯ್ತು. ಇದು ಮಾಜಿ ಕೌನ್ಸಿಲರ್ ಸೋಮನ ಹಾವಳಿಗೊಂದು ಸಣ್ಣ ನಿದರ್ಶನವಷ್ಟೇ.

ಅಷ್ಟಕ್ಕೂ ಶಾಕಾಂಬರಿ ವಾರ್ಡ್‌ನ ಮೂಲ ಬಿಜೆಪಿ ಕಾರ್ಯಕರ್ತರ್‍ಯಾರಿಗೂ ಸೋಮನನ್ನು ಗೆಲ್ಲಿಸುವುದು ಇಷ್ಟವಿಲ್ಲ. ಇದೇ ಶಾಕಾಂಬರಿ ವಾರ್ಡ್‌ನ ಕೆಲ ಭಾಗ ಹಿಂದೆ ಪಕ್ಕದ ಜೆ.ಪಿ.ನಗರ ವಾರ್ಡ್‌ಗೆ ಸೇರಿತ್ತು. ಅಲ್ಲಿಗೆ ಕೌನ್ಸಿಲರ್ ಆಗಿದ್ದ ಎಸ್.ಕೆ. ನಟರಾಜುಗೆ ತನ್ನ ಶಿಷ್ಯ ವೇಲುವಿನ ಪತ್ನಿಗೆ ಟಿಕೆಟ್ ಕೊಡಿಸುವ ಇರಾದೆಯಿತ್ತು. ಆದರೆ ಸೋಮ ಮಂತ್ರಿ ಅಶೋಕ್ ಹಿಡಿದು ಮಹಿಳಾ ಕ್ಯಾಟಗರಿಯನ್ನೇ ಬದಲಿಸಿ ತನ್ನ ಅನುಕೂಲಕ್ಕೆ ತಕ್ಕಂತೆ ಕ್ಯಾಟಗರಿ ಮಾಡಿಸಿಕೊಂಡ. ಹೀಗಾಗಿ ಸ್ಥಳೀಯ ಬಿಜೆಪಿ ಕಾರ್ಯಕರ್ತರ್‍ಯಾರಿಗೂ ಸೋಮ ಗೆಲ್ಲುವುದು ಇಷ್ಟವಿಲ್ಲ.



ಚಂದ್ರಶೇಖರ್‌ರಾಜು

ಬಹುಶಃ ಸೋಮನ ಪಾಪದ ಕೊಡ ತುಂಬಿರಬೇಕು. ಇಡೀ ಶಾಕಾಂಬರಿ ವಾರ್ಡು ಸದ್ಯ ಕಾಂಗ್ರೆಸ್ ಅಭ್ಯರ್ಥಿ ಚಂದ್ರಶೇಖರ್‌ರಾಜು ಬೆನ್ನಿಗೆ ನಿಂತಿದೆ. ಚಂದ್ರಶೇಖರ್‌ರಾಜು ಸ್ಥಳೀಕ. ಆವತ್ತಿನಿಂದಲೂ ಪಾರ್ಕು, ಸರ್ಕಾರಿ ಭೂಮಿ, ಆಟದ ಮೈದಾನಕ್ಕಾಗಿ ಹೋರಾಡಿಕೊಂಡೇ ಬಂದ ಉತ್ಸಾಹಿ ಯುವಕ. ಸೋಮನ ಕೌನ್ಸಿಲರ್‌ಗಿರಿಯ ಹಣೆಬರಹ ಜನಕ್ಕೆ ಈಗಾಗಲೇ ಗೊತ್ತಾಗಿ ಬಿಟ್ಟಿದೆ. ಕೇವಲ ಐದು ವರ್ಷದ ಕೌನ್ಸಿಲರ್‌ಗಿರಿಯಲ್ಲೇ ಆ ಪಾಟಿ ದೋಚಿದವನು ಶಾಕಾಂಬರಿ ನಗರಕ್ಕೇನಾದರೂ ಗೆದ್ದನೆಂದರೆ ಪಾರ್ಕ್ ಜಮೀನಲ್ಲ ಪಾಯಿಖಾನೆ ಜಮೀನನ್ನೂ ಉಳಿಸಲಾರ. ಕಾಂಗ್ರೆಸ್ ಅಭ್ಯರ್ಥಿ ಚಂದ್ರಶೇಖರ್ ರಾಜು ಬಿಟ್ಟರೆ ಶಾಕಾಂಬರಿ ವಾರ್ಡ್‌ನ ಜನಕ್ಕೆ ಬೇರೆ ಆಯ್ಕೆಯೇ ಇದ್ದಂತಿಲ್ಲ. ಸದ್ಯ ಸೋಮನ ಜೊತೆ ಪ್ರಚಾರಕ್ಕೆ ಆತನ ಡ್ರೈವರ್ ಬಿಟ್ಟರೆ ಇನ್ನೊಬ್ಬನಿಲ್ಲ. ●


ಯಡಿಯೂರು-167

ನಕಲಿ ಶಾಮನ ಹೆಸರೇ ಶಾಮಣ್ಣ


ಶಾಮಣ್ಣ

ಯಡಿಯೂರು ವಾರ್ಡಿನಲ್ಲಿ ಬಿಜೆಪಿ ಅಭ್ಯರ್ಥಿ ಎಸ್.ಆರ್. ರಮೇಶ್ ವಿರುದ್ಧ ಕಾಂಗ್ರೆಸ್ ಅಭ್ಯರ್ಥಿಯಾಗಿರುವ ಶಾಮಣ್ಣ ಕೆಲವರ್ಷಗಳ ಹಿಂದೆ ತನ್ನ ಒಡಹುಟ್ಟಿದ ಅಣ್ಣನನ್ನೇ ಕೊಲ್ಲಲು ಯತ್ನಿಸಿದ. ಅದೂ ಪುಡಿ ಆಸ್ತಿಗಾಗಿ!

ವಿಲ್ಸನ್ ಗಾರ್ಡನ್ ಮತ್ತು ಯಶವಂತಪುರ ಪೊಲೀಸ್ ಠಾಣೆಗಳಲ್ಲಿ ಈತನ ವಿರುದ್ಧ ವಂಚನೆ ಕೇಸುಗಳಿವೆ. ಹೋಗಲಿ ಕಾಂಗ್ರೆಸ್ಸಿಗಾದರೂ ನಿಷ್ಠನಾ ಎಂದರೆ ಕಳೆದ ಬಾರಿ ಪಟ್ಟಾಭಿರಾಮನಗರ ವಾರ್ಡಿಗೆ ಬಿಜೆಪಿ ಅಭ್ಯರ್ಥಿಯಾಗಿ ನಿಂತು ಸೋತವನು ಕಾಂಗ್ರೆಸ್ಸಿಗೆ ಕಾಲಿಟ್ಟಿದ್ದೇ ಇಲ್ಲಿಗೆ ಆರು ತಿಂಗಳ ಹಿಂದೆ. ತಾನು 30 ವರ್ಷದಿಂದ ಕಾಂಗ್ರೆಸ್ಸಿನಲ್ಲಿದ್ದೇನೆಂದು ನಾಚಿಕೆಗೆಟ್ಟು ಕರಪತ್ರದಲ್ಲಿ ಅಚ್ಚು ಹಾಕಿಸಿದ್ದಾನೆ.


ಎಸ್.ಆರ್. ರಮೇಶ್

ಈತ ಕೊಟ್ಟಿರುವ ವಿಳಾಸ ಕೂಡ ಯಡಿಯೂರಿನ ಮಾಜಿ ಕೌನ್ಸಿಲರ್ ವೆಂಕಟೇಶ್ ರೆಡ್ಡಿಯವರ ಮನೆಯ ಅಡ್ರೆಸ್ಸೇ ಹೊರತು ಈತನ ಮನೆಯಿರುವುದು ನೀಲಸಂದ್ರದಲ್ಲಿ, ಸ್ಥಳೀಕನಲ್ಲ.

ಯಡಿಯೂರಿನ ಕೆರೆ ಉಳಿಸಿದೆ, ಶಾಲೆ ಕಟ್ಟಿಸಿದೆ, ಪಾರ್ಕ್ ಬೆಳೆಸಿದೆ ಎಂದೆಲ್ಲಾ ಶಾಮಣ್ಣ ಬೊಗಳೆ ಬಿಡುತ್ತಾನೆ. ಹಕೀಕತ್ತೆಂದರೆ ಯಡಿಯೂರು ಕೆರೆಯನ್ನು ನೆಲಗಳ್ಳರ ವಿರುದ್ಧ ಹೋರಾಡಿ ಕಾಪಾಡಿದ್ದು ಮಾಜಿ ಕೌನ್ಸಿಲರ್ ವೆಂಕಟೇಶ್ ರೆಡ್ಡಿ. ಇದೇ ವೆಂಕಟೇಶ್ ರೆಡ್ಡಿಯೇ ನಿಂತು ಲಕ್ಷ್ಮಣರಾವ್ ಪಾರ್ಕನ್ನು ಅಭಿವೃದ್ಧಿಪಡಿಸಿದರು. ಯಡಿಯೂರಿನ ಸರ್ಕಾರಿ ಶಾಲೆಯನ್ನು ಪುನಶ್ಚೇತನಗೊಳಿಸಿ ಸರ್ಕಾರಿ ಡಿಗ್ರಿ ಕಾಲೇಜನ್ನು ಇನ್ನಿಲ್ಲದಂತೆ ಅಭಿವೃದ್ಧಿಪಡಿಸಿದರು.

ಯಡಿಯೂರು ವಾರ್ಡಿನಲ್ಲಿ ವೆಂಕಟೇಶ್ ರೆಡ್ಡಿ ಮಾಡಿದ ಸಾಧನೆಗಳನ್ನೇ ತನ್ನ ಸಾಧನೆಯೆಂದು, ಅವರ ಮನೆ ಅಡ್ರೆಸ್ಸನ್ನೇ ತನ್ನ ಮನೆಯ ವಿಳಾಸವೆಂದು ರೈಲು ಬಿಡುತ್ತಿರುವ ಶಾಮಣ್ಣನ ವಿರುದ್ಧ ಸದ್ಯ ಪಕ್ಷನಿಷ್ಠ ಕಾಂಗ್ರೆಸ್ಸಿಗರೇ ತಿರುಗಿಬಿದ್ದಿದ್ದಾರೆ.

ಐವತ್ತು ಲಕ್ಷ ಕೊಟ್ಟೇ ಕಾಂಗ್ರೆಸ್ ಟಿಕೆಟ್ಟನ್ನು ಖರೀದಿಸಿದ್ದೇನೆಂದು ಬಹಿರಂಗವಾಗೇ ಬಡಾಯಿಕೊಚ್ಚುವ ಶಾಮಣ್ಣನಂಥ ಎಲ್ಲಿಂದಲೋ ಬಂದವನನ್ನು ಯಡಿಯೂರಿನ ಜನ ಒಪ್ಪುವುದುಂಟಾ?

ಇಂಥವನಿಗೆ ಕಾಂಗ್ರೆಸ್ ಟಿಕೆಟ್ ಕೊಡಿಸಿದ ಗುರಪ್ಪ ನಾಯ್ಡು ಎಂಥವನೆಂಬುದು ಪದ್ಮನಾಭನಗರಕ್ಕೇ ಗೊತ್ತು. ಕೃಷ್ಣ ಭೈರೇಗೌಡ, ರಾಮಲಿಂಗಾರೆಡ್ಡಿಯಂಥ ಹಿರೀಕರಿಗಾದರೂ ಬುದ್ಧಿ ಬೇಡವೇ? ●

ದತ್ತಾತ್ರೇಯ ದೇವಸ್ಥಾನ -77

ಕಾಂಗ್ರೆಸ್ ಯಡವಟ್ಟೇ ಬಿಜೆಪಿಗೆ ಲಾಭ?


ಎಸ್. ಪ್ರಕಾಶ್

ಮಲ್ಲೇಶ್ವರದ ದತ್ತಾತ್ರೇಯ ದೇವಸ್ಥಾನ ವಾರ್ಡಿಗೆ ಕಾಂಗ್ರೆಸ್ ಟಿಕೆಟ್ ಕೋರಿ ಹಳೇ ಕಾಂಗ್ರೆಸ್ಸಿಗ ನರಸಿಂಗರಾವ್ ಥರದ ಸಭ್ಯ ಬ್ರಾಹ್ಮಣ ಮುಖಂಡರಿದ್ದರು. ಮಾಜಿ ಮೇಯರ್ ರಾಮಚಂದ್ರಪ್ಪನವರ ತಂಗಿ ಮಗ ಗಿರೀಶ್‌ಗಾದರೂ ಟಿಕೆಟ್ ಕೊಡಬಹುದಿತ್ತು, ಇದ್ಯಾವುದನ್ನೂ ಲೆಕ್ಕಿಸದೇ ದೀಕೆ ಸಾಹೇಬರು ಸತ್ತಿ ಅಲಿಯಾಸ್ ಸತ್ಯನಾರಾಯಣ ಎಂಬ ಕೊತ್ವಾಲ್ ರಾಮಚಂದ್ರನ ಶಿಷ್ಯನಿಗೆ 'ಬಿ' ಫಾರ್ಮ್ ಕೊಡಿಸಿದರು.


ಸತ್ತಿ ಸ್ಥಳೀಕನಲ್ಲ, ಕೊತ್ವಾಲ್ ಗ್ಯಾಂಗ್ ಜೈರಾಜ್ ಹತ್ಯೆಗೆಂದು ಕಾನಿಷ್ಕಾ ಹೋಟೆಲಿನ ಮೇಲೆ ದಾಳಿ ನಡೆಸಿದಾಗ ಸತ್ತಿ ಕೂಡ ಕೊತ್ವಾಲ್ ಜೊತೆಗಿದ್ದ. ಆವತ್ತು ಇನ್ಸ್‌ಪೆಕ್ಟರ್ ಬಿ.ಕೆ. ಶಿವರಾಮ್ ಇದೇ ಸತ್ತಿಯನ್ನು ಹಿಡಿದು ಲಾಕಪ್ಪಿಗೆ ದಬ್ಬಿದ್ದರು. ಈಗ ಶಿವರಾಮ್ ಮನೆಯಿರುವ ವಾರ್ಡಿಗೇ ಸತ್ತಿ ಕಾಂಗ್ರೆಸ್ ಅಭ್ಯರ್ಥಿ!

ಮಲ್ಲೇಶ್ವರದ ಯಾವ ಪಕ್ಷನಿಷ್ಠ ಕಾಂಗ್ರೆಸ್ ಕಾರ್ಯಕರ್ತ ತಾನೇ ಸತ್ತಿ ಪರ ಓಟು ಕೇಳಲು ಸಾಧ್ಯ? ಹೀಗಾಗಿ ದತ್ತಾತ್ರೇಯ ದೇವಸ್ಥಾನ ವಾರ್ಡಿನ ಬಹುತೇಕ ಕಾಂಗ್ರೆಸ್ ಮುಖಂಡರೆಲ್ಲ ಮುನಿಸಿಕೊಂಡು ತಟಸ್ಥರಾಗುಳಿದಿದ್ದಾರೆ. ಬಿಜೆಪಿ ವಕ್ತಾರ ಎಸ್. ಪ್ರಕಾಶ್ ಇಲ್ಲಿ ಕಮಲದ ಅಭ್ಯರ್ಥಿ. ಕಾಂಗ್ರೆಸ್ ಯಡವಟ್ಟು ಹೇಗೆ ಬಿಜೆಪಿಗೆ ಲಾಭವಾಗುತ್ತದೆ ಎಂಬುದಕ್ಕೆ ಇದೊಂದು ನಿದರ್ಶನವಷ್ಟೆ. ●


ಯಶವಂತಪುರ -37

ಬಿಜೆಪಿಯ ಪಾಳೆಗಾರರಿಗೆ ಮುನಿರತ್ನರ ಸವಾಲ್

ಯಶವಂತಪುರ ವಾರ್ಡಿನಲ್ಲಿ ಬಿಜೆಪಿ ಪಾಳೆಗಾರಿಕೆಗೆ ಈ ಬಾರಿ ಅಪಾಯ ಕಟ್ಟಿಟ್ಟಬುತ್ತಿ ಅಂತಿದ್ದರೆ ಅದಕ್ಕೆ ಕಾರಣರಾಗಿರುವುದು ಚಿತ್ರ ನಿರ್ಮಾಪಕ ಮುನಿರತ್ನ.


ಮುನಿರತ್ನ

ಮುನಿರತ್ನ ಇಲ್ಲಿ ಕಾಂಗ್ರೆಸ್ ಅಭ್ಯರ್ಥಿ. ಅವರ ವಿರುದ್ಧ ಬಿಜೆಪಿಯ ಸ್ಪರ್ಧಿಯಾಗಿರುವ ಬಿ.ಕೆ ವೆಂಕಟೇಶ್ ಹಳೇ ಕಾಲದ ಪಾಳೆಗಾರ. ಯಶವಂತಪುರದ ಬಂಡಪ್ಪನ ಮಕ್ಕಳೆಂದರೆ ಗೌಡಿಕೆ, ಪಾಳೆಗಾರಿಕೆಯಲ್ಲೇ ಅಧಿಕಾರ ಹಿಡಿದು ಮೆರೆದವರು. ಮೊದಲು ಪ್ರಭಾಕರ್ ಗೆದ್ದು ಕೌನ್ಸಿಲರ್ ಆದರು. ನಂತರ ಬಿ.ಆರ್. ನಂಜಂಡಪ್ಪ ಕೌನ್ಸಿಲರ್ ಆಗಿ ಈಗ ಪಕ್ಕದ ಜೆ.ಪಿ. ಪಾರ್ಕ್ ವಾರ್ಡಿಗೆ ಬಿಜೆಪಿ ಅಭ್ಯರ್ಥಿ. ನಂತರ ಸೋಮಶೇಖರ್ ಗೆದ್ದರು. ಹೀಗೆ ಯಶವಂತಪುರದ ಪಾಳೆಗಾರರನ್ನು ಆ ಕಾಲದಿಂದಲೂ ಗೆಲ್ಲಿಸಿ ಕೌನ್ಸಿಲರ್‌ಗಳನ್ನಾಗಿಸಿಕೊಂಡು ಬಂದ ಜನಕ್ಕೆ ಸಿಕ್ಕಿದ್ದು ದಬ್ಬಾಳಿಕೆಯೊಂದೇ.


ಬಿ.ಕೆ. ವೆಂಕಟೇಶ್

ಒಂದಾನೊಂದು ಕಾಲಕ್ಕೆ ನೂರಾಮೂವತ್ತು ಎಕರೆಗಳಷ್ಟಿದ್ದ ಜಾಲಹಳ್ಳಿಕೆರೆಯನ್ನು ಸರ್ವನಾಶಗೈದು ಅಲ್ಲಿ ಸೈಟುಗಳನ್ನೆಬ್ಬಿಸಿದ ಇದೇ ಬಿ.ಕೆ. ವೆಂಕಟೇಶ್ ವಂಶಸ್ಥರು ಈಗ ಅಭಿವೃದ್ಧಿಯ ಮಂತ್ರ ಜಪಿಸುತ್ತಿದ್ದಾರೆ. ಬಿ.ಕೆ. ವೆಂಕಟೇಶ್ ಮುಂಗೋಪಿ ಮತ್ತು ದೌಲತ್ತಿನ ಆಸಾಮಿ. ಹಿಂದೆ ಅರಸು ಕಾಲದಲ್ಲಿ ಅವರ ಅಳಿಯ ಎಂ.ಡಿ. ನಟರಾಜ್ ಹುಟ್ಟುಹಾಕಿದ ಇಂದಿರಾ ಬ್ರಿಗೇಡ್ ಎಂಬ ರೌಡಿ ಪಡೆಯ ಸಕ್ರಿಯ ಸದಸ್ಯನಾಗಿದ್ದ ಇದೇ ಬಿ.ಕೆ. ವೆಂಕಟೇಶ್‌ಗೆ ಈಗ ವಯಸ್ಸಾಗಿದೆ ನಿಜ. ಆದರೆ ದರ್ಪ ಮತ್ತು ದೌಲತ್ತು ಬಿಟ್ಟಿಲ್ಲ.

ಕಾಂಗ್ರೆಸ್ ಅಭ್ಯರ್ಥಿ ಮುನಿರತ್ನ ಹಾಗಲ್ಲ. ಆ ಕಾಲದಿಂದಲೂ ಕಂಟ್ರಾಕ್ಟರಿಕೆಯಲ್ಲಿದ್ದು ಯಶವಂತಪುರ ಸುತ್ತಮುತ್ತ ವಾರ್ಡು, ಸೇತುವೆ, ಮೋರಿ ಕಟ್ಟಿಸಿಕೊಂಡೇ ಜನರ ಜೊತೆ ಬೆರೆತವರು. ಜೆ.ಪಿ. ಪಾರ್ಕಿನ ನಿರ್ಮಾಣದಲ್ಲಿ ಹಗಲಿರುಳು ಶ್ರಮಿಸಿದ್ದು ಮುನಿರತ್ನರ ಪಾಲಿಗೆ ವರದಾನವಾಗಿಲಿದೆ. ಜೊತೆಗೆ ನಟ ಉಪೇಂದ್ರನ 'ರಕ್ತ ಕಣ್ಣೀರು' ಚಿತ್ರದಂಥ ಹಿಟ್ ಸಿನಿಮಾ ಕೊಟ್ಟಿದ್ದು, ರಾಜ್ಯ ಪ್ರಶಸ್ತಿ ವಿಜೇತ 'ಕಂಬಾಲಪಲ್ಲಿ'ಯಂಥ ದಲಿತ ಪರ ಕತೆಯುಳ್ಳ ಸಿನಿಮಾ ಮಾಡಿದ್ದು ಮುನಿರತ್ನರ ಪಾಲಿಗೆ ಸ್ಪಾರ್‌ವ್ಯಾಲ್ಯೂ ತಂದುಕೊಟ್ಟಿದೆ.

ಬಿಜೆಪಿಯ ದುರಾಡಳಿತ, ಅಸಹ್ಯದ ಕಚ್ಚಾಟ, ಗಣಿ ಲೂಟಿ, ಪಾಲಿಕೆ ಟೆಂಡರ್ ಭ್ರಷ್ಟಾಚಾರ, ಕಾಮಗಾರಿ ಹಗರಣಗಳೆಲ್ಲ ಹೇಗೆ ಮತದಾರರ ಆಕ್ರೋಶಕ್ಕೆ ಕಾರಣವಾಗಿದೆಯೋ ಹಾಗೇ ಪಾಳೆಗಾರರ ದಬ್ಬಾಳಿಕೆಗೂ ಜನ ರೋಸತ್ತಿದ್ದಾರೆ. ಬಿಜೆಪಿಯ ಬಿ.ಕೆ. ವೆಂಕಟೇಶ್‌ಗೆ ಈ ಬಾರಿ ಯಶವಂತಪುರದ ಜನ ಕೈಕೊಡುವ ಸಾಧ್ಯತೆಗಳೇ ಹೆಚ್ಚು. ●

ಚಾಮರಾಜಪೇಟೆ-140

ಸಾಲಮೇಳದ ವಿಜಯ್‌ಕುಮಾರ್ ಗೆಲುವಿನತ್ತ?



ವಿಜಯಕುಮಾರ್

ಬಿ.ವಿ. ಗಣೇಶ್ ಎಂಬ ನೌಟಂಕಿಗೆ ಈ ಬಾರಿ ನಿರಾಶೆ ಕಾದಂತಿದೆ. ಚಾಮರಾಜಪೇಟೆಗೆ ಆತ ಕೌನ್ಸಿಲರ್ ಆಗಿದ್ದಷ್ಟೂ ಕಾಲ ಯಾರ್‍ಯಾರು ಹೊಸಮನೆ ಕಟ್ಟುತ್ತಾರೋ ಅಂಥವರನ್ನು ಸುಲಿದದ್ದೇ ಹೆಚ್ಚು. ಟಿಕೆಟ್ಟು ಕೊಟ್ಟು ಗೆಲ್ಲಿಸಿದ ಬಿಜೆಪಿಗೂ ಆತ ನಿಷ್ಠನಾಗುಳಿಯಲಿಲ್ಲ, ತನಗೆ ಟಿಕೆಟ್ ತಪ್ಪಿತೆಂದು ಶ್ಯಾಮ್‌ಸುಂದರ್ ಗಾಯಕ್‌ವಾಡ್‌ನನ್ನು ಸೋಲಿಸಿ ಪಕ್ಷ ಬದಲಿಸಿ ಈಗ ಮತ್ತೆ ಬಿಜೆಪಿ ಬಾವುಟ ಹಿಡಿದರೆ ನಂಬಲು ಚಾಮರಾಜಪೇಟೆಯ ಜನರೇನು ಮುಠ್ಠಾಳರೇ?

ತಾನು ಮಹಾನ್ ಹಿಂದೂಪರ ಎಂದು ಪೋಜು ಕೊಡುತ್ತಲೇ ಚಾಮರಾಜಪೇಟೆಯ ಈದ್ಗಾ ಮೈದಾನದ ಬಿರುಕು ಬಿಟ್ಟ ಮಸೀದಿ ಕಟ್ಟಿಸಲು ಶಾಸಕ ಜಮೀರ್‌ರಿಂದ ಗಣೇಶ್ ಲಂಚ ತಿಂದಿದ್ದು ಗುಟ್ಟಾಗುಳಿದಿಲ್ಲ.

ಒಂದಾನೊಂದು ಕಾಲಕ್ಕೆ ಪುಡಿ ಚಿಲ್ಲರೆ ಅಂಗಡಿ ಇಟ್ಟುಕೊಂಡಿದ್ದ ಗಣೇಶ್ ಇವತ್ತು ಚಾಮರಾಜಪೇಟೆಯಲ್ಲೇ ನಾಲ್ಕು ಕೋಟಿಯ ಆಸ್ತಿವಂತ. ಸಾಲದ್ದಕ್ಕೆ ಕುಂಬಳಗೋಡಿನಲ್ಲೊಂದು ಖಾಸಗಿ ಲೇಔಟ್ ನಿರ್ಮಿಸಿ ರಿಯಲ್ ಎಸ್ಟೇಟ್ ಕಸುಬಿಗೂ ಕೈಹಾಕಿದ್ದಾನೆ.

ಸ್ಟಂಟ್ ಮಾಡಿಕೊಂಡೇ ಇಷ್ಟೆಲ್ಲವನ್ನೂ ಗಳಿಸಿದ ಬಿ.ವಿ. ಗಣೇಶ್‌ಗೆ ಈಗ ಸೋಲುವ ಭೀತಿ. ಏಕೆಂದರೆ ಕಾಂಗ್ರೆಸ್ ಅಭ್ಯರ್ಥಿ ಬಿ.ಎಸ್. ವಿಜಯ್‌ಕುಮಾರ್ ಪರವಾಗಿ ಅನುಕಂಪದ ಅಲೆಯೆದ್ದಿದೆ. ವಿಜಯ್‌ಕುಮಾರ್ ಕಾಂಗ್ರೆಸ್ ನಿಷ್ಠ. ಜನಾರ್ದನ್ ಪೂಜಾರಿಯ ಸಾಲಮೇಳದಲ್ಲಿ ಸ್ಥಳೀಯ ರೂವಾರಿಯಂತಿದ್ದು ಈ ಸುತ್ತಮುತ್ತಲ ಬಹುತೇಕ ಬಡಬಗ್ಗರಿಗೆ ಸಾಲ ಕೊಡಿಸಿದ ಸುಂದರ್‌ರ ಮಗನೇ ಈ ವಿಜಯ್‌ಕುಮಾರ್. ಹಿಂದೆ ಯುವ ಕಾಂಗ್ರೆಸ್ ಉಪಾಧ್ಯಕ್ಷರಾಗಿದ್ದರು. ಜಿಲ್ಲಾ ಯುವ ಕಾಂಗ್ರೆಸ್ಸಿಗೂ ಅಧ್ಯಕ್ಷರಾಗಿದ್ದರು. ತಂದೆಯ ಜೊತೆ ಸಾಲಮೇಳದಲ್ಲಿ ಸಕ್ರಿಯರಾಗಿದ್ದು ಅಕ್ಕಪಕ್ಕದ ಕೊಳಗೇರಿ ವಾಸಿಗಳಿಗೆ ನೆರವಾದ ವಿಜಯ್‌ಕುಮಾರ್ ಆ ಕಾಲದಿಂದಲೂ ಚಾಮರಾಜಪೇಟೆಯ ಜನಕ್ಕೆ ಒಂದಲ್ಲ ಒಂದು ರೀತಿಯಲ್ಲಿ ನೆರವಾಗುತ್ತಲೇ ಬಂದದ್ದು ಈಗ ಫಲ ಕೊಡುತ್ತಿದೆ.


ಜಮೀರ್ ಅಹಮದ್

ರಾಘವೇಂದ್ರ ಕಾಲೋನಿ, ನಂಜಾಂಬ ಅಗ್ರಹಾರಗಳಲ್ಲಿ ವಿಜಯ್‌ಕುಮಾರ್ ಪರ ಸಿಂಪಥಿಯೇಳುತ್ತಿದೆ. ಚಾಮರಾಜಪೇಟೆಯ ಮತ್ತೊಬ್ಬ ಕಾಂಗ್ರೆಸ್ ನಾಯಕ ಮತ್ತು ಸದ್ಯ ಆಜಾದ್‌ನಗರ ವಾರ್ಡಿಗೆ ಕಾಂಗ್ರೆಸ್ ಅಭ್ಯರ್ಥಿಯಾಗಿರುವ ಸಿ. ಗೋವಿಂದರಾಜ್ ಬೆಂಬಲವೊಂದೇ ವಿಜಯ್‌ಕುಮಾರ್ ಪಾಲಿಗೆ ವರದಾನದಂತಿದೆ. ಇಲ್ಲಿ ಜೆಡಿಎಸ್ ಅಭ್ಯರ್ಥಿಯಾಗಿರುವ ಶಿವಕುಮಾರ್ ಹೇಳಿಕೇಳಿ ರೌಡಿ. ಪಕ್ಕದ ಅಂಜನಪ್ಪ ಗಾರ್ಡನ್ ಮತ್ತು ಭಕ್ಷಿ ಗಾರ್ಡನ್ನಿನ ಹಿಂದುಗಟ್ಟಲೇ ರೌಡಿಗಳನ್ನು ಕಟ್ಟಿಕೊಂಡು ಬೆದರಿಕೆ ಹಾಕಿಯೇ ಬೋಗಸ್ ಓಟ್ ಮೂಲಕ ಗೆಲ್ಲುತ್ತೇನೆಂದು ಹೊರಟ ಜೆಡಿಎಸ್ ಅಭ್ಯರ್ಥಿಗೆ ಆತನ ಕುಖ್ಯಾತಿಯೇ ಮುಳುವಾಗಲಿದೆ.

ರೌಡಿ ಬೆದರಿಕೆಗೆ ಜಗ್ಗದೇ ವಿಜಯ್‌ಕುಮಾರ್ ಮುನ್ನುಗ್ಗಬೇಕಷ್ಟೇ. ●


ಕಾರ್ಟೂನ್ ಕಾರ್ನರ್



ಕುಮಾರಸ್ವಾಮಿ ಲೇಔಟ್-181


ಪುಂಡ ಪಾರ್ಕ್ ಸೂರಿಗೆ ಜೆಡಿಎಸ್ ಬಾಣ

ಕುಮಾರಸ್ವಾಮಿ ಲೇಔಟ್ ವಾರ್ಡ್‌ಗೆ ಬಿಜೆಪಿ ಅಭ್ಯರ್ಥಿಯಾಗಿರುವ ಹೆಚ್.ಸುರೇಶ್ ಉರ್ಫ್ ಪಾರ್ಕ್ ಸೂರಿ ಹೆಸರಿಗಷ್ಟೇ ಬಿಜೆಪಿ ಲೀಡರಾದರೂ ವೃತ್ತಿ ಮತ್ತು ಪ್ರವೃತ್ತಿಯಲ್ಲಿ ರೌಡಿಯೇ. ಮೂಲತಃ ತಮಿಳುನಾಡಿನ ಡೆಂಕಣಿಕೋಟೆಯವನಾದ ಈತ ಕೇವಲ ಐದು ವರ್ಷದಲ್ಲಿ ಕೋಟ್ಯಾಧಿಪತಿಯಾದದ್ದು ಮೀಟರ್ ಬಡ್ಡಿ ದಂಧೆಯಿಂದ ಮತ್ತು ಲ್ಯಾಂಡ್ ಡೀಲಿನಿಂದಲೇ.


ಪಾರ್ಕ್‌ಸೂರಿ

ಪ್ರಾರಂಭದಲ್ಲಿ ಆಟೋ ಓಡಿಸಿಕೊಂಡಿದ್ದ. ಕ್ರಮೇಣ ಟಿವಿಎಸ್ ಮೊಪೆಡ್ ಕೊಡಿಸ್ತೀನಿ ಎಂದು ಚೀಟಿ ಆರಂಭಿಸಿ ನೂರಾರು ಜನಕ್ಕೆ ಮುಂಡಾಯಿಸಿಬಿಟ್ಟ. ಹಾಗೇ ದೋಚಿದ ಚೀಟಿ ದುಡ್ಡನ್ನೇ ರಿಯಲ್ ಎಸ್ಟೇಟ್ ದಂಧೆಗೆ ಹಾಕಿದ. ಅದೂ ಕೂಡಾ ಎಲ್ಲೆಲ್ಲಿ ಸರ್ಕಾರಿ ಜಮೀನಿದೆಯೋ, ಯಾರಿಗೆ ಬಡಿದಾಡುವ ತಾಕತ್ತಿಲ್ಲವೋ ಅಂಥವರ ಸೊತ್ತನ್ನೇ ಹುಡುಕಿ ಕಾಂಪೌಂಡ್ ಎಬ್ಬಿಸುತ್ತಿದ್ದ. ಸೈಟು ಕಳಕೊಂಡವರು ದೂರು ಕೊಟ್ಟರೆ ಪೊಲೀಸರನ್ನೇ ಮುಟ್ಟಿಗೆ ಹಾಕಿಕೊಂಡಿರುತ್ತಿದ್ದ.

ಹೀಗೆ ಪಾರ್ಕು, ಮೋರಿ, ಜಮೀನು ನುಂಗಿದ್ದರಿಂದಲೇ ಸುರೇಶನಿಗೆ ಪಾರ್ಕ್ ಸೂರಿ ಎಂಬ ಹೆಸರು ಬಂತು. ತೀರ ಇತ್ತೀಚೆಗೆ ಅಂದರೆ ಪಾಲಿಕೆ ಚುನಾವಣೆಯ ಹೊಸ್ತಿಲಲ್ಲೇ ಸೂರಿ ಎಂಥಾ ಅನಾಹುತಕಾರಿ ಕೆಲಸಕ್ಕೆ ಕೈಯಿಟ್ಟನೆಂದರೆ ತನಗೆ ಬಡ್ಡಿಕಟ್ಟಲಿಲ್ಲ ಎಂಬ ಒಂದೇ ಕಾರಣಕ್ಕೆ ಖಾಸಗಿ ಕಂಪೆನಿಯೊಂದರ ಉದ್ಯೋಗಿ ಕದಿರೇನಹಳ್ಳಿಯ ಗೌರಮ್ಮ ಬಂಬಾಕೆಯ ಪತಿ ನಾಗರಾಜ್‌ರನ್ನು 2009ರ ನವೆಂಬರ್ ಎರಡು ಕಿಡ್ನಾಪ್ ಮಾಡಿ ತನ್ನ ಎಸ್ಟೇಟಿಗೊಯ್ದು ಕೂಡಿ ಹಾಕಿದ್ದ. ಪತ್ನಿ ಗೌರಮ್ಮ ಬನಶಂಕರಿ ಪೊಲೀಸರಿಗೆ ದೂರು ಕೊಟ್ಟರೂ ಏನೂ ಪ್ರಯೋಜನವಾಗಲಿಲ್ಲ. ಕೊನೆಗೆ ಪತಿ ನಾಗರಾಜ್‌ರನ್ನು ಬಿಡುಗಡೆಗೊಳಿಸಲು ಹೈಕೋರ್ಟ್ ಮೆಟ್ಟಿಲು ಹತ್ತಬೇಕಾಯ್ತು ಗೌರಮ್ಮ.


ಮುನಿತಿಮ್ಮಣ್ಣ

ಇದು ಕುಮಾರಸ್ವಾಮಿ ಲೇಔಟ್‌ನ ಬಿಜೆಪಿ ಅಭ್ಯರ್ಥಿ ಹೆಚ್.ಸುರೇಶ್ ಅಲಿಯಾಸ್ ಪಾರ್ಕ್ ಸೂರಿಯ ಸಂಕ್ಷಿಪ್ತ ಜಾತಕ. ಯಾವತ್ತೂ ಒಂದು ಡಜನ್ನಿನಷ್ಟು ರೌಡಿಗಳನ್ನು ಜೊತೆಗಿಟ್ಟುಕೊಂಡೇ ಓಡಾಡುವ ಸೂರಿ ಬನಶಂಕರಿ ದೇವಸ್ಥಾನದ ಧರ್ಮದರ್ಶಿಯಂತೆ. ತನ್ನಿಂದ ಕೇವಲ ಮೂರು ಲಕ್ಷ ಸಾಲ ಪಡೆದ ತಪ್ಪಿಗೆ ಸೂರಿ ಕಿಡ್ನಾಪ್ ಮಾಡಿದ ನಾಗರಾಜ್‌ರಿಂದ ಒಂದೂವರೆ ಕೋಟಿಯ ಮನೆಯನ್ನೇ ಕಬಳಿಸಲು ಹವಣಿಸಿದ್ದ. ಇದೇ ಕೇಸಿನಲ್ಲಿ ಲಾಕಪ್ಪನ್ನೂ ಕಂಡುಬಂದ.


ಇಂಥವನಿಗೆ ಬಿಜೆಪಿ ಟಿಕೆಟ್ ಕೊಡುತ್ತದೆಯೆಂದರೆ ಕುಮಾರಸ್ವಾಮಿ ಲೇಔಟ್‌ನ ಜನ ಯಾವ ಕಾಡಿಗೆ ಓಡಬೇಕು? ದುರಂತವೆಂದರೆ ಈತನ ಜೊತೆ ಕೈಜೋಡಿಸಿದ ಕಾಂಗ್ರೆಸ್ ಖದೀಮ ಗುರಪ್ಪನಾಯ್ಡು ಈತನ ಕಾಸು ತಿಂದು ಹರೀಶ್ ಎಂಬ ಡಮ್ಮಿ ಅಭ್ಯರ್ಥಿಗೆ ಟಿಕೆಟ್ಟು ಕೊಡಿಸಿದ್ದಾನೆ. ಬಹುಶಃ ಹಳೇ ಕಾಂಗ್ರೆಸ್ ನಾಯಕ ಚಿಕ್ಕಪಾಪಯ್ಯನವರಿಗೆ ಕಾಂಗ್ರೆಸ್ ಟಿಕೆಟ್ಟು ಕೊಟ್ಟಿದ್ದರೆ ಜನ ಪಾರ್ಕ್ ಸೂರಿಯ ಠೇವಣಿ ಕಳೆಯುತ್ತಿದ್ದರು. ಎಲ್ಲಿ ಚಿಕ್ಕಪಾಪಯ್ಯ ಗೆದ್ದು ಪಾರ್ಕ್ ಸೂರಿ ಸೋಲುತ್ತಾನೋ ಎಂದು ಅಳುಕಿದ ಕಾಂಗ್ರೆಸ್ ಧೂರ್ತ ಗುರಪ್ಪನಾಯ್ಡು ಕಾಂಗ್ರೆಸ್ ಕಾರ್ಯಕರ್ತನೇ ಅಲ್ಲದ, ಟಿಕೆಟ್‌ಗಾಗಿ ಅರ್ಜಿಯನ್ನೇ ಹಾಕದ, ಕಾಂಗ್ರೆಸ್ ಕಚೇರಿಯ ಅಡ್ರೆಸ್ ಕೂಡಾ ಗೊತ್ತಿಲ್ಲದ ಹರೀಶ್ ಎಂಬ ಡಮ್ಮಿ ಅಭ್ಯರ್ಥಿಗೆ ಟಿಕೆಟ್ ಕೊಡಿಸಿಕೊಟ್ಟ. ಹೆಸರಿಗಷ್ಟೇ ಹರೀಶ್ ಕಾಂಗ್ರೆಸ್ ಅಭ್ಯರ್ಥಿಯಾದರೂ ಅಸಲಿಗೆ ಆತ ಕೂಡ ಬಿಜೆಪಿಯ ಪಾರ್ಕ್ ಸೂರಿ ಶಿಷ್ಯನೆ!

ಹೀಗಾಗಿ ಕುಮಾರಸ್ವಾಮಿ ಲೇಔಟ್‌ನ ಜನಕ್ಕೆ ಜೆಡಿಎಸ್ ಅಭ್ಯರ್ಥಿ ಎಂ.ಮುನಿತಿಮ್ಮಣ್ಣನ ಹೊರತಾಗಿ ಬೇರೆ ಆಯ್ಕೆಯೇ ಇಲ್ಲ. ಮುನಿತಿಮ್ಮಣ್ಣ ಸಭ್ಯ. ಚಾಲುಕ್ಯ ಸಹಕಾರಿ ಬ್ಯಾಂಕಿನ ನಿರ್ದೇಶಕರಾಗಿ, ಜನತಾ ಬಜಾರ್‌ನ ನೌಕರರ ಸಂಘದ ಪದಾಧಿಕಾರಿಯಾಗಿ; ಕದಿರೇನಹಳ್ಳಿ ಸುತ್ತಮುತ್ತಲ ಬಡಾವಣೆಗಳಿಗೆ ಕುಡಿಯುವ ನೀರಿನ ಬರದ ವಿರುದ್ಧ ಹೋರಾಡಿ ಕಾವೇರಿ ನೀರು ತಂದು ಕೊಟ್ಟಿದ್ದೇ ಮುನಿತಿಮ್ಮಣ್ಣ. ನೀರು ಕೊಟ್ಟ ಋಣಕ್ಕಾದರೂ ಜನ ಮುನಿತಿಮ್ಮಣ್ಣನವರ ಕೈಹಿಡಿಯುತ್ತಾರೆಂದೇ ಬಂಡಾಯ ಕಾಂಗ್ರೆಸ್ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದ ಹಿರಿಯ ಕಾಂಗ್ರೆಸ್ಸಿಗ ಚಿಕ್ಕಪಾಪಯ್ಯನಂಥವರು ಜೆಡಿಎಸ್ ಅಭ್ಯರ್ಥಿ ಮುನಿತಿಮ್ಮಣ್ಣನನ್ನು ಬೆಂಬಲಿಸುತ್ತಿದ್ದಾರೆ. ಜೆಡಿಎಸ್ ವರಿಷ್ಠ ಕಬಡ್ಡಿ ಬಾಬು ಮುನಿತಿಮ್ಮಣ್ಣನನ್ನು ಗೆಲ್ಲಿಸಲು ಅಹೋರಾತ್ರಿ ಶ್ರಮಿಸುತ್ತಿದ್ದಾರೆ.

ಯಾವತ್ತು ಚಿಕ್ಕಪಾಪಯ್ಯನವರಿಗೆ ಕಾಂಗ್ರೆಸ್ ಟಿಕೆಟ್ ಸಿಕ್ಕಿಲ್ಲವೆಂಬುದು ಖಾತ್ರಿಯಾಯ್ತೋ ಅವರ ಬೆನ್ನಿಗಿದ್ದ ಬಹುತೇಕ ಮುಸ್ಲಿಮರೆಲ್ಲ ಪಾರ್ಕ್ ಸೂರಿ ವಿರುದ್ಧ ಜೆಡಿಎಸ್ ಬೆಂಬಲಕ್ಕೆ ನಿಂತಿದ್ದಾರೆ. ಮುಸ್ಲಿಂ ಮತಗಳೇ ಏಳು ಸಾವಿರದಷ್ಟಿವೆ. ಚಿಕ್ಕಪಾಪಯ್ಯನವರ ಜೊತೆಗೇ ಕಾಂಗ್ರೆಸ್ ಟಿಕೆಟ್‌ಗಾಗಿ ಅರ್ಜಿ ಹಾಕಿಕೊಂಡಿದ್ದ ಇತರೇ ಏಳು ಮಂದಿ ಕಾಂಗ್ರೆಸ್ ಲೀಡರುಗಳೂ ಬಂಡೆದ್ದು ಈಗ ಮುನಿತಿಮ್ಮಣ್ಣನವರನ್ನು ಬೆಂಬಲಿಸುತ್ತಿದ್ದಾರೆ. ಏನೇ ಲಗಾಟಿ ಹೊಡೆದರೂ ಜೆಡಿಎಸ್‌ನ ಮುನಿತಿಮ್ಮಣ್ಣನ ವಿರುದ್ಧ ಬಿಜೆಪಿಯ ಪಾರ್ಕ್ ಸೂರಿ ಗೆಲ್ಲಲಾರ. ●

ಹೊಸಹಳ್ಳಿ -124

ರೌಡಿ ಜಯರಾಮನ ಮುಂದೆ ರಾಜು ಡಾಕ್ಟರ್!


ಡಾ.ರಾಜು

ಕಾಂಗ್ರೆಸ್‌ನ ಕರ್ಮವೋ ಏನೋ ಅಥವಾ ವಿಜಯನಗರದ ಶಾಸಕ ಕೃಷ್ಣಪ್ಪನವರ ದೌರ್ಬಲ್ಯವೋ ಗೊತ್ತಿಲ್ಲ. ಹೊಸಹಳ್ಳಿ ವಾರ್ಡ್ (124)ಗೆ ಹಳೇರೌಡಿ ಜಯರಾಮ್ ಉರ್ಫ್ ಮೋಟುಬೆಳ್ಳು ಜಯರಾಮ್ ಗೂಂಡಾಗಿರಿ ಮಾಡಿಯೇ ಕಾಂಗ್ರೆಸ್ ಟಿಕೆಟ್ ಗಿಟ್ಟಿಸಿದ್ದಾನೆ. ಈ ಹಿಂದೆ ಆರ್‌ಪಿಸಿ ಲೇಔಟಿಗೆ ಕೌನ್ಸಿಲರ್ ಆಗಿದ್ದು ಕಟ್ಟುವ ಪ್ರತಿ ಹೊಸ ಬಿಲ್ಡಿಂಗ್‌ನ ಯಾವೊಬ್ಬ ಮಾಲೀಕನನ್ನೂ ಬಿಡದೇ ಸುಲಿದವನು ಜಯರಾಮ. ಕೌನ್ಸಿಲರ್ ಆಗಿದ್ದಷ್ಟೂ ಕಾಲ ಹಳೇಕಲ್ಲು, ಹೊಸಬಿಲ್ಲು ದಂಧೆಯಲ್ಲೇ ಮುಂಡಾಮೋಚಿದ್ದು ಬಿಟ್ಟರೆ ಜಯರಾಮ್ ಬೆಳೆಸಿದ್ದು ಲೋಕಲ್ ರೌಡಿಗಳನ್ನಷ್ಟೇ.

ಕೊನೆಕೊನೆಗೆ ಜಯರಾಮ್ ನಿರ್ಗತಿಕ ಕ್ಷೌರಿಕರನ್ನೂ ಬಿಡದೇ ತನಗೆ ರೋಲ್‌ಕಾಲ್ ಕೊಡಲಿಲ್ಲ ಎಂದು ಹೇರ್‌ಕಟಿಂಗ್ ಸೆಲೂನ್‌ಗಳನ್ನು ಮುಚ್ಚಿಸುವಷ್ಟು ಅಸಹ್ಯಕ್ಕಿಳಿದ. ಹೇಳಿಕೇಳಿ ಹಳೇರೌಡಿ ಕೊತ್ವಾಲ್ ರಾಮಚಂದ್ರನ ಶಿಷ್ಯನಾಗಿದ್ದ. ಗೆದ್ದು ಕೌನ್ಸಿಲರ್ ಆದಮೇಲೂ ಅದನ್ನೇ ಮುಂದುವರೆಸಿ ಮತ್ತೊಬ್ಬ ರೌಡಿ ಚಿಕ್ಕನ ಕಣ್ ರಾಜೇಂದ್ರನ ಜೊತೆ ಚಾಲುಕ್ಯ ಹೋಟೆಲ್ ಅಡ್ಡೆಯಲ್ಲಿದ್ದಾಗಲೇ ಸೈಲೆಂಟ್ ಸುನೀಲನ ಗ್ಯಾಂಗ್ ಅಟ್ಯಾಕ್ ಮಾಡಿ ಜೈರಾಮನ ಕಣ್ಣೆದುರೇ ರಾಜೇಂದ್ರನ ಕೊಲೆಯಾಯಿತು.


ಜಯರಾಮ ಎಂಥ ಹೇಡಿಯೆಂದರೆ ತನ್ನ ಕಣ್ಣೆದುರೇ ರಾಜೇಂದ್ರನ ಕೊಲೆ ನಡೆದರೂ ಕನಿಷ್ಠ ಕೋರ್ಟ್‌ಗೆ ಬಂದು ಸಾಕ್ಷಿ ಹೇಳಲಿಲ್ಲ. ರಾಜೇಂದ್ರನ ಗತಿ ಒತ್ತಟ್ಟಿಗಿರಲಿ, ತನ್ನನ್ನು ಗೆಲ್ಲಿಸಿ ಕೌನ್ಸಿಲರ್ ಮಾಡಿದ ಯಾವೊಬ್ಬ ಕಾಂಗ್ರೆಸ್ ಕಾರ್ಯಕರ್ತನಿಗೂ ಈತ ನಯಾಪೈಸೆಯ ನೆರವಾಗಲಿಲ್ಲ. ಈತನಿಗಿಂತಲೂ ಸಭ್ಯರು, ನಿಷ್ಠರು ಕಾಂಗ್ರೆಸ್ಸಿನಲ್ಲಿದ್ದರೂ ಜಯರಾಮನ ರೌಡಿಸಂನ ಮುಂದೆ ಬೇರಾರೂ ಹೊಸಹಳ್ಳಿಗೆ ಟಿಕೆಟ್ ಪಡೆಯಲಾಗಲಿಲ್ಲ.

ಹೀಗಾಗಿ ಹೊಸಹಳ್ಳಿ ವಾರ್ಡ್‌ನ ಜನಕ್ಕೆ ಬಿಜೆಪಿ ಅಭ್ಯರ್ಥಿ ಡಾ.ರಾಜು ಬಿಟ್ಟರೆ ಬೇರೆ ಗತಿಯೇ ಇಲ್ಲ. ಡಾ.ಎಸ್.ರಾಜು ಸಜ್ಜನ ಮತ್ತು ಧೀಮಾವಂತ. ಇವತ್ತಿಗೂ ಸುತ್ತಮುತ್ತಲ ನೂರಾರು ಬಡವರಿಗೆ ಉಚಿತ ಚಿಕಿತ್ಸೆ ಕೊಟ್ಟು ಕೈಲಾದಷ್ಟು ನೆರವಾಗುತ್ತಿದ್ದಾರೆ. ರಾಜು ತಂದೆ ಪರಮೇಶ್ವರಯ್ಯ ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು. ಉಚಿತ ವಿದ್ಯಾರ್ಥಿನಿಲಯ ಸ್ಥಾಪಿಸಿ, ವಿಜಯನಗರ ನರ್ಸಿಂಗ್ ಹೋಮ್ ಕಟ್ಟಿಸಿ, ಅದು ಟ್ರಿಬಲ್ ಆಸ್ಪತ್ರೆ ಆಗುವತನಕ ಶ್ರಮಿಸಿ, ವಿಜಯನಗರ ಸರ್ಕಾರಿ ಕಾಲೇಜಿನ ಏಳಿಗೆಗೆ ಶ್ರಮಿಸಿದ ಡಾ.ರಾಜು ಓರ್ವ ಲೇಖಕ ಮತ್ತು ಕನ್ನಡ ಪರ ಹೋರಾಟಗಾರ ಕೂಡ.

ಪಕ್ಷ ಬಿಜೆಪಿಯಾದರೇನು? ಸೋಮಣ್ಣನ ಜೊತೆಗಿದ್ದರೇನು? ರೌಡಿ ಜಯರಾಮನಂತೆ ಬಡಕ್ಷೌರಿಕರ ಸೆಲೂನ್ ಮುಚ್ಚಿಸಿ, ಮನೆಕಟ್ಟುವವರನ್ನು ಸುಲಿಯುವಂಥ ಕೇಡಿಯಂತೂ ಅಲ್ಲವಲ್ಲ? ಹೊಸಹಳ್ಳಿ ಜನಕ್ಕೆ ಡಾ.ರಾಜು ಹೊರತಾಗಿ ಬೇರೆ ಆಯ್ಕೆಯೇ ಉಳಿದಿಲ್ಲ. ●


ನಾಯಂಡಹಳ್ಳಿ 131

ಸೋಮಣ್ಣನ ಹೆಸರೇ ರಾಜೇಶ್ವರಿಗೆ ರಕ್ಷೆ


ಬೆಳಗೋಡು ಉಮೇಶ್


ಕಾಂಗ್ರೆಸ್ ವಿರುದ್ಧ ಬಂಡಾಯ ಕಾಂಗ್ರೆಸ್. ಜೆಡಿಎಸ್ ವಿರುದ್ಧ ರೆಬೆಲ್ ಜೆಡಿಎಸ್. ಇವರೆಲ್ಲರ ಕಚ್ಚಾಟದ ಲಾಭ ಮಾತ್ರ ಬಿಜೆಪಿಗೆ!

ಇದು ನಾಯಂಡಹಳ್ಳಿ ವಾರ್ಡಿನ ಸಂಕ್ಷಿಪ್ತ ಚಿತ್ರಣ. ಕಳೆದ ಹತ್ತು ವರ್ಷಗಳಿಂದಲೂ ಕೌನ್ಸಿಲರ್ ಪದವಿಯಲ್ಲಿದ್ದ ಡಿ. ಮುನಿರಾಜು ನಾಯಿಂಡಹಳ್ಳಿಗಾಗಲಿ ಪಂತರಪಾಳ್ಯಕ್ಕಾಗಲಿ ನಯಾಪೈಸೆಯ ನೆರವಾಗಲಿಲ್ಲ. ಈಗ ಪತ್ನಿ ವಿಜಯಾ ಮುನಿರಾಜುರನ್ನು ಜೆಡಿಎಸ್ ಅಭ್ಯರ್ಥಿಯಾಗಿ ಇದೇ ನಾಯಿಂಡಹಳ್ಳಿಗೆ ನಿಲ್ಲಿಸಿ ತಾನು ಪಕ್ಕದ ನಾಗರಬಾವಿಗೆ ನಿಂತ ಮುನಿರಾಜು ವಿರುದ್ಧ ನಾಯಿಂಡಹಳ್ಳಿಯ ಜನಕ್ಕೆ ಸಹಜವಾಗೇ ಸಿಟ್ಟಿದೆ. ಕಾಂಗ್ರೆಸ್ ಟಿಕೆಟ್ಟಿಗಾಗಿ ಏನೆಲ್ಲಾ ಕಸರತ್ತು ಮಾಡಿಯೂ ಫಲ ಕಾಣದ ಕೆರೆಕೃಷ್ಣರ ಪತ್ನಿ ಸವಿತಾ ಇಲ್ಲಿ ರೆಬೆಲ್ ಕಾಂಗ್ರೆಸ್ಸು. ಅಧಿಕೃತ ಕಾಂಗ್ರೆಸ್ ಅಭ್ಯರ್ಥಿಯಾಗಿ ಬಾಲರಾಜ್‌ಗೌಡರ ಪತ್ನಿ ಶಶಿಗೆ ಟಿಕೆಟ್ ಕೊಡಿಸಿದ ಲೋಕಲ್ ಗಾಡ್‌ಫಾದರ್ ಮುನಿಯಪ್ಪನಿಗೆ ಬಂಡೆದ್ದ ಕೆರೆಕೃಷ್ಣನದೇ ದೊಡ್ಡ ತಲೆನೋವು.


ಮುನಿರಾಜು

ಹೀಗಾಗಿ ಬಿಜೆಪಿ ಅಭ್ಯರ್ಥಿ ರಾಜೇಶ್ವರಿಯವರ ಹಾದಿಯಲ್ಲಿ ಕಲ್ಲುಮುಳ್ಳುಗಳೇ ಕಾಣಸುತ್ತಿಲ್ಲ.

ರಾಜೇಶ್ವರಿ ದಲಿತ ನಾಯಕ ಉಮೇಶ್ ಬೆಳಗೋಡು ಪತ್ನಿ. ಬಹುಶಃ ಸೋಮಣ್ಣ ಬಿಜೆಪಿಗೆ ಹೋಗದಿದ್ದರೆ ಉಮೇಶ್ ಬೆಳಗೋಡು ಕಾಂಗ್ರೆಸ್ಸಿನಲ್ಲೇ ಉಳಿದಿರುತ್ತಿದ್ದರು. ಕಳೆದ 25 ವರ್ಷಗಳಿಂದ ನಾಯಿಂಡಹಳ್ಳಿ, ಪಂತರಪಾಳ್ಯ ವಿನಾಯಕ ಲೇಔಟ್, ಮೆಟ್ರೋ ಲೇಔಟ್ ಬಡಾವಣೆಗಳಲ್ಲಿ ಒಂದಲ್ಲಾ ಒಂದು ಹೋರಾಟ ಸಂಘಟಿಸಿಕೊಂಡೇ ಬಂದ ಉಮೇಶ್ ಬೆಳಗೋಡು ಪಂತರಪಾಳ್ಯದ ಅಂಬೇಡ್ಕರ್ ಕಾಲೋನಿಯ ಜನಕ್ಕೆ ಸುಸಜ್ಜಿತ ಬಂಗಲೆ ಕಟ್ಟಿಸಿ ಕೊಡಲು ನೆರವಾದರು. ಇದೇ ಮುನಿರಾಜು ಪಟಾಲಂನ ನೆಲಕಂಟಕರು ವಿನಾಯಕ ಸ್ಲಮ್ಮಿಗೆ ಬೆಂಕಿ ಇಟ್ಟಾಗ ನಿರ್ಗತಿಕ ಉತ್ತರ ಕರ್ನಾಟಕದ ಗುಡಿಸಲುವಾಸಿಗಳ ಪರ ನಿಂತು ಹೋರಾಡಿದರು. ಇಂಥ ಹೋರಾಟಗಳೇ ಇವತ್ತು ಉಮೇಶ್ ಪತ್ನಿ ರಾಜೇಶ್ವರಿಯವರಿಗೆ ನೆರವಾಗುತ್ತಿವೆ.


ಕೆರೆ ಕೃಷ್ಣ

ಮಾಜಿ ಕೌನ್ಸಿಲರ್ ಮುನಿರಾಜು ಬಂಡಾಯ ಕಾಂಗ್ರೆಸ್‌ನ ಕೆರೆಕೃಷ್ಣ ಮತ್ತು ಕಾಂಗ್ರೆಸ್ ಅಭ್ಯರ್ಥಿ ಬಾಲರಾಜ್‌ಗೌಡ ಎಲ್ಲರೂ ನಾಯಿಂಡಹಳ್ಳಿಯವರೇ. ಯಾರೇ ಕೌನ್ಸಿಲರ್‌ಗಳಾದರೂ ಊರಿನವರೇ ಆಗಬೇಕೆಂಬ ಹುನ್ನಾರವೇ ಅವರಿಗೆ ಮುಳುವಾಗುತ್ತಿದೆ. ಊರಿನವರಲ್ಲದ ಬಡಾವಣೆ ಜನ ಮತ್ತು ಬಾಡಿಗೆಯವರೆಲ್ಲ ಇದೊಂದೇ ಕಾರಣಕ್ಕೆ ಈ ಮೂವರು ಅಭ್ಯರ್ಥಿಗಳ ವಿರುದ್ಧ ತಿರುಗಿಬಿದ್ದಿದ್ದಾರೆ. ಅಷ್ಟಕ್ಕೂ ಇವರ್ಯಾರೂ ಊರಿಗೆ ನಯಾಪೈಸೆಯ ನೆರವಾದವರಲ್ಲ. ಸೋಮಣ್ಣ ಮಾಡಿಕೊಟ್ಟ ಬಸ್‌ಸ್ಟ್ಯಾಂಡನ್ನೂ ನೆಲಗಳ್ಳರಿಂದ ಉಳಿಸಲಾಗಲಿಲ್ಲ.

ವಿಜಯಾ ಮುನಿರಾಜು, ಶಶಿ ಬಾಲರಾಜ್ ಗೌಡ ಮತ್ತು ಸವಿತಾ ಕೃಷ್ಣ ಎಂಬ ಮೂರೂ ಲೋಕಲ್ ಅಭ್ಯರ್ಥಿಗಳ ಪೈಕಿ ಊರಿನ ಮತಗಳು ಹಂಚಿಕೆಯಾದರೂ ಲಾಭವಾಗುವುದು ಬಿಜೆಪಿಗೇ. ಗಂಗೊಂಡನಹಳ್ಳಿಯೊಂದರಲ್ಲೇ 9 ಸಾವಿರ ಮತಗಳ ಪೈಕಿ 6 ಸಾವಿರದಷ್ಟು ಮುಸ್ಲಿಂ ಮತಗಳಿವೆ. ಉಳಿಕೆ 3 ಸಾವಿರ ಹಿಂದೂ ಮತಗಳು ಸಾರಾಸಗಟಾಗಿ ಬಿಜೆಪಿಗೆ ಬಂದರೂ ಮುಸ್ಲಿಂ ಮತಗಳೆಲ್ಲ ಒಟ್ಟಾಗುವುದು ಕಷ್ಟ. ಏಕೆಂದರೆ ಮೆಹರ್‌ಜಾನ್ ಎಂಬ ಮುಸ್ಲಿಂ ಮಹಿಳೆಯೊಬ್ಬರು ಪಕ್ಷೇತರಳಾಗಿ ನಿಂತು ಸಾಕಷ್ಟು ಮುಸ್ಲಿಂ ಮತಗಳನ್ನು ಕಬಳಿಸಿದರೆ ಉಳಿಕೆ ಮುಸ್ಲಿಂ ಮತಗಳನ್ನು ಜೆಡಿಎಸ್, ಕಾಂಗ್ರೆಸ್ ಮತ್ತು ರೆಬೆಲ್ ಕಾಂಗ್ರೆಸ್‌ಗಳು ಹಂಚಿಕೊಳ್ಳುತ್ತವೆ. ಇದೂ ಕೂಡ ಬಿಜೆಪಿಗೆ ಅನುಕೂಲವೇ. ಕಳೆದ ಲೋಕಸಭಾ ಚುನಾವಣೆಯಲ್ಲೇ ಬಿಜೆಪಿಗೆ ಎರಡೂವರೆ ಸಾವಿರದಷ್ಟು ಲೀಡ್ ಇತ್ತು. ಈಗ ಕಾಂಗ್ರೆಸ್ ಮತಗಳನ್ನು ಇಬ್ಬರು ಹಂಚಿಕೊಳ್ಳಬೇಕು. ಜೆಡಿಎಸ್‌ಗೆ ಪ್ರತಿಯಾಗಿ ನಿಂತ ಮುಸ್ಲಿಂ ಮಹಿಳೆ ಕೂಡ ಜೆಡಿಎಸ್ಸೇ.


ಎಚ್.ಎಸ್. ರಾಜೇಶ್ವರಿ

ಇನ್ನು ರೆಬೆಲ್ ಕೆರೆಕೃಷ್ಣ ತಾನೇ ಗೆದ್ದುಬಿಟ್ಟೆ ಎಂಬಂತೆ ರೌಡಿ ಪಟಾಲಂ ಕಟ್ಟಿಕೊಂಡು ಕೇಕೆ ಹಾಕುತ್ತಿದ್ದರೆ ನೋಡಿದ ಜನರೇ ನಗಾಡುತ್ತಾರೆ. ಕೆರೆ ಭೂಮಿ ನುಂಗುವುದರ ಜೊತೆಗೆ ರೇಷನ್ ಡಿಪ್ಪೋ ಇಟ್ಟುಕೊಂಡು ತನಗೆ ಬೇಕಾದವರಿಗಷ್ಟೇ ಬಿಪಿಎಲ್ ಕಾರ್ಡ್ ಮಾಡಿಸಿ ದೋಚುವ ಕೃಷ್ಣನ ಶಿಷ್ಯ ವಜ್ರಪ್ಪನದೂ ಇದೇ ರೇಷನ್ ಡಿಪ್ಪೋ ದಂಧೆಯೇ. ಇಲ್ಲಿರುವುದು ಚತುಷ್ಕೋನ ಪೈಪೋಟಿ. ಕಾಂಗ್ರೆಸ್ ಓಟಿಗಾಗಿ ರೆಬೆಲ್ ಕಾಂಗ್ರೆಸ್ಸು. ಜೆಡಿಎಸ್ ವಿರುದ್ಧ ಮುಸ್ಲಿಂ ಇಂದಿಪೆಂಡೆಂಟು. ಕಚ್ಚಾಟದ ಲಾಭ ಮಾತ್ರ ಬಿಜೆಪಿಗೆ!

ಮುನಿರಾಜು ಪಟಾಲಂ, ಕೆರೆಕೃಷ್ಣನ ಗ್ಯಾಂಗ್ ಹಾವಳಿಯಿಂದ ಬಸವಳಿದ ನಾಯಿಂಡಹಳ್ಳಿ, ಈ ಬಾರಿ ಸೋಮಣ್ಣನ ಕಾರಣಕ್ಕಾದರೂ ಬಿಜೆಪಿಯ ರಾಜೇಶ್ವರಿಯವರಿಗೆ ಒಲಿಯಲಿದೆ. ●

ವೀಣಾ ಹಾಗೂ ಡೆರಿಕ್ ಅನಿಲ್ ಎಂಬ ವಿಶಿಷ್ಟ ಅಭ್ಯರ್ಥಿಗಳು


ವೀಣಾ.ಎಸ್

ಬೆಂಗಳೂರು ಮಹಾನಗರ ಪಾಲಿಕೆಯ ಚುನಾವಣೆಯಲ್ಲಿ ಈ ಬಾರಿ ಓಕಳೀಪುರಂ ಹಾಗೂ ಹೆಬ್ಬಾಳ ವಾರ್ಡ್‌ಗಳಲ್ಲಿ ಒಂದು ಗಮನಾರ್ಹ ಪೈಪೋಟಿ, ಸ್ಪರ್ಧೆ ನಡೆಯುತ್ತಿದೆ.

ಓಕಳೀಪುರಂನ 196ನೇ ವಾರ್ಡ್‌ನಲ್ಲಿ ಕಾಂಗ್ರೆಸ್ ಕ್ವೀನ್ ಎಲಿಜಬೆತ್, ಬಿಜೆಪಿಯ ಶರ್ಮಿಳಾ ಹಾಗೂ ಜೆಡಿಎಸ್‌ನ ಮೋಹನ್‌ವಲ್ಲಿ ಜೊತೆ ಪ್ರಜಾ ರಾಜಕೀಯ ವೇದಿಕೆಯ ವೀಣಾ.ಎಸ್ ಕೂಡ ಚುನಾವಣೆ ಸ್ಪರ್ಧೆಯಲ್ಲಿದ್ದಾರೆ. ವೀಣಾ ಲಿಂಗ ಪರಿವರ್ತನೆ ಮಾಡಿಸಿಕೊಂಡು ಚುನಾವಣೆಗೆ ನಿಂತಿರುವ ದಕ್ಷಿಣ ಭಾರತದ ಪ್ರಥಮ ಮಹಿಳೆಯಾಗಿದ್ದಾರೆ.


ಡೆರಿಕ್ ಅನಿಲ್

ಓಕಳೀಪುರಂನಲ್ಲೇ ಹುಟ್ಟಿ ಬೆಳೆದಿರುವ ವೀಣಾ ತನ್ನ ವಾರ್ಡ್ ಅಭಿವೃದ್ಧಿಗಾಗಿ ಮತದಾರರ ಮುಂದೆ ಮಂಡಿಸುತ್ತಿರುವ ಅಜೆಂಡಾ ನಿಜಕ್ಕೂ ಗಮನಾರ್ಹವಾಗಿದೆ. ಶ್ರಮಜೀವಿ ಜನರೇ ಹೆಚ್ಚಿರುವ ಓಕಳೀಪುರಂ ವಾರ್ಡ್ ಮೊದಲಿನಿಂದಲೂ ಅವ್ಯವಸ್ಥೆಯ ಕೂಪವಾಗಿದೆ. ಇಲ್ಲಿ ಕುಡಿಯುವ ನೀರು, ಚರಂಡಿ, ರಸ್ತೆ, ಶೌಚಾಲಯಗಳ ಸೌಲಭ್ಯ ಕಳಪೆಯಾಗಿದೆ.

ಈ ಜನರ ಒಳಿತಿಗಾಗಿ ತಾನು ಅಚ್ಚುಕಟ್ಟಾದ ಶೌಚಾಲಯಗಳು, ಪುಟ್ಟಮಕ್ಕಳಿಗಾಗಿ ಅಂಗನವಾಡಿಗಳು ಹಾಗೂ ಆಟದ ಮೈದಾನ, ಕುಡಿಯುವ ನೀರು ಇನ್ನಿತರ ಸೌಲಭ್ಯಗಳನ್ನು ಕಲ್ಪಿಸಲು ಶ್ರಮಿಸುವುದಾಗಿ ವೀಣಾ ಭರವಸೆ ನೀಡುತ್ತಿದ್ದಾರೆ.

ಹೊಣೆಗಾರಿಕೆಯಿರುವ ರಾಜಕೀಯ ಮುಂದಾಳುಗಳಿಗೆ ಇರಬೇಕಾದ ಗುಣ ಇದು. ದಳ, ಕಾಂಗ್ರೆಸ್, ಬಿಜೆಪಿಗಳ ಅಬ್ಬರ, ಹಣ ಬಲ, ಪುಂಡಾಟಿಕೆಗಳ ಎದುರು ಅತ್ಯಂತ ಆತ್ಮವಿಶ್ವಾಸದಿಂದಲೇ ಪ್ರಚಾರ ಕಾರ್ಯ ನಡೆಸುತ್ತಿರುವ ವೀಣಾ ಜನಬೆಂಬಲಕ್ಕೆ ಅರ್ಹರಾಗಿದ್ದಾರೆ.

ಹೆಬ್ಬಾಳದಲ್ಲಿ ಡೆರಿಕ್ ಅನಿಲ್


ಹೆಬ್ಬಾಳ ವಾರ್ಡ್‌ನಿಂದ ಸ್ಪರ್ಧಿಸುತ್ತಿರುವ ಪ್ರಜಾ ರಾಜಕೀಯ ವೇದಿಕೆಯ ಮತ್ತೊಬ್ಬ ಅಭ್ಯರ್ಥಿ ಡೆರಿಕ್ ಅನಿಲ್. ಡಬಲ್ ಡಿಗ್ರಿ ಪಡೆದಿರುವ ಡೆರಿಕ್ ಅನಿಲ್ ಬಹುಶಃ ಈ ವಾರ್ಡ್‌ನಿಂದ ಸ್ಪರ್ಧಿಸಿರುವ ಕಾಂಗ್ರೆಸ್‌ನ ರಾಮಮೂರ್ತಿ, ಬಿಜೆಪಿಯ ಜಯಪ್ಪ ರೆಡ್ಡಿಗಿಂತ ಸುಶಿಕ್ಷಿತ ಹಾಗೂ ಘನತೆಯ ಅಭ್ಯರ್ಥಿ. ಪರಿಸರ ರಕ್ಷಣೆ, ರೈತರು, ಮಹಿಳೆಯರ ಹಕ್ಕುಗಳಿಗಾಗಿ ಹಲವು ವರ್ಷಗಳಿಂದ ಹೋರಾಟಗಳಲ್ಲಿ ತೊಡಗಿರುವ ಡೆರಿಕ್ ಅನಿಲ್ ಅತ್ಯುತ್ತಮ ಸಂಘಟಕರಾಗಿದ್ದಾರೆ.

ಪ್ರಾಮಾಣಿಕತೆ ಹಾಗೂ ಜನಪರ ಕಾಳಜಿಗಳುಳ್ಳ ಡೆರಿಕ್ ಅನಿಲ್ ದಮನಿತ ಜನತೆಯ ಪ್ರತಿನಿಧಿಯಂತೆ ಚುನಾವಣೆಗೆ ಸ್ಪರ್ಧಿಸಿರುವುದು ನಿಜಕ್ಕೂ ಸ್ವಾಗತಾರ್ಹ ಸಂಗತಿ.

ಹೆಬ್ಬಾಳದ ಮತದಾರರ ಬೆಂಬಲಕ್ಕೆ ಡೆರಿಕ್ ಅನಿಲ್ ಅರ್ಹ ಅಭ್ಯರ್ಥಿಯಾಗಿದ್ದಾರೆ. ●

ಪ್ರಕಾಶ್‌ನಗರ -98

ದೈತ್ಯರ ದೌಲತ್ತಿಗೆ ಚಿನ್ನಿಯ ಚಾಲೆಂಜ್


ಆರ್.ಲಕ್ಷ್ಮಿನಾರಾಯಣ (ಚಿನ್ನಿ)

ಆತನ ಬೆನ್ನಿಗೆ ಯಾವುದೇ ಪಕ್ಷವಿಲ್ಲ, ದುಡ್ಡು, ಹೆಂಡ ಹಂಚಲಾರ, ರೌಡಿಪಡೆ, ಚೇಲಾಗಳು, ಕಾರು ಬೈಕು ಇತ್ಯಾದಿ ಯಾವುದೇ ದೌಲತ್ತಿಲ್ಲದೇ ಕೆಲವೇ ಕೆಲವು ಪ್ರಜ್ಞಾವಂತರ ಜೊತೆ ಸೇರಿ ಮನೆಮನೆ ಸುತ್ತಿ ಓಟು ಕೇಳುತ್ತಿದ್ದರೆ ಜನ ಕರೆಕರೆದು ಕೂಡ್ರಿಸಿ ಆಶೀರ್ವದಿಸುತ್ತಿದ್ದಾರೆ.

ಆತ ಪ್ರಕಾಶನಗರದ ಪಕ್ಷೇತರ ಅಭ್ಯರ್ಥಿ ಆರ್.ಲಕ್ಷ್ಮೀನಾರಾಯಣ!


ಪದ್ಮಾವತಿ

ಜನ ಆತನನ್ನು ಅಕ್ಕರೆಯಿಂದ ಕರೆಯುವುದು ಚಿನ್ನಿ ಎಂದು. ಈ ಹಿಂದೆ ಇದೇ ವಾರ್ಡ್‌ಗೆ ಕೌನ್ಸಿಲರ್ ಆಗಿದ್ದ ಪದ್ಮಾವತಿ ಇಲ್ಲಿ ಕಾಂಗ್ರೆಸ್ ಅಭ್ಯರ್ಥಿ. ಬಿಜೆಪಿಯ ರವೀಂದ್ರನ ಹಿಂದೆ ಭಯಾನಕ ಪಟಾಲಮ್ಮೇ ಇದೆ. ಜೆಡಿಎಸ್ ಅಭ್ಯರ್ಥಿ ಗಣೇಶ್ ನಿಲ್ಲದಿದ್ದರೇನೇ ಚೆನ್ನಾಗಿತ್ತೇನೋ. ವಿ.ನಾಗರಾಜ್ ಅಲಿಯಾಸ್ ಬಾಂಬ್ ನಾಗ ಕೂಡ ಇದೇ ವಾರ್ಡ್‌ಗೆ ಪಕ್ಷೇತರ ಅಭ್ಯರ್ಥಿಯಾಗಿದ್ದಾನೆ. ಈತನನ್ನು ಸೋಲಿಸಲೆಂದೇ ತಮಿಳರ ಓಟುಕೀಳಲು ಗೋಪಿ ಎಂಬ ಮತ್ತೊಬ್ಬ ಆಸಾಮಿ ಪಕ್ಷೇತರನಾಗಿ ಸ್ಪರ್ಧಿಸುತ್ತಿದ್ದಾನೆ. ಆದರೆ ಲಕ್ಷ್ಮೀನಾರಾಯಣನ ಬಗ್ಗೆ ಜನ ಭಾಷೆ-ಧರ್ಮವನ್ನೂ ಮೀರಿ ತೋರಿಸುತ್ತಿರುವ ಪ್ರೀತಿಯಿದೆಯಲ್ಲ; ಅದು ಬೇರೆ ಯಾವುದೇ ಅಭ್ಯರ್ಥಿಯ ಬಳಿ ಕಾಣಿಸುತ್ತಿಲ್ಲ.


ಏಕೆಂದರೆ ಲಕ್ಷ್ಮಿನಾರಾಯಣ ಪ್ರಕಾಶನಗರದ ಮನೆ ಮಗ. ಗೆದ್ದು ಕೌನ್ಸಿಲರ್ ಆದ ಪದ್ಮಾವತಿಯಾಗಲಿ, ಶಾಸಕ ಸುರೇಶ್‌ಕುಮಾರ್ ಆಗಲಿ ಪ್ರಕಾಶನಗರವನ್ನು ಮರೆತು ತಾವಾಯಿತು ದೀಲಾಯಿತು ಎಂದಿದ್ದಾಗ ಜನರ ಕಷ್ಟಕಾರ್ಪಣ್ಯಗಳಿಗೆ ಹೆಗಲು ಕೊಟ್ಟಿದ್ದು ಚಿನ್ನಿ. ಒಂದೇ ಒಂದು ಫೋನ್ ಕರೆಗೆ ಐದೇ ನಿಮಿಷದಲ್ಲಿ ಮನೆ ಮುಂದಿರುತ್ತಾನೆ. ಪಿಂಚಣಿ, ವೃದ್ಧಾಪ್ಯ ವೇತನ, ರೇಷನ್‌ಕಾರ್ಡ್ ಮೋರಿಕಟ್ಟಿದ್ದು, ರೋಡುಕೆಟ್ಟಿದ್ದು, ಕಸ ಎತ್ತದ್ದು.. ಇತ್ಯಾದಿ ಯಾವುದೇ- ಸಮಸ್ಯೆಯಿರಲಿ, ಒಂದೇ ಒಂದು ಫೋನ್ ಕರೆಗೆ ವಾರಗಟ್ಟಲೇ ಓಡಾಡಿ ಕಚೇರಿಗಳನ್ನು ಸುತ್ತಾಡಿ ಅಧಿಕಾರಿಗಳನ್ನೇ ಮನೆಬಾಗಿಲಿಗೆ ಕರೆತಂದು ಕೆಲಸ ಮಾಡಿಕೊಡುವುದು ಲಕ್ಷ್ಮೀನಾರಾಯಣನ ಜಾಯಮಾನ.

ತನ್ನ ಸ್ವಂತ ದುಡಿಮೆಯಿಂದ ನಾನೂರೈವತ್ತು ಮಂದಿಗೆ ವೃದ್ಧಾಪ್ಯ ವೇತನ ಮಾಡಿಸಿಕೊಟ್ಟ. ಮನೆ ಮನೆ ಸುತ್ತಿ ರೇಷನ್‌ಕಾರ್ಡ್ ಕೊಡಿಸಿಕೊಟ್ಟ. ಓಟು ಪಡೆದ ನರೇಂದ್ರಬಾಬು, ಪದ್ಮಾವತಿಯಂಥವರೆಲ್ಲ ತಮ್ಮ ಪಾಡಿಗೆ ತಾವು ಹಾಯಾಗಿದ್ದಾಗ ಚಿನ್ನಿ ಜನರಿಗಾಗಿ ಸರ್ಕಾರಿ ಕಚೇರಿಗಳನ್ನು ಅಲೆಯುತ್ತಿದ್ದ. ಈಗದು ಫಲ ಕೊಡುತ್ತಿದೆ. ಬೇರೆಲ್ಲ ಅಭ್ಯರ್ಥಿಗಳು ಬಾಡಿಗೆ ಜನರನ್ನಿಟ್ಟು ರೋಡ್ ಷೋ ಮಾಡುತ್ತಿದ್ದರೆ ಚಿನ್ನಿಯನ್ನು ಜನರೇ ಕರೆದು ಕಾಫಿ ಕೊಟ್ಟು ಹಾರೈಸುತ್ತಿದ್ದಾರೆ.

ಬಿಜೆಪಿಯ ರವೀಂದ್ರನ ಬೆನ್ನಿಗೆ ನಿಂತವರೆಲ್ಲ ಆತನಿಂದ ದುಡ್ಡು ಸುಲಿಯುವುದರಲ್ಲೇ ಬಿಜಿಯಾಗಿದ್ದಾರೆ. ಪಕ್ಕದ ಶ್ರೀರಾಮಪುರದಿಂದ ಪ್ರಳಯಾಂತಕ ಪಳನೀಕಾಂತ್ ಬೇರೆ ಪಕ್ಷೇತರನಾಗಿ ನಿಂತಿದ್ದಾನೆ. ಈತ ಮತ್ತು ಬಾಂಬ್ ನಾಗನ ಜೊತೆ ಮತ್ತೊಬ್ಬ ಪಕ್ಷೇತರ ಗೋಪಿ ಕೂಡ ತಮಿಳರ ಮತಕ್ಕಾಗಿ ಹೆಣಗಾಡುತ್ತಿದ್ದಾರೆ. ಕಾಂಗ್ರೆಸ್ಸಿನ ಪದ್ಮಾವತಿ ಎಷ್ಟೇ ರೊಕ್ಕ ಸುರಿದರೂ ಪ್ರಕಾಶನಗರದ ಜನ ಮಾತ್ರ ಈ ಬಾರಿ ಲಕ್ಷ್ಮೀನಾರಾಯಣನ ಜೊತೆ ನಿಂತಿದ್ದಾರೆ. ಬಹುಶಃ ಅದಕ್ಕೆ ಇರಬೇಕು ಪ್ರಕಾಶನಗರದ ಜನಪ್ರಿಯ ನಾಯಕ ರೆಡ್ಡಿ ಚಂದ್ರು ಮತ್ತು ಆತನ ಇಡೀ ಫ್ಯಾಮಿಲಿ ಪಕ್ಷೇತರ ಅಭ್ಯರ್ಥಿ ಲಕ್ಷ್ಮೀನಾರಾಯಣನ ಬೆನ್ನಿಗೆ ನಿಂತುಬಿಟ್ಟಿದೆ. ●

ಹಂಪಿನಗರ-133

ಬಂಡಾಯ ಕಾಂಗ್ರೆಸ್ಸಿಗ ರಮೇಶ್ ಬೆನ್ನಿಗೆ ಆರ್‌ಪಿಸಿ ಲೇಔಟ್?


ಜಿ. ರಮೇಶ್

ಕೈಹಿಡಿದು ಕಾಪಾಡಿದ ಗಾಡ್‌ಫಾದರ್ ಲೇಔಟ್ ಕೃಷ್ಣಪ್ಪನವರನ್ನೂ ಧಿಕ್ಕರಿಸಿ ದೀಕೆಯ ಕಾಲು ಹಿಡಿದು ಹಂಪಿನಗರ ವಾರ್ಡಿಗೆ ಕಾಂಗ್ರೆಸ್ ಟಿಕೆಟ್ ಗಿಟ್ಟಿಸಿದ ಶ್ರೀನಾಥ ಈಗ ಅದರ ಫಲ ಉಣ್ಣುತ್ತಿದ್ದಾನೆ. ಸ್ಥಳೀಯ ಕಾಂಗ್ರೆಸ್ಸಿಗರ್ಯಾರೂ ಆತನನ್ನು ಮೂಸಿ ಕೂಡ ನೋಡುತ್ತಿಲ್ಲ, ಬೆನ್ನಿಗೆ ಜನರಿಲ್ಲ, ಪಕ್ಕದ ಹೊಸಹಳ್ಳಿ ವಾರ್ಡಿನಿಂದ ವಲಸೆ ಬಂದವನಿಗೆ ಮತದಾರರು ಮೊದಲೇ ಗೊತ್ತಿಲ್ಲ.

ಎಷ್ಟೇ ರೊಕ್ಕ ಸುರಿದು ಬಾಡಿಗೆ ಬಂಟರನ್ನಿಟ್ಟುಕೊಂಡು ಕಾಂಗ್ರೆಸ್ ಟಿಕೆಟ್ ತಂದಾಕ್ಷಣ ತಾನು ಗೆದ್ದು ಕೌನ್ಸಿಲರ್ ಆದಂತೆಯೇ ಎಂಬ ಶ್ರೀನಾಥನ ಲೆಕ್ಕಾಚಾರ ಹುಸಿಯಾಗಿದೆ!

ಸದ್ಯ ಹಂಪಿನಗರ ವಾರ್ಡಿನ ಕಾಂಗ್ರೆಸ್ ನಿಷ್ಠ ಕಾರ್ಯಕರ್ತರೆಲ್ಲರಿಗೂ ಬಂಡಾಯ ಕಾಂಗ್ರೆಸ್ ಅಭ್ಯರ್ಥಿ ಜಿ. ರಮೇಶ್‌ರೇ ನೆಚ್ಚಿನ ವ್ಯಕ್ತಿ. ಕಳೆದ ಹತ್ತಾರು ವರ್ಷಗಳಿಂದ ಹಂಪಿನಗರದಲ್ಲಿ ಕಾಂಗ್ರೆಸ್ ಪರ ಸಂಘಟಿಸಿಕೊಂಡೇ ಬಂದ ಜಿ. ರಮೇಶ್ ಮತ್ತು ಬಿಜೆಪಿಯ ಚಂದ್ರಶೇಖರಯ್ಯ ಮಧ್ಯೆಯಷ್ಟೇ ಹಣಾಹಣಿಯಿದೆಯೆ ಹೊರತು ಅಧಿಕೃತ ಕಾಂಗ್ರೆಸ್ ಕ್ಯಾಂಡಿಡೇಟ್ ಇಲ್ಲಿ ಲೆಕ್ಕಕ್ಕೇ ಇಲ್ಲ.

ಸ್ಥಳೀಯ ಕಾರ್ಯಕರ್ತರನ್ನು ಲೆಕ್ಕಿಸದೇ ತಮಗಿಷ್ಟ ಬಂದವರಿಗೆ ಟಿಕೆಟ್ ಕೊಟ್ಟರೆ ಏನಾಗುತ್ತದೆ ಎಂಬುದಕ್ಕೆ ಹಂಪಿನಗರ ಅರ್ಥಾತ್ ಆರ್‌ಪಿಸಿ ಲೇಔಟಿನ ಕಾಂಗ್ರೆಸ್ ನಿದರ್ಶನವಷ್ಟೇ.

ನಿನ್ನೆಮೊನ್ನೆಯ ತನಕ ಹಂಪಿನಗರಕ್ಕೆ ಕಾಂಗ್ರೆಸ್ ಅಭ್ಯರ್ಥಿಯೆಂದು ಚಾಲ್ತಿಯಲ್ಲಿದ್ದ ಏಕೈಕ ಹೆಸರೆಂದರೆ ಅದು ಬಾಪೂಜಿನಗರದ ಜಿ. ರಮೇಶ್. ಸ್ಥಳೀಯ ಕದಂಬ ಕನ್ನಡ ಯುವಕರ ಸಂಘದ ಅಧ್ಯಕ್ಷರಾಗಿ ಆವತ್ತಿನಿಂದಲೂ ಕನ್ನಡ ಚಳವಳಿ ಸೇರಿದಂತೆ ಒಂದಲ್ಲ ಒಂದು ಜನಪರ ಹೋರಾಟಗಳಲ್ಲಿ ತೊಡಗಿಸಿಕೊಂಡೇ ಬಂದ ರಮೇಶ್ ಕಳೆದ 20 ವರ್ಷಗಳಿಂದ ಸಕ್ರಿಯ ರಾಜಕಾರಣದಲ್ಲಿದ್ದವರು. ನೂರಾರು ಜನಕ್ಕೆ ತಾವೇ ನಿಂತು ರೇಷನ್ ಕಾರ್ಡ್ ಕೊಡಿಸಿದ್ದಲ್ಲದೇ ವಿಧವಾ ವೇತನ, ವೃದ್ಧಾಪ್ಯ ವೇತನ ವಿತರಣೆಯಲ್ಲಿ ರಮೇಶ್ ಮುಂಚೂಣಿಯಲ್ಲಿದ್ದರು. ಅವರು ಹಮ್ಮಿಕೊಂಡ ಆರೋಗ್ಯ ತಪಾಸಣಾ ಶಿಬಿರ ಮತ್ತು ರಕ್ತದಾನ ಶಿಬಿರಕ್ಕೆ ಇಡೀ ಆರ್‌ಪಿಸಿ ಲೇಔಟಿನ ಜನ ಬಂದದ್ದುಂಟು. ವರ್ಷದ ಹಿಂದಷ್ಟೇ ಸಾಮೂಹಿಕ ವಿವಾಹ ಕಾರ್ಯಕ್ರಮ ಹಮ್ಮಿಕೊಂಡಿದ್ದ ರಮೇಶ್ ಈ ಭಾಗದ ಓರ್ವ ನಿಸ್ವಾರ್ಥಿ ಸಮಾಜಸೇವಕ ಎಂಬುದರಲ್ಲಿ ಎರಡು ಮಾತಿಲ್ಲ.

ಈ ಬಾರಿ ಕಾಂಗ್ರೆಸ್ ಅಭ್ಯರ್ಥಿಯನ್ನಾಗಿ ಅವರನ್ನೇ ನಿಲ್ಲಿಸಬೇಕೆಂಬುದು ಇಲ್ಲಿನ ಸ್ಥಳೀಯ ಕಾಂಗ್ರೆಸ್ ಕಾರ್ಯಕರ್ತರ ಒಕ್ಕೊರಲ ಒತ್ತಾಯವಾಗಿತ್ತು. ಶಾಸಕ ಕೃಷ್ಣಪ್ಪ ಕೂಡ ರಮೇಶ್‌ರನ್ನೇ ಬೆಂಬಲಿಸುತ್ತಿದ್ದರು. ಆದರೆ ಎಲೆಕ್ಷನ್ ಘೋಷಣೆಯಾಗಿ ಕ್ಯಾಟಗರಿ ಘೋಷಣೆಯಾಗಿದ್ದೇ ತಡ ಕೃಷ್ಣ ಬೈರೇಗೌಡ ಮತ್ತು ದೀಕೆಗೆ ಮಸ್ಕ ಹೊಡೆದಿದ್ದ ಶ್ರೀನಾಥ್ 'ಬಿ' ಫಾರ್ಮ್ ಗಿಟ್ಟಿಸಿಬಿಟ್ಟ. ಶ್ರೀನಾಥ್ ಶಾಸಕ ಕೃಷ್ಣಪ್ಪನವರ ನೆಚ್ಚಿನ ಬಂಟ ನಿಜ. ಅದೊಂದೇ ಕಾರಣಕ್ಕೆ ಯಾವುದೋ ವಾರ್ಡಿಗೆ ನಿಲ್ಲುತ್ತೇನೆಂದರೆ ಸ್ಥಳೀಕರಾಗಲಿ ಕಾಂಗ್ರೆಸ್ ಕಾರ್ಯಕರ್ತರಾಗಲಿ ಒಪ್ಪಬೇಕಲ್ಲ?

ಯಾವತ್ತು ರಮೇಶ್‌ಗೆ ಕಾಂಗ್ರೆಸ್ ಕೈಕೊಟ್ಟಿತೆಂಬುದು ಗೊತ್ತಾಯ್ತೋ ಬಂಡೆದ್ದ ಹಂಪಿನಗರ ಕಾಂಗ್ರೆಸ್ಸಿಗರೆಲ್ಲ ಪಕ್ಷವನ್ನೂ ಶಾಸಕ ಕೃಷ್ಣಪ್ಪನವರನ್ನೂ ಒಟ್ಟೊಟ್ಟಿಗೆ ಧಿಕ್ಕರಿಸಿ ರಮೇಶ್ ಬೆನ್ನಿಗೆ ನಿಂತುಬಿಟ್ಟರು. ಹಂಪಿನಗರದ ಒಟ್ಟು 35 ಸಾವಿರ ಮತಗಳ ಪೈಕಿ ರಮೇಶ್ ಪ್ರಾಬಲ್ಯದ ಬಾಪೂಜಿನಗರ, ಕವಿಕಾ ಬಡಾವಣೆ ಮತ್ತು ಮಾರುತಿ ನಗರದ ಮತಗಳೇ 11 ಸಾವಿರದಷ್ಟಿವೆ. ಈ ಪೈಕಿ ಅರ್ಧಕ್ಕರ್ಧ ಬಂದರೂ ರಮೇಶ್ ಒಬ್ಬರೇ 6 ಸಾವಿರದಷ್ಟು ಓಟು ಗಿಟ್ಟಿಸುತ್ತಾರೆ. ಜೆಡಿಎಸ್ ಅಭ್ಯರ್ಥಿ ಅ. ದೇವೇಗೌಡ ಒಕ್ಕಲಿಗರ ಸಂಘದ ನಿರ್ದೇಶಕ. ಒಕ್ಕಲಿಗರ ಓಟುಗಳೆಲ್ಲ ದೇವೇಗೌಡರಿಗೇ ಬಿದ್ದರೂ ಎಂಟು ಸಾವಿರದಷ್ಟಿರುವ ಕುರುಬರ ಮತಗಳೆಲ್ಲ ಸಾರಾಸಗಟಾಗಿ ರಮೇಶ್ ಪಾಲಾಗುತ್ತವೆ.

ಬಿಜೆಪಿ ಚಂದ್ರಶೇಖರಯ್ಯ ಎಂಬ ಹೊರಗಿನ ಆಸಾಮಿಗೆ ಟಿಕೆಟ್ ಕೊಟ್ಟು ಯಡವಟ್ಟು ಮಾಡಿಕೊಂಡಿದೆ. ಮೂಲ ಆರೆಸ್ಸೆಸ್ಸಿಗರಾದರೂ ಚಂದ್ರಶೇಖರಯ್ಯ ಸ್ಥಳೀಕರಲ್ಲ, ಜನರ ಒಡನಾಟವಿಲ್ಲ, ಆತ ಯಾರೆಂಬುದೇ ಯಾರಿಗೂ ಗೊತ್ತಿಲ್ಲ. ಹೀಗಾಗಿ ಸ್ಥಳೀಯ ಅಭ್ಯರ್ಥಿ ಎಂಬ ಮಾನದಂಡಕ್ಕೂ ಉಳಿಯುವ ಏಕೈಕ ವ್ಯಕ್ತಿ ಜಿ. ರಮೇಶ್ ಮಾತ್ರ.

ಅಧಿಕೃತ ಕಾಂಗ್ರೆಸ್ ಅಭ್ಯರ್ಥಿ ಶ್ರೀನಾಥ್ ಏನೇ ಸರ್ಕಸ್ ಮಾಡಿದರೂ ಲೋಕಲ್ ಕಾಂಗ್ರೆಸ್ ಕಾರ್ಯಕರ್ತರು ಮಣಿಯುತ್ತಿಲ್ಲ. ಈ ಭಾಗದ ಜನಪ್ರಿಯ ಕಾಂಗ್ರೆಸ್ ಮುಖಂಡ ಎಂ. ನಟರಾಜ್ (ಸಿಸಿಬಿ ನಟರಾಜ್) ಕೂಡ ಬಂಡಾಯ ಅಭ್ಯರ್ಥಿ ರಮೇಶ್ ಬೆನ್ನಿಗೆ ನಿಂತಿರುವುದು ರಮೇಶ್ ಪಾಲಿಗೆ ವರದಾನದಂತಿದೆ. ಬಾಪೂಜಿನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪ್ರಕಾಶ್ ಕುಮಾರ್, ಡಿಸಿಸಿ ಸದಸ್ಯ ಮುಕುಂದ್, ವೆಂಕಟೇಶ್ವರ ಸ್ಲಮ್ಮಿನ ಮೇಲೆ ಹಿಡಿತವುಳ್ಳ ದೀಪಾಂಜಲಿ ನಗರದ ಉಮಾಶಂಕರ್, ಟಿಕೆಟ್ಟಿಗಾಗಿ ಅರ್ಜಿ ಹಾಕಿದ್ದ ಬಸವರಾಜ್, ಚಂದ್ರಮೌಳಿ, ಸುರಭಿಮಂಜು, ಮಧುಗೌಡ, ಜಗದೀಶ್ ಮಂಜು ಮತ್ತು ಪ್ರೇಮ್‌ಚಂದ್ರ ಮುಂತಾದ ಲೋಕಲ್ ಕಾಂಗ್ರೆಸ್ ನಾಯಕರೆಲ್ಲ ರಮೇಶ್ ಬೆನ್ನಿಗೆ ನಿಂತದ್ದು ಅಧಿಕೃತ ಕಾಂಗ್ರೆಸ್ ಅಭ್ಯರ್ಥಿ ಶ್ರೀನಾಥ್‌ಗೆ ಹಿನ್ನಡೆಯಷ್ಟೇ. ಮಾರ್ವಾಡಿ ಶಾಂತಿಲಾಲ್‌ಗೆ ಸೋಮಣ್ಣ ತನಗೆ ಟಿಕೆಟ್ ತಪ್ಪಿಸಿದ ಎಂಬ ಸಿಟ್ಟಿದೆ. ಹೀಗಾಗಿ ಮಾರ್ವಾಡಿಗಳೆಲ್ಲ ಈ ಬಾರಿ ರಮೇಶ್ ಬೆನ್ನಿಗಿದ್ದಾರೆ. ನಿನ್ನೆಮೊನ್ನೆಯ ತನಕ ಸೋಮಣ್ಣನವರ ಬಲಗೈ ಬಂಟನಂತಿದ್ದ ಟ್ರಾವೆಲ್ಸ್ ಆನಂದ್ ಕೂಡ ರೊಚ್ಚಿಗೆದ್ದು ಪಕ್ಷೇತರ ಅಭ್ಯರ್ಥಿಯಾಗಿ ನಿಂತಿರುವುದು ಬಿಜೆಪಿಗೆ ದೊಡ್ಡ ಪೆಟ್ಟಷ್ಟೇ.

ಎತ್ತಿಂದೆತ್ತ ಲೆಕ್ಕ ಹಾಕಿದರೂ ಹಂಪಿನಗರ ಈ ಬಾರಿ ಬಂಡಾಯ ಕಾಂಗ್ರೆಸ್ ಅಭ್ಯರ್ಥಿ ರಮೇಶ್ ಪಾಲಾಗುವುದು ಶತಸ್ಸಿದ್ಧ. ●

'ಬರಕೊಳ್ರಿ ನನ್ ಕಂಪ್ಯೂಟರ್ ನಂಬರು...'

ಬಿಬಿಎಂಪಿ ಝಲಕ್

ಕಳೆದ ಶನಿವಾರ ನಮ್ಮ ಕಚೇರಿಗೆ ಬಂದ ಫೋನೊಂದರ ಸಾರಾಂಶವಿದು.

"ಸಾರ್, ಕಟ್ಟಾ ಜಗ್ಗನ ಬಗ್ಗೆ ಬರೆದಿದ್ದು ಕರೆಕ್ಟಾಗಿದೆ. ವಸಂತನಗರದಲ್ಲಿ ಕಾಂಗ್ರೆಸ್ ಕ್ಯಾಂಡಿಡೇಟ್ ಪಮ್ಮಿ ಅಂತಾ ಬರೆದಿದ್ದೂ ಕರೆಕ್ಟಾಗೈತೆ. ಆದರೆ ಇವರ ನಡುವೆ ನನ್ನಂತಹ ಕ್ಯಾಂಡಿಡೇಟ್ ಬಗ್ಗೆ ಎರಡು ಸಾಲಾದರೂ ಬರೀಬೇಕಿತ್ತಲ್ಲ ಸಾರ್?"

"ಹೌದು, ಅಂದಂಗೆ ತಾವು ಯಾರು?" ಎಂದೆವು.

"ಹೇಳೋದೇ ಮರ್ತೆ ನೋಡಿ ಸಾರ್. ನಾನು ವಸಂತನಗರದ ಜೆಡಿಎಸ್ ಕ್ಯಾಂಡಿಡೇಟು ಸಾರ್. ಸುಮಾರಾಗಿ ಜನಸೇವೆ ಮಾಡ್ತಾನೇ ಬಂದ್ದೀನಿ. ಅಲ್ಲಿ ಪಾರ್ಕು, ಇಲ್ಲಿ ಶಾಲೆ.. ಎಲ್ಲದಕೂ ಸಖತ್ ಫೈಟು ಮಾಡಿದ್ದೀನಿ ಸಾರ್. ನನ್ನಂತೋರ ಬಗ್ಗೆ ಎರಡು ಸಾಲು ಬರೀಬೇಕಲ್ಲವಾ ಸಾರ್?"

"ಇನ್ನೂ ಏನೇನು ಮಾಡಿದ್ದೀರಾ ಹೇಳಿ.."

"ಬೋ ಕೆಲಸ ಮಾಡ್ದೀನಿ ಸಾರ್. ಎಲ್ಲಾನೂ ಫೋನಿನಲ್ಲಿ ಹೇಳೋಕಾಗಲ್ಲ ಸಾರ್. ಬರಕೊಳ್ರಿ ನನ್ ಕಂಪ್ಯೂಟರ್ ನಂಬರು" ಎಂದರು.

ಇದ್ಯಾವುದಪ್ಪ ಕಂಪ್ಯೂಟರ್ [illegible]ಬರು ಅಂತಾ ನಾವು ಯೋಚಿಸೋದರೊಳಗೆ, ಆ ಕಡೆಯ ಧ್ವನಿ "ಏ ಹುಡುಗಾ, ನನ್ನ ಕಂಪ್ಯೂಟರ್ ನಂಬರು ಕೊಡ್ಲಾ" ಎನ್ನುತ್ತಾ ಮತ್ತೆ ನಮ್ಮೊಂದಿಗೆ ಮಾತಾಡತೊಡಗಿದರು. "ಬರಕೊಳ್ಳಿ. ಎಚ್ ಟಿ ಟಿ ಪಿ ಎರಡು ಬಾಗಿದ ಗೆರೆ, ಎರಡು ಚುಕ್ಕಿ, ಒಂದರ ಕೆಳಗೊಂದು, ಎಮ್ ಸ್ವಾಮಿ ಮತ್ತೊಂದು ಚುಕ್ಕಿ ಬ್ಲಾಗ್‌ಸ್ಪಾಟ್ ಚುಕ್ಕಿ ಕಾಮ್..... ಬರಕೊಂಡಿರಾ?"

ಅಬ್ಬಾ, ಯಾರೋ ಪುಣ್ಯಾತ್ಮ ಈ ಕ್ಯಾಂಡಿಡೇಟು ಮಹಾಶಯನಿಗೆ ಬ್ಲಾಗ್ ಮಾಡಿಕೊಟ್ಟವ್ನೆ. ಈ ಪುಣ್ಯಾತ್ಮ ಬ್ಲಾಗ್ ಅಡ್ರೆಸ್ಸನ್ನು ಕಂಪ್ಯೂಟರ್ ನಂಬರು ಅಂತಾ ಹೇಳತಾ ಕುಂತವ್ನೆ...

ತಮ್ಮ ಪ್ರಾಮಾಣಿಕತೆ, ಜನಸ್ಪಂದನದ ಮೂಲಕ ಮತದಾರರ ಮನ ಗೆಲ್ಲುವ ಬದಲು ಇಂತಹ ಬ್ಲಾಗ್‌ಸ್ಪಾಟ್ ಮೊರೆ ಹೋಗುವ ಇಂತಹ ದಡ್ಡರಿಗೆ ಏನೆನ್ನುವುದು?


ಮೋಸ್ಟಲಿ ಈ ಜೆಡಿಎಸ್ ಕ್ಯಾಂಡಿಡೇಟೂ ಕಟ್ಟಾ ಜಗ್ಗ ತೇಲಿ ಬಿಟ್ಟ ಡಮ್ಮಿ ಇರಬಹುದೇ? ●

ಅರಮನೆ ನಗರ -35

ಕೇಕೆ ಹಾಕಿದ ಎಮ್ಮೆಲ್ಲೇ ಕಣ್ಣೀರಿಟ್ಟ ರಾಜೇಂದ್ರ

ಮಲ್ಲೇಶ್ವರದ ಬಿಜೆಪಿ ಶಾಸಕ ಅಶ್ವತ್ಥನಾರಾಯಣರಿಗೆ ಬಾರಿ ಅರಮನೆ ನಗರದಲ್ಲಿ ಮುಖಭಂಗ ಕಟ್ಟಿಟ್ಟ ತಮ್ಮ ಗೆಳೆಯನೆಂಬ ಒಂದೇ ಕಾರಣಕ್ಕೆ ಜನಕ್ಕೆ ಚಿತನಲ್ಲದ, ಸ್ಥಳೀಕನಲ್ಲದ, ಮೈಬಗ್ಗದ, ಅಸಲಿಗೆ ಬಿಜೆಪಿ ರ್ಯಕರ್ತರೇ ಒಪ್ಪದ ಡಾ. ಶಿವಪ್ರಕಾಶ್ ಎಂಬ ಕಾಲರ್ ಆಸಾಮಿಯನ್ನು ತಂದು ಅರಮನೆನಗರ ಗೆ ಜಡಿದಿದ್ದಾರೆ.

ಆ ಕಾಲದಿಂದಲೂ ವಾರ್ಡಿಗಾಗಿ ಒಂದಲ್ಲ ಒಂದು ರಾಟ ನಡೆಸಿಕೊಂಡೇ ಕೋದಂಡರಾಂಪುರದ ಜಿ ಕೌನ್ಸಿಲರ್ ೕಂದ್ರರಿಗೇ ಬಿಜೆಪಿ ಂದು ಪಕ್ಷ ಮಾತು ತ್ತು, ಮಾತು ತಪ್ಪಿದ ವಿರುದ್ಧ ತಿರುಗಿಬಿದ್ದ ಂದ್ರ ಈಗ ಬಂಡಾಯ ಅಭ್ಯರ್ಥಿ. ಅಧಿಕೃತ ಅಭ್ಯರ್ಥಿ ಶಿವಪ್ರಕಾಶ್ ಲ್ಲೇ ಅಶ್ವತ್ಥನಾರಾಯಣರ ಬೋಸ್ ಎಂಬುದನ್ನು ಹೇಳಿಕೊಳ್ಳುವಂಥ ನೂ ಇದ್ದಂತಿಲ್ಲ. ಹೀಗಾಗಿ ಯ ಬಿಜೆಪಿ ಅಭ್ಯರ್ಥಿ ಕೌನ್ಸಿಲರ್ ರಾಜೇಂದ್ರನೇ ನೆಚ್ಚಿನ ಅಭ್ಯರ್ಥಿ.


ರಾಜೇಂದ್ರ

ಾಂಗ್ರೆಸ್ ಇಲ್ಲಿ ಶ್ರೀನಿವಾಸ್ ಉರ್ಫ್ ಛೇಂಬರ್ ಗೆ ಟಿಕೆಟ್ ಕೊಟ್ಟಿದೆ. ಯಾವುದೋ ಕಾಲಕ್ಕೆ ಸೀನ ಬರ್ ಎಗರಿಸುತ್ತಿದ್ದನಂತೆ. ಜೆಡಿಎಸ್ ಇಂಡಿಯನ್ ಟ್ಯೂಟ್ ಆಫ್ ಸೈನ್ಸ್‌ನ ಸೌಕರರ ನಾಯಕ ನವರನ್ನು ಕಣಕ್ಕಿಳಿಸಿದೆ. ಕಾಳಪ್ಪ ಕೂಡ ಒಂದಷ್ಟು ಕೀಳುತ್ತಾರಾದರೂ ಆತ ಓಟು ಕಿತ್ತಪ್ಪೂ ಕಾಂಗ್ರೆಸ್ ನುತ್ತದೆ. ಹೆಸರಿಗಷ್ಟೇ ಇಲ್ಲಿ ಶಿವಪ್ರಕಾಶ್ ಬಿಜೆಪಿ ರ್ಥಿಯಾದರೂ ಜಿದ್ದಾಜಿದ್ದಿಯಿರುವುದು ಶಾಸಕ ನಾರಾಯಣ ಮತ್ತು ಬಂಡುಕೋರ ರಾಜೇಂದ್ರರ ಮೆ. ಮಾಜಿ ಕೌನ್ಸಿಲರ್ ರಾಜೇಂದ್ರರದ್ದು ಪಾದರಸ ಮಲ್ಲೇಶ್ವರದಲ್ಲಿ ಅಶ್ವತ್ಥನಾರಾಯಣ ಯಾರೆಂದೇ ಲ್ಲದ ಕಾಲದಲ್ಲಿ ಬಿಜೆಪಿಯನ್ನು ಕಟ್ಟಿ ಬೆಳೆಸಿದ್ದು ದ್ರ. ಇಡೀ ಮಲ್ಲೇಶ್ವರ ಕ್ಷೇತ್ರಕ್ಕೆ ಬಿಜೆಪಿ ಕಾರ್ಯಕರ್ತರ ತಮ್ಮನಂತಿದ್ದದ್ದು ರಾಜೇಂದ್ರ ಮಾತ್ರ. ಇದೇ ಎಮ್ಮೆಲ್ಲೇ ಅಶ್ವತ್ಥನಾರಾಯಣರ ಹೊಟ್ಟೆಕಿಚ್ಚಿಗೆ ಕಾರಣ. ಇವತ್ತಾಲ್ಲಾ ನಾಳೆ ಮಲ್ಲೇಶ್ವರದ ಎಮ್ಮೆಲ್ಲೇಗಿರಿಗೆ ಎಲ್ಲಿ ರಾಜೇಂದ್ರ ಪ್ರತಿಸ್ಪರ್ಧಿಯಾಗುತ್ತಾರೋ ಎಂಬ ಅಸೂಯೆಗೆ ಬಿದ್ದೇ ರಾಜೇಂದ್ರರಿಗೆ ಟಿಕೆಟ್ ತಪ್ಪಿಸಿದ್ದಾರೆ.

ಹಾಗಂಥ ರಾಜೇಂದ್ರ ಕೈಕಟ್ಟಿ ಕೂರುವ ಆಸಾಮಿಯಲ್ಲ. ವಾರ್ಡ್ ಕಚೇರಿ ಹಾಗೂ ಶಿಶುವಿಹಾರದ ಪಕ್ಕ ಖಾಲಿಯಿದ್ದ ಜಾಗದಲ್ಲಿ ವಸತಿಗೃಹ ಕಟ್ಟಲು ಪಾಲಿಕೆ ಯತ್ನಿಸಿದಾಗ ಅದನ್ನು ಪ್ರತಿಭಟಿಸಿ ಅಲ್ಲಿ ಪಾರ್ಕ್ ನಿರ್ಮಿಸಿದ್ದು, ಚೌಡಯ್ಯ ಮೆಮೋರಿಯಲ್ ಹಿಂಭಾಗದಲ್ಲಿದ್ದ 20 ಸಾವಿರ ಅಡಿಗಳಷ್ಟು ಭೂಮಿಯನ್ನು ಭೂಗಳ್ಳರ ವಿರುದ್ಧ ಸೆಣಸಾಡಿ ರಕ್ಷಿಸಿದ್ದು, ಸುಧೀಂದ್ರ ನಗರದ ವಾರ್ಡ್ ಕಛೇರಿ ಪಕ್ಕದಲ್ಲಿದ್ದ 10 ಸಾವಿರ ಅಡಿಗಳಷ್ಟು ನಿವೇಶನವನ್ನು ಲ್ಯಾಂಡ್ ಮಾಫಿಯಾಗಳಿಂದ ಕಾಪಾಡಿದ್ದು, ಮಲ್ಲೇಶ್ವದ ಹೆರಿಗೆ ಆಸ್ಪತ್ರೆ ಮುಚ್ಚಿ ಅದನ್ನು ಖಾಸಗಿಯವರು ಕಬಳಿಸಲೆತ್ನಿಸಿದಾಗ ಅದನ್ನು ಪಾಲಿಕೆಗೆ ಉಳಿಸಿಕೊಟ್ಟಿದ್ದು, ವೈದಿಕ ಸಭಾಪಕ್ಕದ ಪಾಲಿಕೆ ಆಸ್ತಿಯನ್ನು ನೆಲಗಳ್ಳರಿಂದ ರಕ್ಷಿಸಿದ್ದು; ಹೀಗೆ ರಾಜೇಂದ್ರ ಕೌನ್ಸಿಲರ್ ಆಗಿ ನಡೆಸಿದ ಹೋರಾಟಗಳನ್ನು ಜನ ಮರೆತಿಲ್ಲ.


ತಮ್ಮ ಇಂಥ ಹೋರಾಟಗಳನ್ನೇ ಮುಂದಿಟ್ಟುಕೊಂಡು ರಾಜೇಂದ್ರ ಪ್ರಚಾರಕ್ಕಿಳಿದಿದ್ದಾರೆ. ಅರಮನೆ ನಗರಕ್ಕೊಂದೇ ಪ್ರತ್ಯೇಕ ಪ್ರಣಾಳಿಕೆಯೊಂದನ್ನು ರಾಜೇಂದ್ರ ಬಿಡುಗಡೆ ಮಾಡಿದ್ದಾರೆ. ಸದ್ಯ ರಾಜೇಂದ್ರರ ಚುನಾವಣಾ ಚಿಹ್ನೆ ಉದಯ ಸೂರ್ಯ. ಬಿಜೆಪಿ ದುರಾಡಳಿತ, ಎಮ್ಮೆಲ್ಲೇ ಅಶ್ವತ್ಥನಾರಾಯಣರ ಸ್ವಾರ್ಥ, ಪಕ್ಷನಿಷ್ಠ ಬಿಜೆಪಿ ಕಾರ್ಯಕರ್ತರ ಸಂಕಟ ಮತ್ತು ಮೈಬಗ್ಗದ ಅಧಿಕೃತ ಅಭ್ಯರ್ಥಿಯ ದೌರ್ಜನ್ಯಗಳೆಲ್ಲವೂ ಒಟ್ಟಾಗಿ ಕೈಗೂಡಿತೆಂದರೆ ರಾಜೇಂದ್ರ ಗೆಲ್ಲುವುದು ಕಷ್ಟವೇನಲ್ಲ. ●

ವಿಜ್ಞಾನನಗರ-81


ಕ್ರಿಮಿನಲ್ ಲೊಡ್ಡೆ ಬಾಬುಗೆ ಬಿಜೆಪಿ ಟಿಕೆಟ್

ಬಿಜೆಪಿ ಪಟ್ಟಿಯ ಕ್ರಿಮಿನಲ್‌ಗಳ ಪೈಕಿ ಅತ್ಯಂತ ವಿಲಕ್ಷಣ ಜಾತಕದ ಅಭ್ಯರ್ಥಿಯೆಂದರೆ ಆತ ವಿಜ್ಞಾನ ನಗರ ವಾರ್ಡಿನ ವಿವೇಕಾನಂದ ಬಾಬು ಉರ್ಫ್ ಲೊಡ್ಡೆ ಬಾಬು!

ಅಧಿಕಾರಕ್ಕಾಗಿ ಬಿಜೆಪಿ ಹೇಗೆ ತನ್ನ ತತ್ವ-ಸಿದ್ಧಾಂತಗಳನ್ನು ಬಲಿಕೊಡುತ್ತದೆ ಎಂಬುದಕ್ಕೆ ಈತನ ಹಿನ್ನೆಲೆಯೇ ಪುರಾವೆಯಂತಿದೆ. ಈ ಲೊಡ್ಡೆ ಬಾಬು ಅನ್ನಸಂದ್ರ ಪಾಳ್ಯದ ರೌಡಿ ಪೀಟರ್. ಇಲ್ಲಿಗೆ ಹತ್ತು ವರ್ಷದ ಹಿಂದೆ ಪೈಲ್ವಾನ್ ರಾಮರೆಡ್ಡಿ ಮತ್ತು ಸೀಮೆಎಣ್ಣೆ ನಾಗರಾಜ್ ತಂಡಗಳ ಮಧ್ಯೆ ಭಯಾನಕ ಹೊಡೆದಾಟಗಳಾದವು. ಮೊದಲು ರಾಮರೆಡ್ಡಿ ಕೊಲೆಯಾದ. ಹತನಾದ ರಾಮರೆಡ್ಡಿಯ ಪರ ಪ್ರತೀಕಾರಕ್ಕೆ ನಿಂತ ಲೊಡ್ಡೆ ಬಾಬು ಆಂಧ್ರದ ಪೆನುಕೊಂಡದಿಂದ ಸುಪಾರಿ ಹಂತಕರನ್ನು ಕರೆಸಿದ್ದೇ ಸೀಮೆಎಣ್ಣೆ ನಾಗರಾಜನನ್ನು ಮುಗಿಸಿಬಿಟ್ಟ. ಜೈಲಿಗೂ ಹೋಗಿದ್ದ.


ನಾರಾಯಣಸ್ವಾಮಿ

ಜೈಲಿಂದ ಬಂದಿದ್ದೇ ತನ್ನ 'ಕಿಲ್ಲರ್' ಇಮೇಜನ್ನು ಬಳಸಿಕೊಂಡು ಪುಢಾರಿಗಿರಿಗೆ ಇಳಿದವನು ಆಗ ಸಿಎಂಸಿಯಾಗಿದ್ದ ಕೃಷ್ಣರಾಜಪುರದ ರಮೇಶ್‌ನಗರ ವಾರ್ಡಿಗೆ ತನ್ನ ಪತ್ನಿ ಗೀತಾಳನ್ನು ನಿಲ್ಲಿಸಿದ. ತಾನು ಪಕ್ಕದ ಅನ್ನಸಂದ್ರ ವಾರ್ಡಿಗೆ ನಿಂತ. ಇಬ್ಬರೂ ಬಿಜೆಪಿ ಅಭ್ಯರ್ಥಿಗಳೇ. ರೌಡಿ ಏಟು-ಬೋಗಸ್ ಓಟು ಮಾಡಿಯೇ ಗಂಡ ಹೆಂಡರಿಬ್ಬರೂ ಕೌನ್ಸಿಲರ್‌ಗಳಾದರು. ಆಗ ಕಾಂಗ್ರೆಸ್ ನಾಯಕ ವರ್ತೂರು ಕೃಷ್ಣಪ್ಪ ಎಮ್ಮೆಲ್ಲೇಯಾಗಿದ್ದರು. ಕೃಷ್ಣರಾಜಪುರ ಸಿಎಂಸಿಗೆ ಕಾಂಗ್ರೆಸ್ ಅಧಿಕಾರ ಹಿಡಿಯಬೇಕೆಂದರೆ ಅದಕ್ಕೆ ಇಬ್ಬರು ಕೌನ್ಸಿಲರ್‌ಗಳ ಕೊರತೆ ಬಿದ್ದಿತ್ತು. ಆಗ ಲೊಡ್ಡೆಬಾಬು ಮತ್ತು ಪತ್ನಿ ಗೀತಾ ತಮ್ಮನ್ನೇ ಹತ್ತು ಲಕ್ಷಕ್ಕೆ ಮಾರಿಕೊಂಡು ಕಾಂಗ್ರೆಸ್ಸಿಗೆ ಓಟು ಕೊಟ್ಟರು. ಪಕ್ಷ ದ್ರೋಹದ ಆರೋಪ ಹೊರಿಸಿದ ಬಿಜೆಪಿ ಕ್ರಾಸ್‌ಓಟ್ ಮಾಡಿದ ಗಂಡಹೆಂಡಿರಿಬ್ಬರನ್ನೂ ಹೊರಹಾಕಿತು. ಆ ಹೊತ್ತಿಗೆ ಲೊಡ್ಡೆಬಾಬು ಮತ್ತೊಂದು ಅನಾಹುತಕ್ಕೆ ಕೈಯಿಟ್ಟು ಲಕ್ಕುಂದಿ ಕೆರೆಯನ್ನು ಕಬಳಿಸಿಬಿಟ್ಟ. ಕಬಳಿಸಿದ ಕೆರೆ ಭೂಮಿಯಲ್ಲಿ ಹಂಗೆ ಕ್ಲಬ್ ಎಂಬ ಮಸಾಜು ರೆಸಾರ್ಟನ್ನು ಆರಂಭಿಸಿ ಬರುವ ಶ್ರೀಮಂತ ಗಿರಾಕಿಗಳಿಗೆ ವಿವಿಧ ಸೇವೆಗಳನ್ನು ಕಲ್ಪಿಸುತ್ತಿದ್ದ.


ಸುರೇಖಾ

ಯಾವತ್ತು ನುಂಗಿದ ಕೆರೆಭೂಮಿಯನ್ನು ವಶಪಡಿಸಿಕೊಳ್ಳಲು ಸರ್ಕಾರ ಮುಂದಾಯಿತೋ ಬಾಬು ಮತ್ತೊಂದು ವರಸೆ ಶುರುವಿಟ್ಟ. ವರ್ತೂರು ಕೃಷ್ಣಪ್ಪನವರ ಕಾಲಿಗೆ ಬಿದ್ದಿದ್ದೇ ತಾನಿನ್ನು ಕಾಂಗ್ರೆಸ್ ಪುಢಾರಿಯೆಂದು ನಂಬಿಸಿದ. ಅಲ್ಲಿಗೆ ಕೆರೆಭೂಮಿ ಮತ್ತು ರೆಸಾರ್ಟು ಬಾಬು ವಶದಲ್ಲೇ ಉಳಿಯು ವಂತಾಯ್ತು. ಬರುಬರುತ್ತ ಕಂಡಕಂಡ ಆಸ್ತಿಗೆ ವಕ್ಕರಿಸಿದ ಬಾಬು ರಿಯಲ್ ಎಸ್ಟೇಟ್, ಲ್ಯಾಂಡ್ ಗ್ರಾಬಿಂಗ್‌ಗೆಂದೇ ರೌಡಿ ಪಡೆಯೊಂದನ್ನು ಹುಟ್ಟು ಹಾಕಿದ. ಜನ ತಾನೇ ಎಷ್ಟು ಅಂತ ಸಹಿಸುತ್ತಾರೆ?

ಅನ್ನಸಂದ್ರಪಾಳ್ಯದಲ್ಲಿ ಆತನ ಕುಖ್ಯಾತಿ ಮತ್ತು ನಟೋರಿಟಿ ಕಂಡೇ ಜನ ಭಯಪಡುವಂತಾಯ್ತು. ಹೇಗೊ ಪಾಲಿಕೆ ಎಲೆಕ್ಷನ್ ಬಂತಲ್ಲ ಬಾಬುಗೆ ಅಧಿಕಾರ ಬೇಕು. ಕನಿಷ್ಠ ತನ್ನ ಭೂಕಬಳಿಕೆಗಾದರೂ ಕೌನ್ಸಿಲರ್ ಎಂಬ ಪಟ್ಟವಿರಬೇಕು. ಆದರೆ ಅನ್ನಸಂದ್ರಪಾಳ್ಯದಲ್ಲಿ ನಿಲ್ಲುವಂತಿಲ್ಲ. ನಿಂತರೆ ಠೇವಣಿ ಕೂಡ ಹುಟ್ಟುವುದಿಲ್ಲ. ಇದೆಲ್ಲ ಲೆಕ್ಕ ಹಾಕಿದ್ದೇ ಲೊಡ್ಡೆ ಬಾಬು ಈ ಬಾರಿ ವಿಜ್ಞಾನ ನಗರಕ್ಕೆ ವಲಸೆ ಬಂದಿದ್ದಾನೆ. ಕಾಂಗ್ರೆಸ್ ತೊರೆದು ಲಕ್ಷಗಟ್ಟಲೇ ತೆತ್ತು ಬಿಜೆಪಿ ಟಿಕೆಟ್ ಖರೀದಿಸಿದ್ದಾನೆ. ಈತನ ವಿರುದ್ಧ ನಿಂತ ಜೆಡಿಎಸ್ ಅಭ್ಯರ್ಥಿ ಪ್ರೇಮಾ ದಮ್ಮಿ. ಹಣಾಹಣಿಯಿರುವುದು ಕಾಂಗ್ರೆಸ್‌ನ ಸುರೇಖಾ ಮತ್ತು ಗೀತಾ ಮಧ್ಯೆಯೇ. ಸುರೇಖಾ ಸ್ಥಳೀಯ ಕಾಂಗ್ರೆಸ್ ನಾಯಕ ನಾರಾಯಣಸ್ವಾಮಿಯ ಅತ್ತಿಗೆ. ಕಳೆದ 30 ವರ್ಷಗಳಿಂದ ಕಾಂಗ್ರೆಸ್ ಕಾರ್ಯಕರ್ತರಾಗಿ ಸದ್ಯ ಪಿಸಿಸಿ ಸದಸ್ಯರಾಗಿರುವ ನಾರಾಯಣಸ್ವಾಮಿಯ ವರ್ಚಸ್ಸೇ ಅತ್ತಿಗೆ ಸುರೇಖಾ ಗೆಲುವಿಗೆ ನೆರವಾಗಲಿದೆ.

ರೌಡಿ ಲೊಡ್ಡೆ ಬಾಬುವಿನ ಕರಾಳ ಜಾತಕ ಗೊತ್ತಿದ್ದೂ ಬಿಜೆಪಿ ಟಿಕೆಟ್ ಕೊಟ್ಟಿದೆಯೆಂದರೆ ಯಾವ ಮುಖ ಹೊತ್ತು ಅದು ನೈತಿಕತೆ ಬೋಧಿಸುತ್ತದೆ?

ಪೀಣ್ಯ ಕೈಗಾರಿಕಾ ಪ್ರದೇಶ - 41

ಅಟ್ಯಾಕ್ ಸೀನನ ವಿರುದ್ಧ ಆಕ್ರೋಶ


ಪೀಣ್ಯ ಕೈಗಾರಿಕಾ ಪ್ರದೇಶ ವಾರ್ಡಿನ ಜನ ಕಮಲದ ಗುರುತು ನೇ ಮುಖ ಸಿಂಡರಿಸುತ್ತಾರೆಂದರೆ ಅದಕ್ಕೆ ಅಟ್ಯಾಕ್ ಸೀನ ಮತ್ತು ರೌಡಿ ಪಟಾಲಮ್ಮಿನ ಹಾವಳಿಯೇ ಕಾರಣ. ಜೆ. ಶ್ರೀನಿವಾಸ್ ಾಸ್ ಅಟ್ಯಾಕ್ ಸೀನ ಉರ್ಫ್ ಈರುಳ್ಳಿ ಸೀನ ಪೀಣ್ಯದ ಹಳೇ ರೌಡಿ. 12 ವರ್ಷದ ಹಿಂದೆ ಶಿವಪುರದ ಯಕಶ್ಚಿತ್ ಮನೆಯೊಂದರಲ್ಲಿದ್ದು ಮಾರಿಕೊಂಡಿದ್ದ ಸೀನ ಇವತ್ತು 'ಐವತ್ತು ಲಕ್ಷ ಕೊಟ್ಟೇ ಬಿಜೆಪಿ ಖರೀದಿಸಿದ್ದೀನಿ' ಎಂದು ಬಹಿರಂಗವಾಗಿ ಡೈಲಾಗ್ ುತ್ತಿದ್ದಾನೆಂದರೆ ಅದಕ್ಕೆ ಆತನ ಲ್ಯಾಂಡ್ ಗ್ರಾಬಿಂಗ್ ತಾಕತ್ತೇ

ಲ ಎರಡೇ ವರ್ಷದಲ್ಲಿ ಸೀನ ಈಪಾಟಿ ದುಡ್ಡು ದುಡಿದದ್ದು ಎಸ್ಟೇಟ್ ರಾಬರಿಯಿಂದ. ಈರುಳ್ಳಿ ಮಾರಿಕೊಂಡಿದ್ದವನು ಸೆಕೆಂಡ್ ಸ್ಟೇಜಿನಲ್ಲಿ ಲೇಔಟ್ ಮಾಡಿ ಸೈಟು ದಂಧೆಗೆ ತಡ, ಆತನ ರೌಡಿ ತಮ್ಮಂದಿರು ಮತ್ತು ಅಕ್ಕನ ಮಕ್ಕಳ ಪಡೆಯೊಂದು ಸೀನನ ಬೆನ್ನಿಗೆ ನಿಂತಿತ್ತು, ಒಂದೇ ಸೈಟನ್ನು ಲು, ಜನಕ್ಕೆ ಮಾರುವುದು, ಮೋಸದ ವಿರುದ್ಧ ದ್ದವರನ್ನು ತನ್ನ ರೌಡಿ ಗ್ಯಾಂಗ್ ಛೂಬಿಟ್ಟು ಹೊಡೆಸುವುದು ನಿತ್ಯ ಕಾಯಕವಾಯಿತು. ಪೊಲೀಸರನ್ನು ಮೊದಲೇ ಕೊಂಡಿರುತ್ತಿದ್ದ ಸೀನನ ವಿರುದ್ಧ ಕೇಸುಗಳ ಮೇಲೆ ಕೇಸುಗಳು ದಾಖಲಾದವೇ ಹೊರತು ಆತ ಕಂಬಿ ಎಣಿಸುವಂತಾಗಲಿಲ್ಲ.


ಬಂಡಾಯ ಜಿ. ರಾಜಣ್ಣ

ಏಕೆಂದರೆ ಆ ಹೊತ್ತಿಗೆ ದಾಸರಹಳ್ಳಿಗೆ ಎಮ್ಮೆಲ್ಲೇ ಕ್ಯಾಂಡಿಡೇಟ್ ಆಗಿ ಬಿಜೆಪಿಯಿಂದ ನಿಂತಿದ್ದ ಮುನಿರಾಜುಗೆ ಸೀನ 30 ಲಕ್ಷ ಕೊಟ್ಟು ಸಂಭಾಳಿಸಿದ್ದ. ಗೆದ್ದು ಎಮ್ಮೆಲ್ಲೆಯಾದ ಮುನಿರಾಜು ಸೀನನ ಹಾವಳಿಗೆ ಮತ್ತಷ್ಟು ಕುಮ್ಮಕ್ಕು ಕೊಟ್ಟರು. ಈಗ ಮತ್ತೆ ಲಕ್ಷಾಂತರ ರೂಪಾಯಿ ಕೊಟ್ಟು ಸೀನ ಬಿಜೆಪಿ ಟಿಕೆಟ್ಟು ಖರೀದಿಸಿದ್ದಾನೆ. ಮಾನವಂತರು, ಪಕ್ಷ ನಿಷ್ಠರಿದ್ದರೂ ಅವರೆಲ್ಲರನ್ನೂ ಬಾಯಿಮುಚ್ಚಿಸಿ ಸೀನನಂಥ ಕಿರಾತಕನಿಗೆ ಬಿಜೆಪಿ ಟಿಕೆಟ್ ಕೊಟ್ಟಿದ್ದರ ವಿರುದ್ಧ ಸ್ಥಳೀಯ ಬಿಜೆಪಿ ನಾಯಕರೆಲ್ಲ ರೊಚ್ಚಿಗೆದ್ದಾಗಲೂ ಶಾಸಕ ಮುನಿರಾಜು ಮಾತ್ರ ಸೀನನ ಕಾಸಿಗೇ ಸಲಾಮು ಹೊಡೆಯುತ್ತಿದ್ದಾರೆ.


ತನ್ನ ಮೇಲಿರುವ ಕ್ರಿಮಿನಲ್ ಕೇಸುಗಳು ಮತ್ತು ನೂರಾರು ಜನಕ್ಕೆ ಮಾಡಿದ ಸೈಟು ವಂಚನೆಯಿಂದ ಬಚಾವಾಗಬೇಕೆಂದರೆ ಸೀನನಿಗೆ ಉಳಿದಿರುವ ಒಂದೇ ದಾರಿಯೆಂದರೆ ಗೆದ್ದು ಕೌನ್ಸಿಲರ್ ಆಗುವುದು. ಅದಕ್ಕೆ ಎಷ್ಟು ಕೋಟಿ ಬೇಕಾದರೂ ಸುರಿಯುತ್ತಾನಂತೆ. ಸದ್ಯ ಪೀಣ್ಯ ಕೈಗಾರಿಕಾ ವಾರ್ಡಿನ ಪ್ರತಿ ಮನೆಗೂ ಕನಿಷ್ಠ ಎರಡು ಸಾವಿರ ರೂಪಾಯಿ ಹಂಚುತ್ತಿದ್ದಾನೆ. ಆತನ ದುಡ್ಡಿನ ದೌಲತ್ತಿನ ವಿರುದ್ಧ ಜನ ಅದೆಷ್ಟು ರೊಚ್ಚಿಗೆದ್ದಿದ್ದಾರೆಂದರೆ ಮೊನ್ನೆಯಷ್ಟೇ ಆತ ಹಂಚಿದ್ದ ಕಳಪೆ ಸೀರೆಗಳನ್ನೆಲ್ಲ ತಂದು ನಡುರಸ್ತೆಯಲ್ಲಿ ಗುಡ್ಡೆ ಹಾಕಿ ಬೆಂಕಿ ಹಚ್ಚಿದ್ದಾರೆ.


ಅಟ್ಯಾಕ್ ಸೀನ

ಹೀಗೆ ಜನರೆಲ್ಲ ಸೇರಿ ಸೀನ ಕೊಟ್ಟಿದ್ದ ಸೀರೆಗಳನ್ನೆಲ್ಲ ರಾಶಿ ಹಾಕಿ ಬೆಂಕಿ ಹಚ್ಚುತ್ತಿದ್ದರೆ ಅದನ್ನು ಚಿತ್ರೀಕರಿಸುತ್ತಿದ್ದ ಟೀವಿ ವರದಿಗಾರರ ಮೇಲೆ ಸೀನನ ರೌಡಿ ತಮ್ಮಂದಿರು ದಾಳಿ ನಡೆಸಿದ್ದಾರೆ. ಓಟು ಕೇಳಲು ಹೋದ ಕಾಂಗ್ರೆಸ್ ಅಭ್ಯರ್ಥಿ ಬಂಡಳ್ಳಿ ರಾಜಣ್ಣನವರ ಮೇಲೂ ಇದೇ ಗ್ಯಾಂಗ್ ಅಟ್ಯಾಕ್ ಮಾಡಿದೆ. ಬಹುಶಃ ಸೀನನ ಪಾಪದ ಕೊಡ ತುಂಬಿರಬೇಕು.

ಪೀಣ್ಯ ಕೈಗಾರಿಕಾ ವಾರ್ಡಿನ ಜನ ಈ ಬಾರಿ ಕಾಂಗ್ರೆಸ್ ಅಭ್ಯರ್ಥಿ ಬಂಡಳ್ಳಿ ಜಿ. ರಾಜಣ್ಣನವರ ಬೆನ್ನಿಗೆ ನಿಂತಿದ್ದಾರೆ. ರಾಜಣ್ಣ ಮಾಜಿ ಕೌನ್ಸಿಲರ್. ರೌಡಿ ಪಡೆಯನ್ನು ಕಟ್ಟಿ ಲ್ಯಾಂಡ್ ಡೀಲಿಗೆ ಇಳಿದವರಲ್ಲ, ಊರಿಗೆ ಕುಡಿಯುವ ನೀರು ಕಲ್ಪಿಸಲು ಬೀದಿಗಿಳಿದು ಹೋರಾಡಿದವರು. ಬಿಜೆಪಿ ದುರಾಡಳಿತದ ವಿರುದ್ಧ ಜನರನ್ನು ಸಂಘಟಿಸುತ್ತಲೇ ಬಂದವರು. ಅದೇ ಈಗ ಅಟ್ಯಾಕ್ ಸೀನನಿಗೆ ಮುಳುವಾಗುತ್ತಿದೆ. ಜೆಡಿಎಸ್ ಇಲ್ಲಿ ಸ್ಪರ್ಧಿಸುತ್ತಿಲ್ಲ, ಅದೂ ಕೂಡ ಕಾಂಗ್ರೆಸ್ ಅಭ್ಯರ್ಥಿ ರಾಜಣ್ಣನವರಿಗೆ ಲಾಭವಾಗಲಿದೆ.

ಎಷ್ಟೇ ದುಡ್ಡು ಸುರಿದು ಏನೆಲ್ಲಾ ಗೂಂಡಾಗಿರಿ ನಡೆಸಿದರೂ ಅಟ್ಯಾಕ್ ಸೀನನಂಥ ರೌಡಿಯನ್ನು ಪೀಣ್ಯ ಕೈಗಾರಿಕಾ ವಾರ್ಡಿನ ಮತದಾರರು ಒಪ್ಪಲಾರರು. ●



ಬೆಂಗಳೂರಿನ ಪಾತಕಿಯೊಬ್ಬ ರಕ್ಷಣಾ ಇಲಾಖೆಯಲ್ಲಿ ಬುಲೆಟ್ ಪ್ರೂಫ್ ಜಾಕೆಟ್ ಹಾಗೂ ನೈಟ್ ವಿಜನ್ ಗ್ಲಾಸ್‌ಗಳ ಸರಬರಾಜು ಕಾಂಟ್ರಾಕ್ಟ್ ಗಿಟ್ಟಿಸಲು ಅಕ್ರಮ ಹಾದಿ ಹಿಡಿದು ಸಿಕ್ಕಿಬಿದ್ದಿರುವ ಕುರಿತು ಒಂದು ವರದಿ.....

ರಕ್ಷಣಾ ಇಲಾಖೆ ಹಗರಣದಲ್ಲಿ ಡಾನ್

ಬುಲೆಟ್ ಪ್ರೂಫ್ ಜಾಕೆಟ್ ಖರೀದಿ ವಂಚನೆ

● ಪಾರ್ವತೀಶ

ದಿನ ಬೆಳಗಾದರೆ 'ಜೈ ಕರ್ನಾಟಕ ಮಾತೆ' ಎಂದು ಸ್ಲೋಗನ್ ಹಾಕುತ್ತಿರುವ ನಿತ್ಯ ಸಮಾಜ ಸೇವಕ, ಭೂಗತಲೋಕದ ಪಾತಕಿಯೊಬ್ಬ ಭಾರತದ ರಕ್ಷಣಾ ಇಲಾಖೆಗೆ ಬುಲೆಟ್ ಪ್ರೂಫ್ ಜಾಕೆಟ್‌ಗಳ ಸರಬರಾಜು ಕಾಂಟ್ರ್ಯಾಕ್ಟ್ ಒಂದನ್ನು ಗಿಟ್ಟಿಸಿಕೊಳ್ಳಲು ಹೋಗಿ ಎಡವಟ್ಟು ಮಾಡಿಕೊಂಡಿದ್ದಾನೆ. ಒಂದು ಕಾಲದಲ್ಲಿ ದಾವೂದ್ ಇಬ್ರಾಹಿಂನ ಗ್ಯಾಂಗ್‌ನಲ್ಲಿದ್ದ ಈ ಪಾತಕಿ ಈಗಲೂ ಅರಬ್ ದೇಶಗಳ ಹಾಗೂ ರಷ್ಯಾದೇಶದ ಮಾಫಿಯಾದೊಂದಿಗೆ ಲಿಂಕ್ ಹೊಂದಿದ್ದಾನೆ. ಆದರೆ ತಾನೀಗ ಬದಲಾಗಿದ್ದು ಸಮಾಜ ಸೇವೆ ಮಾಡುತ್ತಿರುವುದಾಗಿ ಬೊಗಳೆ ಪ್ರಚಾರ ಗಿಟ್ಟಿಸುತ್ತಿದ್ದಾನೇ. ಇಂತಹ ಹಿನ್ನೆಲೆಯ ಈ ಡಾನ್ ಈಗ ದುಡ್ಡು ಮಾಡಲು ರಕ್ಷಣಾ ಇಲಾಖೆಯ ಡೀಲ್‌ಗೆ ಕೈಹಾಕಿದ್ದಾನೆ. ಸುಮಾರು 300 ಕೋಟಿ ರೂಪಾಯಿಗಳ 59 ಸಾವಿರದಷ್ಟು ಬುಲೆಟ್ ಪ್ರೂಫ್ ಜಾಕೆಟ್ ಹಾಗೂ ನೈಟ್‌ವಿಜನ್ ಗ್ಲಾಸ್‌ಗಳ ಸರಬರಾಜು ಗುತ್ತಿಗೆ ವ್ಯವಹಾರ ವಿದು. ಇದರ ಡೀಲ್ ಕುದುರಿಸುವಾಗ ರಕ್ಷಣಾ ಇಲಾಖೆಯ ಅಧಿಕಾರಿಯೊಬ್ಬರನ್ನು ಬೆದರಿಸಿ ಬ್ಲಾಕ್‌ಮೇಲ್ ಮಾಡಿದ ಆರೋಪ ಈಗ ಡಾನ್ ವಿರುದ್ಧ ಕೇಳಿಬರುತ್ತಿದೆ. ಈ ಘನಂದಾರಿ ಕೆಲಸ ಮಾಡುವ ಜೊತೆಗೆ ಡಾನ್ ಬಗ್ಗೆ ಇನ್ನೊಂದು ಸಂಗತಿಯೂ ಕೇಳಿಬರುತ್ತಿದೆ. 'ರಾ' (Research and Analysis wing-RAW) ಎಂಬ ಗೂಢಚರ್ಯೆಯ ಇಲಾಖೆಯಲ್ಲಿ ಆಫೀಸರ್ ಆಗಿರುವ ಮಹಿಳೆಯೊಬ್ಬಳ ಪರಿಚಯ ಇವನಿಗಿದೆ. ಈ ಲಿಂಕ್ ಬಳಸಿಕೊಂಡು ಸೇನಾ ಸರಬರಾಜು ಪ್ರಕ್ರಿಯೆಯ ರಹಸ್ಯ ಹಾಗೂ ಸೂಕ್ಷ್ಮ ಮಾಹಿತಿಗಳನ್ನು ಅಕ್ರಮವಾಗಿ ಡಾನ್ ಪಡೆದುಕೊಂಡ ಬಗ್ಗೆಯೂ ತನಿಖೆ ಚಾಲೂ ಆಗಿದೆಯೆಂದು ದೆಹಲಿಯಲ್ಲಿ ದಟ್ಟ ವದಂತಿಗಳು ಹಬ್ಬಿವೆ.

ಇವೆಲ್ಲಾ ಕರ್ನಾಟಕದ ಜನ ಊಹಿಸಿಕೊಳ್ಳಲೂ ಅಸಾಧ್ಯವಾಗಿರುವ ಸಂಗತಿಗಳಾಗಿವೆ. ಬೆಂಗಳೂರು ವಾಸಿ ಈ ಡಾನ್ ಯಾರೆಂದು ಬಹುತೇಕರಿಗೆ ಗೊತ್ತಿದೆ. ಒಂದು ಕಾಲದಲ್ಲಿ ಪೊಲೀಸರಿಗೆ ಬೇಕಾಗಿದ್ದ ವ್ಯಕ್ತಿ, ಈಗ ಸಮಾಜಸೇವಕನ ಮುಖವಾಡವ್ಹೂ ಇದೆ. ಅಂತವನು ಇಂಡಿಯಾ ದೇಶದ ಸೈನಿಕರಿಗೆ ಬುಲೆಟ್ ಪ್ರೂಫ್ ಜಾಕೆಟ್‌ಗಳನ್ನು ತಯಾರಿಸಿ ಸರಬರಾಜು ಕೊಡುವ 'ದೇಶಭಕ್ತ' ಹೇಗಾದ ಎಂಬ ಪ್ರಶ್ನೆ, ಅನುಮಾನ ಬಾರದಿರದು.

ಇಲ್ಲಿ ಮೊದಲೇ ಒಂದು ವಿಚಾರ ಸ್ಪಷ್ಟಪಡಿಸಬೇಕಿದೆ.

ಗಡಿ ಕಾಯುವ ಸೈನಿಕರಿಗೆ, ಶತ್ರುವಿನೊಂದಿಗೆ ಕಾದಾಡುವ ಯೋಧರಿಗೆ ದೇಶಭಕ್ತಿಯ ಭಾವನೆ ಇರುತ್ತದೆಯಾಗಲೀ ನಮ್ಮ ರಾಜಕಾರಣಿಗಳಿಗಾಗಲಿ, ಸೇನೆಗೆ ಮದ್ದುಗುಂಡು, ಗನ್ನು, ಟ್ಯಾಂಕ್ ಸರಬರಾಜು ಮಾಡುವವರಿಗೆ ಅವೆಲ್ಲಾ ಬುಲ್‌ಶಿಟ್. ಎಷ್ಟು ದುಡ್ಡು, ಕಿಕ್‌ಬ್ಯಾಕ್, ಎಷ್ಟು ಲಾಭ ಎನು ಎಂದು ಲೆಕ್ಕಹಾಕಿ ಹಣ ದೋಚುವುದು ಬಿಟ್ಟರೆ ಇವರಿಗೆ ಬೇರೆ ವಿಚಾರಗಳ ಗೊಡವೆ ಬೇಕಿರುವುದಿಲ್ಲ. ಅಪ್ರತಿಮ ನಾಯಕ ಎನಿಸಿಕೊಂಡಿರುವ ಅಟಲ್ ಬಿಹಾರಿ ವಾಜಪೇಯಿ ಪ್ರಧಾನಿಯಾಗಿದ್ದಾಗಲೇ ಕಾರ್ಗಿಲ್ ಯುದ್ಧದಲ್ಲಿ ಸತ್ತ ಸೈನಿಕರಿಗಾಗಿ ಖರೀದಿಸಿದ ಶವಪೆಟ್ಟಿಗೆಗಳಲ್ಲೂ ಲಂಚ ನುಂಗಿದ ಹಗರಣವನ್ನು ಜನ ಇನ್ನೂ ಮರೆತಿಲ್ಲ.

ಈಗ ಡಾನ್ ಹಗರಣಕ್ಕೆ ಮತ್ತೆ ಬರುವುದಾದರೆ ಕೇಂದ್ರ ಗೂಢಚರ್ಯೆ ಇಲಾಖೆ ಹಾಗೂ ಡಿಫೆನ್ಸ್ ಇಲಾಖೆಯ ಆಫೀಸರ್‌ಗಳು ಈ ಡಾನ್ ವಿರುದ್ಧ ತನಿಖೆ ಚಾಲೂ ಮಾಡುತ್ತಿರುವುದಕ್ಕೆ ಅನೇಕ ಆಯಾಮಗಳಿವೆ.

ಮೊದಲೇ ಹೇಳಿದಂತೆ ಹಿರಿಯ ಸೇನಾಧಿಕಾರಿಯೊಬ್ಬರಿಗೆ ಬ್ಲಾಕ್‌ಮೇಲ್ ಮಾಡಿದ ಹಾಗೂ ಲೇಡಿ ಆಫೀಸರ್ ಒಬ್ಬಳ ಮೂಲಕ ರಹಸ್ಯ ಮಾಹಿತಿ ಪಡೆದ ಆರೋಪಗಳ ಜೊತೆಗೆ ಡಾನ್ ಈಗ ತಾನೇ ಒಂದು ರಕ್ಷಣಾ ಉಪಕರಣಗಳ ಕಂಪೆನಿ ಸ್ಥಾಪಿಸಲು ಹೊರಟಿದ್ದಾನೆ. ಅಂದ ಹಾಗೆ ಇವನ ಪಾರ್ಟನರ್ ಯಾರು ಗೊತ್ತೇ?

ಅದೇ 'ರಾ'ದ ಲೇಡಿ ಆಫೀಸರಳ ಸೋದರ!

ಅವನ ಹೆಸರು ಕೆ.ಎಸ್.ಭರತ್!

ಸೇನಾ ಸರಬರಾಜು ಬದಲಾದ ಪಾಲಿಸಿ.

ಭಾರತದಲ್ಲಿ ಖಾಸಗೀಕರಣ ಎಲ್ಲಾ ಕ್ಷೇತ್ರಗಳಲ್ಲೂ ಆವರಿಸಿಕೊಂಡಿದೆ. ಅದೇ ರೀತಿ ಡಿಫೆನ್ಸ್ ಇಲಾಖೆಯಲ್ಲೂ ಈಗ ಬಾಂಬು, ಬಂದೂಕು, ಯುದ್ಧ ವಿಮಾನ, ಬುಲೆಟ್‌ಪ್ರೂಫ್ ಜಾಕೆಟ್... ಇತ್ಯಾದಿಗಳ ಉತ್ಪಾದನೆ, ಸರಬರಾಜಿಗೆ ವಿದೇಶಿ, ಖಾಸಗಿ ಕಂಪೆನಿಗಳಿಗೂ ಅವಕಾಶವಿದೆ. ಆದರೆ ಭಾರತದೊಳಗಡೆಯೇ ರಕ್ಷಣಾ ಸಲಕರಣೆಗಳ ಉತ್ಪಾದನೆಗೆಂದು ಬರುವವರು ಕಡ್ಡಾಯವಾಗಿ ಭಾರತೀಯ ಕಂಪೆನಿಗಳ ಜಂಟಿ ಸಹಯೋಗ ಹೊಂದಿರಲೇಬೇಕೆಂಬ ಕಾನೂನಿದೆ. 2001ರಲ್ಲಿ ಜಾರಿಗೆ ಬಂದ ಕಾನೂನು ಇದು. ಈ ಅವಕಾಶ ಬಳಸಿಕೊಂಡು ಅನೇಕ ಭಾರತೀಯ ಕಂಪೆನಿಗಳು ಈಗ ಮಿಲಿಟರಿಯವರಿಗೆ ಬೇಕಾಗುವ ವಸ್ತುಗಳ ಉತ್ಪಾದನೆಗೆ ಹೊರಟಿವೆ. ಇಂಡಿಯಾದಲ್ಲಿ ಜನರಿಗೆ ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಜುಟ್ಟಿಗೆ ಮಲ್ಲಿಗೆ ಹೂ ಎನ್ನುವಂತೆ ಶಿಕ್ಷಣ, ಆರೋಗ್ಯಕ್ಕೆ ಹಣ ಕೊಡದಿದ್ದರೂ ಮಿಲಿಟರಿ ಖರ್ಚಿಗೆ ಎಂದೂ ಕಡಿಮೆ ಮಾಡಿಲ್ಲ, ಅಷ್ಟೇ ಅಲ್ಲ, ಪ್ರತಿ ವರ್ಷ ಮಿಲಿಟರಿ ಖರ್ಚು ಜಾಸ್ತಿಯಾಗುತ್ತಿದೆ. ಬಜೆಟ್‌ನಲ್ಲೂ ವರ್ಷಕ್ಕೆ ಎರಡು ಲಕ್ಷ ಕೋಟಿ ರೂಪಾಯಿಗಳಿಗೂ ಜಾಸ್ತಿ ಹಣ ರಕ್ಷಣಾ ವೆಚ್ಚಕ್ಕೊಂದೇ ನಿಗದಿ ಮಾಡಲಾಗಿದೆ. ದುಡ್ಡು ಮಾಡಬೇಕೆನ್ನುವವರಿಗೆ ಇದೆಲ್ಲಾ ದೊಡ್ಡ ಅವಕಾಶ ಮಾಡಿಕೊಡುತ್ತಿವೆ.

ಯಾವ್ಯಾವುದೋ ಲಿಂಕುಗಳು, ಲ್ಯಾಂಡ್ ಡೀಲ್‌ಗಳಲ್ಲಿ ಮುಳುಗಿರುವ ಡಾನ್‌ಗೂ ಇಂತಹ ಒಂದು ಡಿಫೆನ್ಸ್ ಡೀಲ್ ಕುದುರಿಸಿ ಒಂದಷ್ಟು ಕೋಟಿ ಹಣ ಗೆಬರಿಕೊಳ್ಳುವ ಯೋಚನೆ ಬಂತು. ಇದು ಹೇಗಾಯಿತೆಂಬುದೇ ಒಂದು ಕತೆ.

ಬ್ಲ್ಯಾಕ್‌ಮೇಲ್ ಕತೆ

ರಕ್ಷಣಾ ಇಲಾಖೆಯ ಅಧಿಕಾರಿಯೊಬ್ಬನಿಗೆ ಡಾನ್ ಬ್ಲಾಕ್‌ಮೇಲ್ ಮಾಡಿರುವ ಬಗ್ಗೆ ಈಗ ಕೇಂದ್ರ ಗೂಢಚರ್ಯೆ ಇಲಾಖೆ ತನಿಖೆ ಆರಂಭಿಸುತ್ತಿದೆ ಎಂದು ಹೇಳಲಾಗಿದೆಯಷ್ಟೇ. ಇದು ಹೇಗೆ ಶುರುವಾಯಿತೆಂದರೆ ಈ ಆಫೀಸರ್‌ನ ಮಗಳೊಬ್ಬಳಿಗೆ ಆಸ್ಟ್ರೇಲಿಯಾದ ಯುನಿವರ್ಸಿಟಿಯೊಂದರಲ್ಲಿ ಓದಲು ಇದೇ ಡಾನ್ ಸೀಟು ಕೊಡಿಸಿದ್ದನಂತೆ. ಆನಂತರ ಇದೇ ಆಫೀಸರ್ ಚಂಡೀಗಢ್ ನಗರದಲ್ಲಿ ಮೂರೂವರೆ ಕೋಟಿ ರೂಪಾಯಿ ಬೆಲೆಯ ಸೈಟ್ ಒಂದನ್ನು ಕೊಂಡುಕೊಂಡಾಗ ಸ್ವಲ್ಪ ವಿವಾದವಾಗಿ ಕೊನೆಗೆ ಅದನ್ನೂ ಡಾನ್ ಬಗೆಹರಿಸಿಕೊಟ್ಟಿದ್ದನಂತೆ. ಈ ಕೆಲಸಗಳನ್ನು ಮಾಡಿಸಿಕೊಳ್ಳುವಾಗ ಡಾನ್‌ನ ಹಿನ್ನೆಲೆ ಬಗ್ಗೆ ತನಗೇನು ಗೊತ್ತಿರಲಿಲ್ಲ ಎಂದು ಈ ಸೇನಾ ಅಧಿಕಾರಿ ಈಗ ತನಿಖಾಧಿಕಾರಿಗಳಿಗೆ ಹೇಳುತ್ತಿದ್ದಾನೆ.

ಅದೇನೇ ಇರಲಿ ಡಾನ್ ಸೇನಾ ಸಲಕರಣೆ, ಸರಬರಾಜು ದಂಧೆಗೆ ಕೈಹಾಕಿದ ನಂತರ ಆಗಿರುವ ಘಟನೆಗಳಿವು. ಅದಕ್ಕೂ ಮುನ್ನ ಈ ದಂಧೆಗೆ ಕೈಹಾಕಲು ಡಾನ್ ತನ್ನ ಬೇರೆ ಲಿಂಕ್‌ಗಳನ್ನು ಬಳಸಿದ್ದ. ವಿದೇಶದಲ್ಲಿ ತಲೆಮರೆಸಿಕೊಂಡಿದ್ದ ಡಾನ್ ಆಮೇಲೆ ಭಾರತೀಯ ಗೂಢಚರ್ಯೆ ಸಂಸ್ಥೆ ರಾ ಜೊತೆಗೂ ಒಂದು ಡೀಲು ಕುದುರಿಸಿಕೊಂಡು ಭಾರತಕ್ಕೆ ಬಂದಿದ್ದಾನೆ. ಈಗ ಅವನು ರಾ ಏಜೆಂಟ್ ರೀತಿಯೇ ಕೆಲಸ ಮಾಡುತ್ತಿದ್ದಾನೆ. 'ರಾ'ನಲ್ಲಿ ಅಧಿಕಾರಿಯಾಗಿರುವ ಹೆಂಗಸೊಬ್ಬಳ ಪರಿಚಯ ಡಾನ್‌ಗಿತ್ತು, ಅವಳು ರಕ್ಷಣಾ ಸಲಕರಣೆಗಳ ಸರಬರಾಜು ವಿಧಾನ, ಟೆಂಡರ್-ಕೊಟೇಷನ್ ಪ್ರಕ್ರಿಯೆ, ಯಾವ ಸಲಕರಣೆಗೆ ಎಷ್ಟು ರೇಟ್ ನಮೂದಿಸಿದರೆ ಕಾಂಟ್ರ್ಯಾಕ್ಟ್ ಲಪಟಾಯಿಸಬಹುದು, ಬೇರೆ ಕಂಪೆನಿಗಳು ಒಂದೊಂದು ವಸ್ತುವಿಗೆ ಏನು ರೇಟ್ ಕೇಳುತ್ತಿದ್ದಾರೆಂಬ ಅನೇಕ ರಹಸ್ಯ ವಿಚಾರಗಳನ್ನು ತನ್ನ ಅಧಿಕಾರದ ಪ್ರಭಾವ ಬಳಸಿ ತಿಳಿದುಕೊಳ್ಳುತ್ತಿದ್ದಳು.



ಮುತ್ತಪ್ಪ ರೈ

ಕೋಟಿ ರೂಪಾಯಿ ಬ್ರಹ್ಮರಥ ಕೊಡುಗೆ

ಜಯ ಕರ್ನಾಟಕ ಸಂಘಟನೆಯ ಲೀಡರ್ ಹಾಗೂ ಖ್ಯಾತ ಸಮಾಜ ಸೇವಕ ಶ್ರೀಮಾನ್ ಮುತ್ತಪ್ಪ ರೈರವರು ಮಾರ್ಚ್ 22ನೇ ತಾರೀಖು ತಮ್ಮ ಒಂದು 'ದೈವಭಕ್ತಿ' ಪ್ರದರ್ಶಿಸಿದ್ದಾರೆ.

ಪತ್ರಿಕಾ ವರದಿಗಳ ಪ್ರಕಾರ ಅವರು ಪುತ್ತೂರಿನ ಮಹಾಲಿಂಗೇಶ್ವರ ದೇವಸ್ಥಾನಕ್ಕೆ ಒಂದು ಕೋಟಿ ರೂಪಾಯಿ ಖರ್ಚು ಮಾಡಿ 71 ಅಡಿ ಎತ್ತರದ ಒಂದು ಬ್ರಹ್ಮರಥ ಮಾಡಿಸಿಕೊಟ್ಟರೆಂದು ತಿಳಿದು ಬಂದಿದೆ.

ಮುತ್ತಪ್ಪ ರೈಯವರು ಕಷ್ಟಪಟ್ಟು ದುಡಿದ ಹಣದಿಂದ, ತಮ್ಮ ಸಮಾಜ ಸೇವೆಯಿಂದ ಪಡೆಯುತ್ತಿರುವ ಶಕ್ತಿಯಿಂದ ಈ ದೇವರ ಸೇವೆ ಮಾಡಿ ಪುಣ್ಯ ಸಂಪಾದಿಸಿದ್ದಾರೆ ಎಂದು ಅವರ ಹಿಂಬಾಲಕರು ಹೇಳುತ್ತಿರುವುದು ಗಮನಾರ್ಹ ಸಂಗತಿ.

ಶ್ರೀಮಾನ್ ಮುತ್ತಪ್ಪ ರೈಯವರು ಈ ರಥ ಮಾಡಿಸಿ ಸಮಾಜಕ್ಕೆ ಅರ್ಪಿಸುವ ಮೂಲಕ ತಾವೊಬ್ಬ ದೈವಭಕ್ತ ಹಾಗೂ ದೇಶಭಕ್ತ ಎಂಬುದನ್ನು ಸಾಬೀತುಮಾಡಿರುವುದು ಈ ಮೇಲಿನ ಘಟನೆಗಳಿಂದ ತಿಳಿದುಬರುತ್ತಿದೆ.



ಕಳಪೆ ಬುಲೆಟ್ ಪ್ರೂಫ್ ಜಾಕೆಟ್ಟೋ... ಭರ್ತಿಯಾಗುತ್ತಿದೆ ಖದೀಮರ ಪಾಕೆಟ್ಟು....

ಭಾರತೀಯ ಸೇನಾ ಯೋಧರು ಗುಂಡಿನ ಚಕಮಕಿ ನಡೆಸುವ ಸಂದರ್ಭ ಬಂದಾಗ ಅವರ ಪ್ರಾಣ ...ಸುವ ಒಂದು ಸಾಧನವಾಗಿ ಬುಲೆಟ್ ಪ್ರೂಫ್ ಜಾಕೆಟ್‌ಗಳನ್ನು ಒದಗಿಸಲಾಗುತ್ತಿದೆ. ಆದರೆ ಇದು ...ಗೂ ಲಭ್ಯವಿಲ್ಲ. ಇವತ್ತಿನ ಮಾರ್ಕೆಟ್ ರೇಟಿನಲ್ಲಿ ಐವತ್ತು ಸಾವಿರ ರೂಪಾಯಿ ಬೆಲೆಯಿದೆ ಒಂದು ...ಕ್‌ಗೆ.

ಮುಂಬೈ ದಾಳಿಯ ನಂತರ ನಮ್ಮ ಸೇನೆಯ ಪ್ಯಾರಾಮಿಲಿಟರಿ ಪಡೆಗಳಿಗೆ ಹಾಗೂ ನ್ಯಾಷನಲ್ ಸೆಕ್ಯೂರಿಟಿ ...ರ್ (NSG)ಗಳಿಗೆಂದು ಒಟ್ಟು 59 ಸಾವಿರ ಬುಲೆಟ್ ಪ್ರೂಫ್ ಜಾಕೆಟ್‌ಗಳನ್ನು ಖರೀದಿಸಲು ಸರ್ಕಾರ ...ಂಡಿತ್ತು.

ಹೆಚ್ಚುಕಡಿಮೆ 300 ಕೋಟಿ ರೂಪಾಯಿಗಳ ಖರೀದಿ ವ್ಯವಹಾರ ಇದು.

ಸೇನಾ ಯೋಧರ ಪ್ರಾಣ ರಕ್ಷಣೆಯ ವಿಚಾರ ಇದಾಗಿದ್ದರೂ ಸಹ ಭ್ರಷ್ಟಾಚಾರ ಇಲ್ಲೂ ಕಾಣಿಸಿಕೊಂಡಿದೆ. ...ದರಿಯ ಸೇನಾಧಿಕಾರಿ ಆರ್.ಕೆ. ವರ್ಮಾ ಎಂಬುವವನು ಕಳೆದ ಜನವರಿ ತಿಂಗಳಲ್ಲಿ ರೆಡ್ ಹ್ಯಾಂಡಾಗಿ ...ದ್ದಿರುವ ಘಟನೆಯೇ ಇದಕ್ಕೆ ಸಾಕ್ಷಿಯಾಗಿದೆ.



ರಕ್ಷಣಾ ಇಲಾಖೆಯ Defence Research And Development Organisation ವಿಭಾಗದ ...ಂಟ್ ಡೈರೆಕ್ಟರ್ ಆಗಿದ್ದ ಈ ವರ್ಮಾನೇ ಬುಲೆಟ್ ಪ್ರೂಫ್ ಜಾಕೆಟ್‌ಗಳ ಗುಣಮಟ್ಟ ಪರೀಕ್ಷಿಸಿ ಓಕೆ ...ಬೇಕಾದ ಪ್ರಮುಖ ಹುದ್ದೆಯಲ್ಲಿದ್ದ. ಈ ಸಲಕರಣೆಯ ತಾಕತ್ತು ಪರೀಕ್ಷಿಸುವ Firing Range ...ಗಡದಲ್ಲಿದೆ. ಈ ಬುಲೆಟ್ ಪ್ರೂಫ್ ಜಾಕೆಟ್‌ಗಳ ಗುಣಮಟ್ಟ ಪರೀಕ್ಷಿಸುವಾಗ ಕೆಲವು ಕಂಪೆನಿಗಳ ...್‌ಗಳ ಗುಣಮಟ್ಟ ಕಳಪೆ ಎಂದು ಕಳೆದ ವರ್ಷ ಅವುಗಳ ಹೆಸರನ್ನು ಕೈಬಿಡಲಾಗಿತ್ತು. ಆದರೆ ಈ ...ರ್ ಕೋಟ್ಯಾಂತರ ರೂಪಾಯಿ ಲಂಚ ತಿಂದು ಈ ಬ್ಲಾಕ್‌ಲಿಸ್ಟ್‌ನಲ್ಲಿದ್ದ ಕಂಪೆನಿಗಳನ್ನು ಈ ಬಾರಿ ಜಾಕೆಟ್ ...ರಾಜುದಾರರ ಲಿಸ್ಟ್‌ಗೆ ಸೇರಿಸಿಬಿಟ್ಟಿದ್ದ. ಆದರೆ ಒಂದು ಬ್ಲಾಕ್ ಲಿಸ್ಟೆಡ್ ಕಂಪೆನಿ ಸಾಕಷ್ಟು ಲಂಚ ಕೊಡದಿದ್ದುದರಿಂದ ಅದನ್ನು ವರ್ಮಾ ಕೈಬಿಟ್ಟಿದ್ದ. ಇದರಿಂದ ಸಿಟ್ಟಿಗೆದ್ದ ಆ ಕಳಪೆ ಕಂಪೆನಿಯ ಮಾಲೀಕ ವರ್ಮಾ ಜೊತೆ ಮತ್ತೆ ಡೀಲು ಕುದುರಿಸುವ ಮಾತುಕತೆ ನಡೆಸಿ ಅದನ್ನೆಲ್ಲಾ ಪೂರ್ತಿ ರೆಕಾರ್ಡ್ ಮಾಡಿಕೊಂಡು ಈಗ ಕೇಂದ್ರ ಗೃಹ ಇಲಾಖೆ ಕೈಗೆ ಒಪ್ಪಿಸಿಬಿಟ್ಟಿದ್ದಾನೆ.



ಸರ್ಕಾರ ಈಗ ವರ್ಮಾ ವಿರುದ್ಧ ತನಿಖೆ ಆರಂಭಿಸಿದೆ.

ಈ ಗದ್ದಲದಲ್ಲೇ ಡಾನ್ ಹಾಗೂ ಭರತರ ಬ್ಲಾಕ್‌ಮೇಲ್ ವಿಚಾರವೂ ಬಹಿರಂಗವಾಗಿ ಅವರ ವಿರುದ್ಧವೂ ತನಿಖೆ ಚಾಲು ಆಗುತ್ತಿದೆ. ಈ ಮಧ್ಯೆ ವರ್ಮಾ ತನಿಖಾಧಿಕಾರಿಗಳಿಗೆ ಹೇಳಿಕೆ ಕೊಡುತ್ತಾ ಹೀಗೆಂದಿದ್ದಾನೆ-

"ಹೌದು ನಾನು ಕಳಪೆ ಬುಲೆಟ್ ಪ್ರೂಫ್ ಜಾಕೆಟ್‌ಗಳ ಖರೀದಿಗೆ ರೆಕಮಂಡ್ ಮಾಡಿರುವುದು ನಿಜ. ಬೆಲೆಯನ್ನು ಒಂದಕ್ಕೆರಡರಷ್ಟು ಜಾಸ್ತಿ ಕೊಡಲು ಒಪ್ಪಿಕೊಂಡಿದ್ದೆ. ಇದು ನನ್ನೊಬ್ಬನ ತಪ್ಪಲ್ಲ. ಪ್ರತಿ ಕಂಪೆನಿಗೂ ಅದರ ಹಿಂದಿರುವ ರಾಜಕಾರಣಿಗಳಿಗೂ ಜಾಕೆಟ್ ಸರಬರಾಜು ಕಾಂಟ್ರ್ಯಾಕ್ಟ್ ಬೇಕಿದೆ. ಅದರಲ್ಲಿ ನನಗೂ ಸ್ವಲ್ಪ ದುಡ್ಡು ಸಿಗುತ್ತಿತ್ತು"

ಇಂತಾ ವರ್ಮಾಗಳಿರುವಾಗ ಡಾನ್ & ಭರತ್‌ನಂತಹವರಿಗೂ ಡೀಲು ಕುದುರಿಸುವುದು ಸುಲಭ ಅಲ್ಲವೇ?

... ಮಾಹಿತಿ ಬಳಸಿಕೊಂಡು ಹೆಚ್ಚು ಹಣ ಮಾಡಲು ಸ್ವತಃ ತನ್ನ ...ನನ್ನೇ ಮುಂದೆ ಬಿಟ್ಟು ಒಂದು ಕಂಪೆನಿ ಸ್ಥಾಪಿಸಲು ಬೆಂಬಲ ಕೊಟ್ಟನು. ...ನೇ ಬೆಂಗಳೂರಿನ ಕೆ.ಎಸ್.ಭರತ!

...್‌ನ ಪಾರ್ಟನರ್!

... ಭರತ ಬೆಂಗಳೂರಿನ ಅಂತಹ ದೊಡ್ಡ ಉದ್ಯಮಿಯೇನಲ್ಲ. ಬಹುಶಃ ...ಡಾನ್‌ನ ಬೇನಾಮಿ ಪಾರ್ಟನರ್ ಇರಲಿಕ್ಕೂ ಸಾಕು.

...ರಿಬ್ಬರು ಸೇರಿ ಆರಂಭಿಕ ಹಂತವಾಗಿ ಹತ್ತು ಕೋಟಿ ...ಬ ಬಂಡವಾಳದ ಕಂಪೆನಿಯೊಂದನ್ನು ಬೆಂಗಳೂರಿನಲ್ಲಿ ...ದ್ದಾರೆಂಬ ಪುಕಾರುಗಳಿವೆ. ಸೇನಾ ಯೋಧರಿಗೆ ಗುಂಡು ...ಕ ಜಾಕೆಟ್ (Bullet proof jacket) ಹಾಗೂ ...ಜನ್ ಗ್ಲಾಸ್ (Night Vision Glass) ಸರಬರಾಜು ...ವುದಾಗಿ ಹೇಳಿಕೊಂಡು ಈ ಕಂಪೆನಿ ರಕ್ಷಣಾ ಇಲಾಖೆಯ ...ವ್ಯವಹರಿಸಲು ಶುರುಮಾಡಿದೆ. ಈ ಪ್ರಕ್ರಿಯೆಯಲ್ಲೇ ... ವಿಚಾರಕ್ಕೆ ಸಂಬಂಧಿಸಿದಂತೆ ಕೆಲವು ರಹಸ್ಯ ಮಾಹಿತಿ ...ಬ ಡಾನ್‌ನ ಜನ ಚಂಡೀಗಢ್ ಸೈಟಿನ ವಿಚಾರದಲ್ಲಿ ... ಪಡೆದಿದ್ದ ಸೇನಾಧಿಕಾರಿಯ ಸಹಕಾರ ಕೇಳಿದ್ದಾರೆ. ಆತ ... ಹೋದಾಗ ಕೋಟ್ಯಾಂತರ ರೂಪಾಯಿಗಳ ಸೈಟಿನ ... ಗುಟ್ಟನ್ನು ಇಲಾಖೆಗೆ ತಿಳಿಸುವುದಾಗಿ ಬೆದರಿಸಿದ್ದಾರೆ. ... ಬಗ್ಗೆ ಈಗ ತನಿಖೆ ಶುರುವಾಗುತ್ತಿದೆ.

... ಸಮಾಜ ಸೇವಕ ತಾನೆಂದು ಹೇಳಿಕೊಳ್ಳುವ ಡಾನ್‌ಗೆ ಈಗ ... ಇಷ್ಟು ದಿನ ಸಮಾಜ ಸೇವೆ ಮಾಡಿಕೊಂಡು ತನಗಿದ್ದ ಅಪಕೀರ್ತಿಯ ...ಬೆ ಅಳಿಸಲು ನಾನಾ ಸರ್ಕಸ್ ಮಾಡುತ್ತಿದ್ದ. ಈಗ ಒಂದಷ್ಟು ...ಯನ್ನೂ ಮಾಡಲು ಹೋಗಿ ತೊಂದರೆ ತಂದುಕೊಂಡಿದ್ದಾನೆ. ...ಟ್ಟ ಮಾಡುವ ದೇಶಸೇವೆ ಇದು.

...ಹಾಗೆ

... ಸೇನಾಯೋಧರಿಗೆ ಬುಲೆಟ್ ಪ್ರೂಫ್ ಜಾಕೆಟ್ ಹಾಗೂ ನೈಟ್ ವಿಜನ್ ಗ್ಲಾಸಸ್ ಸರಬರಾಜು ಮಾಡಲು ಡಾನ್ ಹಾಗೂ ಭರತ ಹತ್ತುಕೋಟಿ ರೂಪಾಯಿಗಳ ಹೊಸ ಕಂಪೆನಿ ಸ್ಥಾಪಿಸಿದ್ದಾರೆ ಎಂದು ಹೇಳಿದೆವಲ್ಲ, ಅದರರ್ಥ ಇವರಿಗೆ ಬುಲೆಟ್ ಪ್ರೂಫ್ ಜಾಕೆಟ್ ತಯಾರಿಸುವ ಟೆಕ್ನಾಲಜಿ ಗೊತ್ತಿದೆ ಎಂದರ್ಥವಲ್ಲ. ಇದೆಲ್ಲಾ ಕೇವಲ ಕೈ ಬದಲಾವಣೆಯ ದಂಧೆ ಅಷ್ಟೆ.

ಯಾವುದೋ ಯುರೋಪ್, ಅಮೆರಿಕಾದ ಕಂಪೆನಿಗಳ ಜೊತೆ ಮೊದಲೇ ಮಾತಾಡಿಕೊಂಡು ಈ ವಸ್ತುಗಳನ್ನು ಬೆಂಗಳೂರಿಗೆ ತರಿಸಿ, ನಂತರ ಅವುಗಳಿಗೆ ಇವರ ಕಂಪೆನಿಯ ಲೇಬಲ್ ಅಂಟಿಸಿ ಜಾಸ್ತಿ ರೇಟಿಗೆ ಮಾರಿಕೊಳ್ಳುವ ದಂಧೆ ಅದು. ಒಂದು ಮೂಲದ ಪ್ರಕಾರ ಈ ಡಾನ್ ಈಗ 'ರಾ' ಸಂಸ್ಥೆಯ ಗೆಳೆಕಾರನಾಗಿದ್ದು ಆತ ಅಕ್ರಮವಾಗಿ ಸಂಪಾದಿಸಿರುವ ಕೋಟ್ಯಾಂತರ ರೂಪಾಯಿಗಳನ್ನು ಸಕ್ರಮ ಮಾಡಿಸುವ ಮಾರ್ಗವೂ ಈ ಡೀಲ್‌ನ ತಂತ್ರವಾಗಿರಬಹುದು. ಇದರರ್ಥ ಈ ಡಾನ್‌ನೊಂದಿಗೆ ದೇಶದ ರಕ್ಷಣೆಗೆಂದೇ ಸ್ಥಾಪಿಸಲ್ಪಟ್ಟಿರುವ 'ರಾ' ಕೂಡ ಕೈಜೋಡಿಸಿದೆ. ಈ ಹಿನ್ನೆಲೆಯಲ್ಲಿ ಯಾರು 'ದೇಶಸೇವಕ', ಯಾರು 'ದೇಶದ್ರೋಹಿ' ಎಂದು ಅರ್ಥಮಾಡಿಕೊಳ್ಳುವುದೇ ಕಷ್ಟವಾಗುತ್ತದೆ.



ಡಾನ್‌ನ ಮಾಜಿ ಬಾಸ್ ದಾವೂದ್

ಮೇಲ್ನೋಟಕ್ಕೆ ಸಿಂಪಲ್ ಡೀಲ್ ಅನ್ನಿಸುವ ವಿಚಾರ ಇದು. ಆದರೆ ನೆನಪಿಡಿ, ಒಂದೇ ಏಟಿಗೆ ನೂರಾರು ಕೋಟಿ ಲಾಭ ತರುವ ದಂಧೆ ಇದು. ಹಾಗಾಗಿ ಇಲ್ಲೂ ಲಾಬಿ ಕಿಕ್‌ಬ್ಯಾಕ್, ರಾಜಕೀಯ ವಂಚನೆ ಎಲ್ಲಾ ನಡೆಯುತ್ತದೆ.

ಡಾನ್ ತರದ 'ಸಮಾಜ ಸೇವಕರು' ಇಂತಾ ಅಕ್ರಮ ಡೀಲ್‌ಗಳನ್ನು ಕುದುರಿಸಲು ಹೋಗಿ ಏನೇನು ಅನಾಹುತ ಸೃಷ್ಟಿಸುತ್ತಾರೆಂದು ನೋಡಲು ಬಾಕ್ಸ್ ಓದಿ. ಆರ್.ಕೆ. ವರ್ಮಾ ಎಂಬ ಸೇನಾಧಿಕಾರಿಯೊಬ್ಬ ಕಳಪೆ ಬುಲೆಟ್ ಪ್ರೂಫ್ ಜಾಕೆಟ್ ಖರೀದಿಗೆ ಲಂಚ ತೆಗೆದುಕೊಂಡು ಸಿಕ್ಕುಬಿದ್ದು ಈಗ ತನಿಖೆ ಎದುರಿಸುತ್ತಿದ್ದಾನೆ.

ಡಾನ್ ತನ್ನ ಡೀಲುಗಳನ್ನೂ ಇಂತಹ ಭ್ರಷ್ಟ ಆಫೀಸರ್‌ಗಳೊಂದಿಗೆ ಕುದುರಿಸುತ್ತಿದ್ದ ಕಾರಣ 'ರಕ್ಷಣಾ ಇಲಾಖೆ' ಈಗ ಅವನ ಬಗ್ಗೆಯೂ ತನಿಖೆ ಆರಂಭಿಸಿದೆ. ●

...ಡಾನ್ ಕಂಪೆನಿಯಲ್ಲಿ ನಿವೃತ್ತ ಸೇನಾಧಿಕಾರಿಗಳು!

...ಳಿತ ಕಡೆಯೇ ಕೇವಲ ಕೈಬದಲಾವಣೆಯ ಮೂಲಕ ...ಟ್ಯಾಂತರ ರೂಪಾಯಿ ಕಬಳಿಸಬಹುದಾದ ಡಿಫೆನ್ಸ್ ...ಮ ಸಪ್ಲೈ ಡೀಲ್‌ಗಳು ಅನೇಕರನ್ನು ಆಕರ್ಷಿಸುತ್ತಿದೆ. ... ಡಾನ್ ಹಾಗೂ ಕೆ.ಎಸ್. ಭರತ್ ಎಂತಹ ...ಗಳೆಂದರೆ ತಮ್ಮ ಹೊಸ ಕಂಪೆನಿಗೆ ಭಾರತೀಯ ಸೇನೆಯ ... ನಿವೃತ್ತ ಆಫೀಸರ್‌ಗಳನ್ನು ಸೇರಿಸಿಕೊಂಡಿದ್ದಾರೆ. ಇವರಿಗೆ ...ಲ್ಲಿದ್ದ ಸಂಪರ್ಕಗಳನ್ನು ಬಳಸಿಕೊಂಡು ಕೋಟಿಗಟ್ಟಲೇ ...ು ಕಾಂಟ್ರ್ಯಾಕ್ಟ್ ಗಿಟ್ಟಿಸುವ ತಂತ್ರ ಗೊತ್ತಿರುತ್ತದೆ. ತೀರಾ ...ಗೆ ಇಂಡಿಯನ್ ಏರ್ ಫೋರ್ಸ್‌ನ ನಿವೃತ್ತ ವಿಂಗ್ ...ಡರ್ ಒಬ್ಬನನ್ನೂ ತಮ್ಮ ಜೊತೆಗೆ ಸೇರಿಸಿಕೊಂಡಿರುವ ... ಅವನನ್ನು ಹೊಸ ಬ್ಯುಸಿನೆಸ್ ಸಾಧ್ಯತೆ ಹುಡುಕಲು ...ಫೋರ್ಸ್‌ನ ಹೆಡ್‌ಕ್ವಾರ್ಟರ್ಸ್‌ಗೆ ಕಳಿಸಿದ್ದನೆಂಬ ಬಗ್ಗೆಯೂ ... ಇಲಾಖೆ ಈಗ ತನಿಖೆಯ ವ್ಯಾಪ್ತಿಗೆ ತಂದುಕೊಂಡಿದೆ.

ಅಮೆರಿಕದಲ್ಲಿ 12 ಸಾವಿರ ಇಂಡಿಯಾದಲ್ಲಿ 50 ಸಾವಿರ

ಸೇನೆಗೆ ಬುಲೆಟ್ ಪ್ರೂಫ್ ಜಾಕೆಟ್‌ಗಳ ಸರಬರಾಜು ಮಾಡುವುದೇ ಹಣ ಲೂಟಿ ಹೊಡೆಯುವ ಒಂದು ದಂಧೆಯಾಗಿ ಹೋಗಿದೆ.

ಅಮೆರಿಕದಲ್ಲಿ ಈ ರೀತಿಯ ಜಾಕೆಟ್‌ಗಳನ್ನು ಉತ್ಪಾದಿಸಿ ಮಾರುವ ದೊಡ್ಡ ಬಹುರಾಷ್ಟ್ರೀಯ ಕಂಪನಿಗಳಿವೆ. ಡುಪಾಂಟ್, Kevlar, Mitre, Larco ಕಂಪನಿಗಳ ಜಾಕೆಟ್‌ಗಳ ಬೆಲೆ 280 ಡಾಲರ್‌ಗಳಿಂದ ಶುರುವಾಗಿ 4090 ಡಾಲರ್‌ತನಕ ಇವೆ. ಮತ್ತೆ ಅದರಲ್ಲೂ ಲೆವೆಲ್ 1, 1A, II, III, ಕ್ವಾಲಿಟಿಯ ಜಾಕೆಟ್‌ಗಳಿವೆ. ಒಂದು ಡಾಲರ್‌ಗೆ ಇವತ್ತಿನ ರೇಟ್‌ನಲ್ಲಿ 45 ರೂಪಾಯಿ ಎಂದಿಟ್ಟುಕೊಂಡರೂ ಸಹ ಈ ಜಾಕೆಟ್‌ಗಳ ಬೆಲೆ 12 ಸಾವಿರದಿಂದ 25 ಸಾವಿರ ರೂಪಾಯಿ ಆಗುತ್ತದೆ ಅಷ್ಟೆ. ಈ ವಿದೇಶಿ ಶಸ್ತ್ರಾಸ್ತ್ರ ಕಂಪನಿಗಳಿಂದ ಜಾಕೆಟ್ ತರಿಸಿಕೊಂಡು ಭಾರತೀಯ ಸೇನೆಗೆ ಜಾಕೆಟ್ ಸರಬರಾಜು ಮಾಡುವವರು ತಲಾ ಜಾಕೆಟೊಂದಕ್ಕೆ 50 ಸಾವಿರ ರೂಪಾಯಿ ತನಕ ಬೆಲೆ ಕೇಳುತ್ತಾರೆ. ಅಂದರೆ ಒಂದೊಂದು ಜಾಕೆಟ್‌ನಲ್ಲೂ 25 ಸಾವಿರ ಲಾಭ! ಒಂದು ಡೀಲ್‌ನಲ್ಲಿ 10,15,20 ಸಾವಿರ ಜಾಕೆಟ್ ಸರಬರಾಜಿನ ಗುತ್ತಿಗೆ ಪಡೆಯುವ ಸರಬರಾಜುದಾರರು ಎಷ್ಟು ಕೋಟಿ ದೋಚಬಹುದು ಯೋಚಿಸಿ?



ಹೇತ್ಲಾಂಡಿ ಹೋಮ್ ಮಿನಿಸ್ಟರ್‌ಗೆ ವೈರಾಗ್ಯವಂತೆ!

ಕರ್ನಾಟಕ ಕಂಡ ತೀರಾ ಹೋಪ್‌ಲೆಸ್ ಹೋಮ್ ಮಿನಿಸ್ಟರ್ ಡಾ. ವಿ.ಎಸ್. ಆಚಾರ್ಯರಿಗೆ ಮಂತ್ರಿಗಿರಿಯಲ್ಲಿ ಜಿಗುಪ್ಸೆ ಬಂದಿಯೆಯಂತೆ ಸಿಎಂ ಯಡ್ಡಿಯ ಸಂಸಾರ ಸ್ನೇಹಿತೆಯ ಆರ್ಡರ್‌ಗಳನ್ನು ಟಿಚಿ ಮಾಡಿಮಾಡಿ ಸಾಕಾಗಿದೆಯಂತೆ. ಗೃಹ ಇಲಾಖೆಯಲ್ಲಿ ಯಡ್ಡಿ ಪರಿವಾರದ್ದೇ ಕಾರುಬಾರು. ಆತ ಹೆಸರಿಗಷ್ಟೇ ಗೃಹ ಸಚಿವನಂತೆ. ಒಬ್ಬ ಪೊಲೀಸ್ ಪೇದೆಯೂ ಈ ಮಂತ್ರಿಯ ಮಾತು ಕೇಳುವುದಿಲ್ಲವಂತೆ. ಹಾಗಂತ ಸಾಕ್ಷಾತ್ ಹೋಮ್ ಮಿನಿಸ್ಟರ್ ಸಾಹೇಬರೇ ಸಂಘ ಪರಿವಾರದ ಸರದಾರ ಪದತಲದಲ್ಲಿ ಮಂಡಿಯೂರಿ ಕುಳಿತು ಗೋಳೋ ಎಂದು ಅಳುತ್ತಿದ್ದಾರಂತೆ!

ತಾನು ಗುಲಾಮಗಿರಿ ಮಾಡುತ್ತಿರುವುದರ ಅರಿವು ಆಚಾರ್ಯರಿಗೆ ತಡವಾಗಿ ಬಂದಂತಿದೆ. ಪಾಪ ತನ್ನ ಗೃಹ ಮಂತ್ರಿತ್ವದಲ್ಲಿ ರಾಜ್ಯದಲ್ಲಿ ಎಂತೆಂಥ ಪಾತಕಗಳಾದರೂ ಸಣ್ಣದೊಂದು ಪಾಪಪ್ರಜ್ಞೆ ಆತನಲ್ಲಿ ಮೂಡಿರಲಿಲ್ಲ. ಇಂಥ ಕಲ್ಲು ಹೃದಯದ ಹಿಂದೂತ್ವವಾದಿಗೆ ಅನಾಥಪ್ರಜ್ಞೆ ಭರ್ಜರಿ ನೋವು-ಹತಾಶೆ ಮೂಡಿಸಿಬಿಟ್ಟಿದೆ. ಇಂಥ ಅವಮಾನಕರ ಸಚಿವನಾಗಿರುವುದಕ್ಕಿಂತ ಆ ಮಂತ್ರಿಗಿರಿಗೆ ರಾಜೀನಾಮೆ ಬಿಸಾಕುವುದು ಮೇಲೆಂಬ ನಿರ್ಧಾರಕ್ಕೆ ಆಚಾರ್ಯ ಬಂದಿದ್ದಾರಂತೆ.

ಗೃಹ ಇಲಾಖೆಯಲ್ಲಿ ಸಿಎಂ ಯಡ್ಡಿಯ ಆಪ್ತರು, ಕುಲಬಾಂಧವರು, ಮಕ್ಕಳು ಬೇಕಾಬಿಟ್ಟಿಯಾಗಿ ಹಸ್ತಕ್ಷೇಪ ನಡೆಸುತ್ತಿರುವುದು ಎಲ್ಲರಿಗೂ ಗೊತ್ತಿರುವ ಸಂಗತಿ ಬಿಡಿ. ಪೊಲೀಸ್ ಮಹಾ ನಿರ್ದೇಶಕ ಅಜಯ್‌ಕುಮಾರ್‌ಸಿಂಗ್ ಸಾಹೇಬರು ಆಚಾರ್ಯರೇನಾದರೂ ಹೇಳಲುಹೋದರೆ ಕೇಳಿಸಿಕೊಳ್ಳುವುದೇ ಇಲ್ಲ. "ಸಿಎಂ ಹತ್ರ ಡಿಸ್‌ಕಸ್ ಮಾಡಿ ನಿರ್ಧಾರ ಮಾಡ್ತೇನ್ರಿ....." ಎಂದು ಆಚಾರ್ಯರಿಗೆ ಪೊಲೀಸ್ ಆಫೀಸರ್‌ಗಳು ಮಾರುತ್ತರ ಕೊಡುತ್ತಾರೆ. ಬೆಂಗಳೂರು ಆಯುಕ್ತ ಬಿದರಿಯವರಿಗಂತೂ ಗೃಹ ಮಂತ್ರಿ ಆಚಾರ್ಯರೆಂದರೆ ಲೆಕ್ಕಕ್ಕೇ ಇಲ್ಲ.

ಎಂಥ ವಿಪರ್ಯಾಸ ನೋಡಿ. ಸಿಎಂ ಪರಿವಾರದ ಹಸ್ತಕ್ಷೇಪಕ್ಕೆ ರೋಸತ್ತು ರೆಡ್ಡಿ ಬಣದ ಮಂತ್ರಿಗಳು ರಾಜೀನಾಮೆ ಬ್ಲಾಕ್‌ಮೇಲ್ ಮಾಡಿದಾಗ ಸಿಎಂ ಯಡ್ಡಿಯ ತಲೆಯನ್ನು ಅಡಿಗಡಿಗೆ ಕಾದಿದ್ದ ಆಚಾರ್ಯರೇ ಈಗ ಅದೇ ಕಾರಣಕ್ಕೆ ಪದತ್ಯಾಗಕ್ಕೆ ರೆಡಿಯಾಗಿದ್ದಾರೆ! ನನ್ನನ್ನು ಸಿಎಂ ಸಂಸಾರ ನಿಕೃಷ್ಟವಾಗಿ ನಡೆಸಿಕೊಳ್ಳುತ್ತಿದೆ. ನಾನೇನಾದರೂ ತಿರುಗಿ ನಿಂತರೆ ಸಿಎಂಗೆ ಕಿರಿಕಿರಿ ಆಗುತ್ತದೆ. ಹಾಗಾಗಿ ಮಂತ್ರಿಗಿರಿಗೇ ಗುಡ್‌ಬೈ ಹೇಳ್ತೇನೆ ಎಂದು ಆಚಾರ್ಯ ಆರೆಸೆಸ್ ಡಾನ್‌ಗಳೆದುರು ಹೇಳುತ್ತಿರುವುದು, ಬಿಜೆಪಿಯ ಭಿನ್ನಮತೀಯ ಶಾಸಕರ ಕುಚೇಷ್ಟೆಯ ಸಂಗತಿ ಆಗಿಹೋಗಿದೆ.


ಖುದ್ದು ಸಿಎಂಗೂ ಆಚಾರ್ಯ ತನಗೆ ಗೃಹ ಮಂತ್ರಿ ಸ್ಥಾನ-ಮಾನದಲ್ಲಿ ಆಗುತ್ತಿರುವ ಅವಮಾನ-ಹಿಂಸೆಯ ಬಗ್ಗೆ ಹೇಳಿಕೊಂಡಿದ್ದಾರೆ. ತನಗೆ ಮಂತ್ರಿಗಿರಿಯಿಂದ ಬಿಡುಗಡೆ ಕೊಡಿ ಎಂದು ಆರೆಸೆಸ್ ದೊರೆಗಳು ಮತ್ತು ಸಿಎಂ ಬಳಿ ಬೇಡಿದ್ದಾರೆ. ಮುಂಬರುವ ರಾಜ್ಯಸಭಾ ಚುನಾವಣೆಯಲ್ಲಿ ಎಂಪಿಯಾಗುವ ಇರಾದೆ ಆಚಾರ್ಯರಿಗೆ. ಬಹಳ ವರ್ಷದಿಂದ ಹಿಂದೂತ್ವದ ರಾಜಕಾರಣ ಮಾಡುತ್ತಾ ಬಂದಿರುವ ಈ 'ಉಡುಪಿ ಮಂತ್ರಿ'ಯನ್ನು ಎಂಪಿ ಮಾಡುವುದಕ್ಕಿಂತ ಸ್ವಾತಂತ್ರ್ಯ ಇರುವಂಥ ಖಾತೆಗೆ ವರ್ಗಾಯಿಸುವ ಯೋಚನೆ ಸಂಘಪರಿವಾರದ್ದು. ಇಂಥ ಹಿರಿಯನನ್ನು ಏಕಾಏಕಿ ಮಂತ್ರಿಗಿರಿಯಿಂದ ತೆಗೆದರೆ ಬಿಜೆಪಿ ಪರವಾರದ ಬಗ್ಗೆ ರಾಂಗ್‌ಸಿಗ್ನಲ್ ಸಾರ್ವಜನಿಕರಿಗೆ ಸಿಗುತ್ತದೆಂಬ ಆತಂಕ ಚಡ್ಡಿ ಚತುರರದು.

ಹಾಗಾಗಿ ಆಚಾರ್ಯರನ್ನು ಹಣಕಾಸು ಮಂತ್ರಿ ಮಾಡಲು ಕೇಶವಕೃಪಾದಲ್ಲಿ ಚಿಂತನ-ಮಂಥನ ಆರಂಭವಾಗಿದೆ. ಸದ್ಯದಲ್ಲೇ ಸಂಪುಟ ಪುನರ್‌ರಚನೆ ಆಗಲಿದ್ದು ಆಗ ಆಚಾರ್ಯರಿಗೆ ಹಣಕಾಸು ಖಾತೆ ಕೊಟ್ಟು ಗೌರವಿಸುವಂತೆ ಯಡ್ಡಿಗೆ ಕೇಶವಕೃಪಾ ಹೈಕಮಾಂಡ್ ಸೂಚಿಸಿದೆ ಎನ್ನುವ ಸುದ್ದಿ ಕರಾವಳಿಯ ಸಂಘ ಪರಿವಾರದಲ್ಲಿ ಹಬ್ಬಿದೆ.

ಹುಂಬ ಯಡ್ಡಿಯ ಕುಟುಂಬದ ಮೇಲೆ ಗೂಬೆ ಕೂರಿಸಿ ನಾಜೂಕಾಗಿ ಹಣಕಾಸು ಇಲಾಖೆ ಪಡೆದುಕೊಳ್ಳುವ ಷಡ್ಯಂತ್ರ ಜಾಣ ಬ್ರಾಹ್ಮಣ ಆಚಾರ್ಯ ಹೆಣೆದಿದ್ದಾರೆಂದು ಹೇಳುವ ಚಡ್ಡಿಗಳೂ ಇದ್ದಾರೆ. ಮೊದಲಿಂದಲೂ ತನಗೆ ತಾನೇ ಒಬ್ಬ ಆರ್ಥಿಕ ತಜ್ಞನೆಂದು ಭ್ರಮಿಸಿರುವ ಆಚಾರ್ಯ ಬಿಜೆಪಿ ಅಧಿಕಾರಕ್ಕೆ ಬಂದಾಗಿನಿಂದಲೂ ಆ ಖಾತೆಗಾಗಿ ಒಳಗೊಳಗೆ ಕನಸು ಕಾಣುತ್ತಾ ಬಂದಿದ್ದಾರೆ. ಉಡುಪಿಯ ತನ್ನ ಮನೆ ಗೇಟಿಗೆ ದೊಡ್ಡದೊಂದು "ನಾಯಿಗಳಿವೆ ಎಚ್ಚರಿಕೆ" ಬೋರ್ಡು ನೇತು ಹಾಕಿ ಆರಾಮ ಕುರ್ಚಿಯಲ್ಲಿ ಕುಳಿತು ಅಂಕಿ-ಅಂಶಗಳ ಸರ್ಕಸ್ ಮಾಡುವುದು ಆಚಾರ್ಯರ ಲಾಗಾಯ್ತಿನ ಗುಣಧರ್ಮ.

ಜನಪರ ರಾಜಕಾರಣ ಗೊತ್ತಿಲ್ಲದ ಹಿಂಬಾಗಿಲ ರಾಜಕಾರಣಿ ಆಚಾರ್ಯ ಎಂದೂ ಸ್ಟೈಟಿಸ್ಟಿಕಲ್ ಶೂರನೆಂದೇ ಕುಖ್ಯಾತರು. ಈತ ಅದೆಂಥ ನಿಷ್ಪ್ರಯೋಜಕ-ನಾಲಾಯಕ್ ಪುಢಾರಿಯೆಂದರೆ ತನ್ನ ಮನೆಯಿರುವ ಉಡುಪಿ ನಗರದ ನಾಗರಿಕರ ಕಷ್ಟ-ಸುಖಕ್ಕೇ ಆತ ಸ್ಪಂದಿಸಿದ ದಾಖಲೆ ತಡಕಾಡಿದರೂ ನಿಮಗೆ ಸಿಗದು. ಪಾರ್ಟಿಯಲ್ಲೂ ಮೆನಿಫ್ಯಾಸ್ಟೋ ಆಥರ್, ಅಂಕಿ-ಅಂಶ ತಜ್ಞ ಎಂದೆಲ್ಲ ಗುರುತಿಸಿಕೊಂಡಿರುವ ಆಚಾರ್ಯ ಯಡ್ಡಿಯ ಅಚ್ಚುಮೆಚ್ಚಿನ ಆರ್ಥಿಕ ಖಾತೆಗೆ ಆಸೆ ಪಡುತ್ತಿರುವುದು ಕುತೂಹಲಕರವಾಗಿದೆ. ಯಡ್ಡಿ ಹಣಕಾಸು ಖಾತೆ ಬಿಟ್ಟುಕೊಡ್ತಾರಾ? ಆಚಾರ್ಯರನ್ನು ಸಂಪುಟದಿಂದಲೇ ಬೀಳ್ಕೊಡುತ್ತಾರಾ? ಅಥವಾ ಆಚಾರ್ಯ ಎಂಪಿಯಾಗಿ ದಿಲ್ಲಿಗೆ ಹೋಗ್ತಾರಾ? ಇದು ಬಿಜೆಪಿಯೊಳಗಿನ ಜಿಜ್ಞಾಸೆ. ಕರ್ನಾಟಕದ ಮಂದಿ ಮಾತ್ರ ಈ ಹೇತ್ಲಾಂಡಿ ಆದಷ್ಟು ಬೇಗ ಉಡುಪಿಗೆ ಹೋಗಿ ರೆಸ್ಟ್ ಪಡೀಲಿ ಎಂದು ಹಾರೈಸುತ್ತಿದ್ದಾರೆ.

● ನಹುಷ




ಶ್ರೀನಗರ-156


ಕಾಂಗ್ರೆಸ್ ಬಿಜೆಪಿ ಕಚ್ಚಾಟ, ತಿಮ್ಮೇಗೌಡರ ಹೋರಾಟ

ಅವರ ಬಿಟ್ಟು ಇವರ ಬಿಟ್ಟು ಇನ್ನಾರು ಎಂಬಂತಿದೆ ಶ್ರೀನಗರ. ತನ್ನನ್ನು ಕೈಬಿಟ್ಟು ಹೊಸ ತಲೆ ಮಾಯಣ್ಣನಿಗೆ ಬಿಜೆಪಿ ಟಿಕೆಟ್ ಕೊಟ್ಟದೆಯೆಂಬ ಒಂದೇ ಕಾರಣಕ್ಕೆ ಬಂಡೆದ್ದ ಮಾಜಿ ಕೌನ್ಸಿಲರ್ ಹುಚ್ಚಯ್ಯ ಬಂಡಾಯ ಬಿಜೆಪಿಯಾಗಿ ಕಣಕ್ಕಿಳಿದಿದ್ದಾರೆ. ಮಂಜುನಾಥ್ ಉರ್ಫ್ ಹಾಲು ಮಂಜನಿಗೆ ಕಾಂಗ್ರೆಸ್ ಟಿಕೆಟ್ ಸಿಕ್ಕಿದ ಹತಾಶೆಗೆ ಬಿದ್ದು ನಾಗಮಂಗಲದ ಶಿವರಾಮೇಗೌಡರ ಮಗ ಚೇತನ್ ಕಾಂಗ್ರೆಸ್ ವಿರುದ್ಧವೇ ತಿರುಗಿಬಿದ್ದಿದ್ದಾರೆ. ಬಿಜೆಪಿ ವಿರುದ್ಧ ಬಂಡಾಯ ಬಿಜೆಪಿ ಮತ್ತು ಕಾಂಗ್ರೆಸ್ ವಿರುದ್ಧ ಸಿಡಿದೆದ್ದ ಕಾಂಗ್ರೆಸ್ಸಿನ ಲಾಭ ಅಂತಿದ್ದರೆ ಅದು ಜೆಡಿಎಸ್ ಅಭ್ಯರ್ಥಿ ತಿಮ್ಮೇಗೌಡರಿಗೆ.

ಕಳೆದ ನಾಲ್ಕು ವರ್ಷಗಳಿಂದ ಶ್ರೀನಗರದ ಪ್ರತಿಯೊಂದು ಸಾಂಸ್ಕೃತಿಕ ಕಾರ್ಯಕ್ರಮದಲ್ಲೂ ಒಂದಲ್ಲಾ ಒಂದು ರೀತಿಯಲ್ಲಿ ಭಾಗಿಯಾದ ತಿಮ್ಮೇಗೌಡ ರೋಗಿಗಳಿಗೆ ನೆರವಾಗಲೆಂದೇ ಆಂಬುಲೆನ್ಸ್ ಬಿಟ್ಟರು. ಶಾಲಾ ಮಕ್ಕಳಿಗೆ ಉಚಿತ ಯೂನಿಫಾರಮ್ ಕೊಡಿಸಿಕೊಟ್ಟರು. ಯುವಕರಿಗೆ ಉಚಿತ ಡ್ರೈವಿಂಗ್ ಲೈಸೆನ್ಸ್ ಕೊಡಿಸಿದರು. ಬೇರೆ ಅಭ್ಯರ್ಥಿಗಳಿಗೆ ಹೋಲಿಸಿದರೆ ತಿಮ್ಮೇಗೌಡ ವಿನಯವಂತ. ಈ ಬಾರಿ ಶ್ರೀನಗರ ವಾರ್ಡಿನಲ್ಲಿರುವುದು ಜೆಡಿಎಸ್ ಅಲೆ. ಆ ಕಾಲದಿಂದಲೂ ಈ ಸುತ್ತಮುತ್ತ ಜೆಡಿಎಸ್ ಪರ ಹೋರಾಟ ಮಾಡಿಕೊಂಡೇ ಬಂದದ್ದು ಟಿ. ತಿಮ್ಮೇಗೌಡ. ತಂದೆ ತಿಮ್ಮಯ್ಯರ ಹೆಸರಲ್ಲಿ ಚಾರಿಟಬಲ್ ಟ್ರಸ್ಟ್ ಮಾಡಿಕೊಂಡು ಬಡಬಗ್ಗರಿಗೆಂದೇ ಒಂದಲ್ಲ ಎರಡು ಆಂಬುಲೆನ್ಸ್ ಇಟ್ಟು ಸೇವೆಗೈಯುತ್ತಲೇ ಬಂದವನು ತಿಮ್ಮೇಗೌಡ. ಬಹುಶಃ ಈ ಕಾರಣಕ್ಕೇ ಇರಬೇಕು ಬಿಜೆಪಿಯ ಅತೃಪ್ತ ಗುಂಪೊಂದು ಅಧಿಕೃತ ಅಭ್ಯರ್ಥಿಯ ವಿರುದ್ಧ ತಿಮ್ಮೇಗೌಡರನ್ನು ಬೆಂಬಲಿಸುತ್ತಿದೆ. ಹಾಗೇ ತನಗೆ ಟಿಕೆಟ್ ತಪ್ಪಿಸಿದ ಸಿಟ್ಟಿಗೆ ಬಿದ್ದ ಶಿವರಾಮೇಗೌಡರ ಮಗ ಚೇತನ್ ಕೂಡ ಕಾಂಗ್ರೆಸ್ ಅಭ್ಯರ್ಥಿಯ ವಿರುದ್ಧ ತಿಮ್ಮೇಗೌಡರ ಪರ ಪ್ರಚಾರಕ್ಕಿಳಿದಿದ್ದಾರೆ.




ಚೇತನ್ ಗೌಡ



ಸಿದ್ದೇಗೌಡ

ಇನ್ನು ಪಕ್ಷೇತರ ಅಭ್ಯರ್ಥಿ ಸಿದ್ದೇಗೌಡರಿಗೆ ಠೇವಣಿ ಗಿಟ್ಟುವುದೇ ಕಷ್ಟ. ಜೆಡಿಎಸ್‌ಗೆ ಕಾಲಿಟ್ಟದ್ದೇ ಎರಡು ತಿಂಗಳ ಹಿಂದೆ. ನಿನ್ನೆ ಮೊನ್ನೆ ಬಂದವನಿಗೆ ಯಾರು ತಾನೇ ಟಿಕೆಟ್ ಕೊಟ್ಟಾರು? ಆ ಕಾಲದಿಂದಲೂ ಶ್ರೀನಗರ ಸುತ್ತಮುತ್ತ ಜೆಡಿಎಸ್ ಸಂಘಟಿಸಿಕೊಂಡೇ ಬಂದ ತಿಮ್ಮೇಗೌಡರ ಪರ ಲೋಕಲ್ ಕನ್ನಡ ಪರ ಸಂಘಟನೆಗಳೂ ಕೈಜೋಡಿಸಿವೆ. ಬಿಜೆಪಿ ಕಚ್ಚಾಟ ಮತ್ತು ಕಾಂಗ್ರೆಸ್ ಅಂತಃಕಲಹದ ಲಾಭವೇನಾದರೂ ಕೈಗೂಡಿತೆಂದರೆ ಜೆಡಿಎಸ್ ಅಭ್ಯರ್ಥಿ ತಿಮ್ಮೇಗೌಡರ ಗೆಲುವು ಕಷ್ಟವೇನಲ್ಲ.



ತಿಮ್ಮೇಗೌಡ

ಕೊನೇ ಗಳಿಗೆಯಲ್ಲಿ ಬಿಜೆಪಿ ಹಣ ಹಂಚಿ ಓಟ್‌ಬ್ಯಾಂಕ್ ಖರೀದಿಸುವ ಹುನ್ನಾರಕ್ಕೆ ಕೈಹಾಕುವುದು ಗ್ಯಾರಂಟಿ. ಅದಕ್ಕೆಂದೇ ಬಿಜೆಪಿ ಅಭ್ಯರ್ಥಿಗೆ ಒಂದು ಕೋಟಿಯ ಪಾರ್ಟಿ ಫಂಡ್ ಬಂದಿದೆಯಂತೆ. ಇದನ್ನು ತಡೆಯುವ ಶಕ್ತಿ ಜೆಡಿಎಸ್‌ಗಿರಬೇಕಷ್ಟೇ.

ಸಾರಕ್ಕಿ -178


ನೆಲಬಾಕ ನಟರಾಜ್‌ಗೆ ಬ್ರಾಹ್ಮಣರ ಹಿಡಿಶಾಪ

ಸಾರಕ್ಕಿಯ ದೌರ್ಭಾಗ್ಯವೋ ಅಥವಾ ಬಿಜೆಪಿಯ ದುರ್ಬುದ್ಧಿಯೋ ಗೊತ್ತಿಲ್ಲ, ಎಸ್.ಕೆ. ನಟರಾಜ್ ಎಂಬ ಸಕಲಕಲಾ ಪ್ರವೀಣನಿಗೆ ಮತ್ತೆ ಟಿಕೆಟ್ ಕೊಟ್ಟು ಶಾಪವೆಂಬಂತೆ ಮತ್ತೆ ಸಾರಕ್ಕಿಗೆ ಹೇರಿದ್ದಾರೆ.

ಹಿಂದೆ ಒಂದಲ್ಲ ಎರಡು ಬಾರಿ ಬಿಜೆಪಿಯಿಂದ ಗೆದ್ದು ಕೌನ್ಸಿಲರ್ ಆಗಿದ್ದ ನಟರಾಜ್ ಸಾರಕ್ಕಿಗೆ ಮಾಡಿದ ಉಪಕಾರವೆಂದರೆ ಎಲ್ಲೆಲ್ಲಿ ಪಾಲಿಕೆ ಆಸ್ತಿಯಿತ್ತೋ ಅದೆಲ್ಲವನ್ನೂ ಮುಂಡಾಮೋಚಿದ್ದು. ಸಾರಕ್ಕಿ ಸುತ್ತಮುತ್ತ ಸರಿಸುಮಾರು 45 ಲಿಟಿಗೇಷನ್ ಆಸ್ತಿಗಳಿಗೆ ವಕ್ಕರಿಸಿ ಅದಕ್ಕೆ ನಕಲಿ ದಾಖಲೆ ಸೃಷ್ಟಿಸಿ, ಸೈಟು ಮಾಡಿ ಒಂದೇ ಸೈಟನ್ನು ನಾಲ್ಕಾರು ಜನಕ್ಕೆ ಮಾರಿ ಹಾಕಿದ್ದೇ ಈತನ ತಾಕತ್ತಿನ ಮೂಲ. ಇವತ್ತು ಅದೇ ದುಡ್ಡು ಬಳಸಿ ಮತ್ತೆ ಕೌನ್ಸಿಲರ್ ಆಗಬೇಕಂತೆ.

ತಾನು ರೆಡ್ಡಿ ಅಂತ ಹೇಳಿಕೊಳ್ಳುತ್ತಾನಾದರೂ ಈತ ಸಾರಕ್ಕಿಯ ಕೃಷ್ಣಾ ರೆಡ್ಡಿ, ನಂಜಮ್ಮ ದಂಪತಿಗಳ ಸಾಕು ಮಗನೇ ಹೊರತು ರಕ್ತ ಸಂಬಂಧಿಯಲ್ಲ. ಹಾಗಿದ್ದೂ ತಂದತಾಯಿಯರ ಮೇಲಿನ ಗೌರವಕ್ಕೆ ಜನ ಓಟು ಕೊಟ್ಟರು. ಗೆದ್ದ ನಟರಾಜ್ ದುರ್ಗಾಪರಮೇಶ್ವರಿ ದೇವಸ್ಥಾನಕ್ಕೆ ವಕ್ಕರಿಸಿ ಅದರ ಹುಂಡಿಗೆ ಕನ್ನಪಿಟ್ಟ. ದೇವಸ್ಥಾನದ ಚೌಲ್ಟ್ರಿಯನ್ನೂ ಆಕ್ರಮಿಸಿಕೊಂಡು ಅದರ ಹದಿನೈದು ಸಾವಿರ ರೂಪಾಯಿಗಳ ಬಾಡಿಗೆಯನ್ನೂ ತಾನೇ ನುಂಗಲಾರಂಭಿಸಿದ. ಸಾರಕ್ಕಿಯ ಬ್ರಾಹ್ಮಣರೆಲ್ಲ ಈತನ ತಲೆಕಂಡರೇನೇ ಉರಿದು ಬೀಳುತ್ತಾರೆಂದರೆ ಅದಕ್ಕೆ ಬ್ರಾಹ್ಮಣ ಯುವತಿಯೊಬ್ಬಳಿಗೆ ಮಾಡಿದ ಅನ್ಯಾಯವೇ ಕಾರಣ.


ಅಷ್ಟಕ್ಕೂ ನಟರಾಜ್ ಕೌನ್ಸಿಲರ್ ಆಗಿದ್ದೇ ತನ್ನ ಭೂಕಂಟಕ ಗೂಂಡಾಪಡೆಯನ್ನು ಬಳಸಿ ಪ್ರಾರಂಭದಲ್ಲಿ ಚೀಟಿ ನಡೆಸುತ್ತಿದ್ದ ಈತನ ಅಪ್ಪ ಅಮ್ಮಂದಿರ ಮೇಲಿನ ಗೌರವಕ್ಕೆ ಜನ ಚೀಟಿ ದುಡ್ಡು ಕಟ್ಟಿದರೆ ನಟರಾಜ್ ಅವರೆಲ್ಲರಿಗೂ ತಿರುಪತಿಯ ದಾರಿ ತೋರಿಸಿಬಿಟ್ಟ. ಹೀಗೆ ಯಾರೆಲ್ಲ ಮೋಸ ಹೋದರೋ ಅಂಥವರೇನಾದರೂ ವಸೂಲಿಗೆ ಬಂದರೆ ಬಡಿದಾಡಲು ಬೇಕಲ್ಲ; ಅದಕ್ಕೆಂದೇ ರೌಡಿ ಗ್ಯಾಂಗ್ ಕಟ್ಟಿಕೊಂಡ. ಹೀಗೆ ಕಟ್ಟಿದ ರೌಡಿ ಪಡೆಯನ್ನೇ ಬಳಸಿಕೊಂಡು ಮುಂದೆ ಲಿಟಿಗೇಷನ್ ಆಸ್ತಿಗೆ ಕೈಯಿಟ್ಟು ಕಂಡೋರ ಆಸ್ತಿ ಕಬಳಿಸತೊಡಗಿದ.



ಅರುಣ್‌ಕುಮಾರ್

ಈತನ ಲ್ಯಾಂಡ್ ಗ್ರಾಬಿಂಗ್ ತಾಕತ್ತು ಡೀಲಿನ ಮಸಲತ್ತು ಕಂಡೇ ಜೊತೆ ಹಾಕಿಕೊಂಡ ಅಶೋಕ್ ಪಾಲಿಕೆ ಎಲೆಕ್ಷನ್ನಿಗೆ ತಂದು ಕೌನ್ಸಿಲರ್ ಮಾಡಿ ಇನ್ನಷ್ಟು ಅನಾಹುತಕ್ಕೆ ಕಾರಣರಾದರು. ಯಾರೇ ಮನೆ ಕಟ್ಟಬೇಕೆಂದರೂ ನಟರಾಜ್‌ಗೆ ಐದು ಲಕ್ಷದ ಲಂಚ ಕಕ್ಕಲೇಬೇಕು. ಇಲ್ಲದಿದ್ದರೆ ಪಾಲಿಕೆ ಇಂಜಿನಿಯರ್‌ಗಳನ್ನು ಛೂಬಿಟ್ಟು ಕಾಟ ಕೊಡುವುದಂತೂ ಶತಸ್ಸಿದ್ಧ. ಸಾಲದ್ದಕ್ಕೆ ಯಾರೇ ಇಂಜಿನಿಯರ್ ವಾರ್ಡಿಗೆ ಬಂದರೂ ಹೊಡೆದ ಕೊಳ್ಳೆಯ ಬಹುಪಾಲನ್ನು ಈತನಿಗೊಪ್ಪಿಸಬೇಕು. ಈತನ ವಸೂಲಿಗೆ ಬೇಸತ್ತೇ ಬಂದ ಬಂದ ಇಂಜಿನಿಯರ್‌ಗಳೆಲ್ಲ ಅದೇ ತಿಂಗಳಲ್ಲಿ ಟಾಟಾ ಹೇಳುತ್ತಿದ್ದರು.

ಕೇವಲ ಸುಲಿಗೆ-ವಸೂಲಿ ಮಾತ್ರವೇ ಆಗಿದ್ದರೆ ಜನ ನಟರಾಜ್‌ನನ್ನು ಕ್ಷಮಿಸುತ್ತಿದ್ದರೇನೋ. ತಾನು ಹಿಂದೂ ವೀರನೆಂದೂ, ಬಿಜೆಪಿಯೆಂದೂ ರೈಲು ಬಿಡುವ ಇದೇ ನಟರಾಜ್ ಎಂಥಾ ಆತ್ಮವಂಚಕನೆಂಬುದು ಮೊದಲ ಬಾರಿಗೆ ಬಯಲಾದದ್ದು ಋಷಿ ಅಬ್ಬಯ್ಯಪ್ಪ ಆಶ್ರಮದ ಆವರಣದಲ್ಲಿದ್ದ ಧರ್ಮರಾಯ ಸ್ವಾಮಿ ದೇವಸ್ಥಾನಕ್ಕೇ ಈತ ಕಂಟಕನಾದಾಗ. ದೇವಸ್ಥಾನ ಜಾಗ ನುಂಗಲೆಂದು ಅದಕ್ಕೆ ಕರೆಂಟ್ ಕಟ್ ಮಾಡಿಸಿದ. ಅದಕ್ಕೂ ಜಗ್ಗದೇ ಹೋದಾಗ ದೇವರ ಮೂರ್ತಿಗಳನ್ನೇ ತಂದು ರಸ್ತೆಗೆ ಬಿಸಾಕಿದ್ದ. ಇದು ಗೊತ್ತಾಗಿದ್ದೇ ಜಯನಗರದ ಶಾಸಕ ವಿಜಯಕುಮಾರ್ ಧಾವಿಸಿ ಬಂದು ರಸ್ತೆಗೆ ಬಿದ್ದಿದ್ದ ದೇವರ ಮೂರ್ತಿಗೆ ಮುಕ್ತಿ ಕಾಣಿಸಿ ನಟರಾಜ್‌ಗೆ ಕ್ಯಾಕರಿಸಿ ಉಗಿದರು.



ಎಸ್.ಕೆ. ನಟರಾಜ್


ಹಾಗಂಥ ನಟರಾಜ್ ಅಷ್ಟಕ್ಕೇ ಸುಮ್ಮನಾಗಲಿಲ್ಲ. ಧರ್ಮರಾಯಸ್ವಾಮಿ ಗುಡಿ ಪಕ್ಕ ಇದ್ದ 30x40 ಸೈಟನ್ನು ನುಂಗಿ ನೀರು ಕುಡಿದ. ಹಿಂದೆ ಸಾರಕ್ಕಿ ವಾರ್ಡಿಗೆ ಶಾಕಾಂಬರಿ ನಗರ ಕೂಡ ಸೇರುತ್ತಿತ್ತು. ಅಲ್ಲಿ ಎರಡೂವರೆ ಎಕರೆ ಸರ್ಕಾರಿ ಆಸ್ತಿಗೆ ಬೇಲಿ ಹಾಕಿದ ನಟರಾಜ್ ಅದೆಲ್ಲವನ್ನೂ ಸೈಟನ್ನಾಗಿ ವಿಂಗಡಿಸಿ ಒಂದೇ ಸೈಟನ್ನು ಕಂಡಕಂಡವರಿಗೆ ಮಾರಿಹಾಕಿದ. ಇವತ್ತು ನಟರಾಜ್ ಎಲೆಕ್ಷನ್ನಿಗೆ ಸುರಿಯುತ್ತಿರುವುದು ಇದೇ ಪಾಪದ ದುಡ್ಡನ್ನು!

ಇಂಥ ಖತರ್‌ನಾಕ್ ಬಿಜೆಪಿ ನಾಯಕನಿಗೀಗ ನಿದ್ದೆ ಬರುತ್ತಿಲ್ಲ. ಏಕೆಂದರೆ ಈತನ ವಿರುದ್ಧ ಕಾಂಗ್ರೆಸ್ ಅಭ್ಯರ್ಥಿಯಾಗಿರುವ ಅರುಣ್‌ಕುಮಾರ್‌ಗೆ ಆ ಮಟ್ಟದ ಜನಬೆಂಬಲ ಸೃಷ್ಟಿಯಾಗಿದೆ. ಜೆಪಿನಗರ ಕ್ರೀಡಾ ಕ್ಲಬ್ ಅಧ್ಯಕ್ಷರಾಗಿ, ಸ್ಥಳೀಯ ಚಾಲುಕ್ಯ ಗೆಳೆಯರ ಬಳಗದ ಸಂಸ್ಥಾಪಕರಾಗಿ ಲಾಗಾಯ್ತಿನಿಂದ ರಕ್ತ ಬ್ಯಾಂಕು, ನೇತ್ರ ಚಿಕಿತ್ಸೆ, ನಿರುದ್ಯೋಗಿ ಮಹಿಳೆಯರ ಸ್ವಾವಲಂಬನೆಗಾಗಿ ಹೆಣಗಾಡುತ್ತಲೇ ಬಂದದ್ದು ಅರುಣ್‌ಕುಮಾರ್. ಇದೇ ಅರುಣ್‌ಕುಮಾರ್ ಸ್ಥಾಪಿಸಿದ ಮಾಡರ್ನ್ ಸ್ಕೂಲ್ ಈ ಸುತ್ತಮುತ್ತಲ ಸಾವಿರಾರು ಬಡವಿದ್ಯಾರ್ಥಿಗಳ ಪಾಲಿಗೆ ಜೀವನಾಧಾರದಂತಿದೆ. ಡೊನೇಷನ್ ಇಲ್ಲ, ಫೀಜು ಕೂಡ ತೀರ ಕಮ್ಮಿ. ಕೌನ್ಸಿಲರ್ ಆಗಿ ಜನರ ಪಾಲಿನ ಆಸ್ತಿ ದೋಚುವ ನಟರಾಜ್ ಎಲ್ಲಿ? ಕೌನ್ಸಿಲರ್ ಆಗದೇನೇ ವಿದ್ಯಾದಾನಗೈಯುವ ಅರುಣ್‌ಕುಮಾರ್ ಎಲ್ಲಿ?

ಗಣೇಶ್ ಮಂದಿರ -165

ಹೊಸ ಗಾಳಿಯ ಅಲೆಯೇರಿ ಗೋವಿಂದರಾಜು

[illegible]



ಇದರಿಂದ ಹೊಟ್ಟೆಕಿಚ್ಚಿಗೆ ಬಿದ್ದ ಬಿಜೆಪಿ[illegible] ಯಾವುದೋ ಕಾಲಕ್ಕೆ ಗೋವಿಂದರಾಜು ಕಟ್ಟಿ[illegible] ಕಲ್ಯಾಣ ಮಂಟಪಕ್ಕೆ ಪ್ಲಾನ್ ಸರಿಯಿಲ್ಲವೆಂದು ನೋಟೀಸ್ ಕೊಟ್ಟರು. ಸುಳ್ಳು ಕೇಸು ಹಾಕ[illegible]ಯತ್ನಿಸಿದರು. ಇದ್ಯಾವುದಕ್ಕೂ ಗೋವಿಂದರಾಜು ಜಗ್ಗಲಿಲ್ಲ. ನೆಲಸಮಗೊಳಿಸುವುದಾದರೆ ತನ್ನದೊಂದೇ [illegible] ಏಕೆ? ಬೆಂಗಳೂರು ತುಂಬ ಇಂಥ ಐನೂರಕ್ಕೂ [illegible] ಕಲ್ಯಾಣ ಮಂಟಪಗಳಿವೆ. ಅವೆಲ್ಲವನ್ನೂ ಬಿಟ್ಟು ತಮ್ಮದು ಮಾತ್ರ ಏಕೆ ಬಿಜೆಪಿ ಸರ್ಕಾರ [illegible] ಎಂದು ಕೋರ್ಟಿನ ಮೊರೆ ಹೊಕ್ಕರು.

[illegible] ಗೋವಿಂದರಾಜು [illegible] ಮಂದಿರ [illegible] ಗೋವಿಂದರಾಜು ಗೆಲುವಿಗಾಗಿ [illegible] ಅಚ್ಚರಿಯೇನಿಲ್ಲ.



ಜೈಕುಮಾರ್ ಗೌಡ

ಕಾಮಾಕ್ಷಿಪಾಳ್ಯ -101

ಜೈಕುಮಾರ್ ಗೌಡರ ಹೋರಾಟ

ಮಾಕ್ಷಿಪಾಳ್ಯ ವಾರ್ಡಿನ ಜನ ಈ ಬಾರಿ ಜೆಡಿಎಸ್ ಅನ್ನು ಅಪ್ಪಿಕೊಳ್ಳುವ ಳೇ ಹೆಚ್ಚಾಗಿರುವಂತಿದೆ. ಏಕೆಂದರೆ ಈ ಸುತ್ತಮುತ್ತಲ ನಾಗರಿಕರ ಪ್ರತಿನಿತ್ಯದ ಹಾವಳಿಯಂತಿರುವ ರೌಡಿ ಉಪಟಳ ಮತ್ತು ಕೆಯ ವಿರುದ್ಧ ಬೇರೆಲ್ಲರಿಗಿಂತಲೂ ಬೀದಿಗಿಳಿದು ಹೋರಾಡಿದ್ದು ಅಭ್ಯರ್ಥಿ ಜೈಕುಮಾರ್ ಗೌಡ.

ಗೆ ಪುಂಡರ ವಿರುದ್ಧ ಹೋರಾಟಕ್ಕಿಳಿದಿದ್ದಕ್ಕೆ ಜೈಕುಮಾರ್ ಗೌಡರ ರೌಡಿ ಗ್ಯಾಂಗ್ ದಾಳಿ ನಡೆಸಿತು. ಸ್ಥಳೀಯ ಪೊಲೀಸರು ಕೂಡ ಜೊತೆ ಕೈಜೋಡಿಸಿದಾಗ ಪೊಲೀಸ್ ಠಾಣೆ ಎದುರೇ ಧರಣಿ . ಕಾಮಾಕ್ಷಿಪಾಳ್ಯದಲ್ಲಿ ಪುಂಡರ ಹಾವಳಿ ಯಾವ ಮಟ್ಟಕ್ಕಿದೆಯೆಂದರೆ ಒಬ್ಬಂಟಿ ಹೆಣ್ಣುಮಕ್ಕಳು ನಿರಾತಂಕವಾಗಿ ಓಡಾಡಲು ಸಾಧ್ಯವೇ ತಿನಿತ್ಯ ಗಾರ್ಮೆಂಟ್ ಕೆಲಸಕ್ಕೆ ಹೋಗುವ ಅಸಹಾಯಕ ಹೆಣ್ಣುಮಕ್ಕಳು ತಂದೆತಾಯಂದಿರು ಜೈಕುಮಾರ್ ಗೌಡರನ್ನು ಬೆಂಬಲಿಸುವುದು ಈ ಕಾರಣಕ್ಕೆ.

ರೆ ಜೈಕುಮಾರ್ ಗೌಡರ ಹೆಗ್ಗಳಿಕೆ ಇದೊಂದೇ ಅಲ್ಲ. ಅಸಹಾಯಕ ಯರಿಗೆ ಟೈಲರಿಂಗ್ ಮಿಷಿನ್ ವಿತರಿಸಿದ್ದಾರೆ. ಮನೆ ಮನೆ ಸುತ್ತಿ ಕಾರ್ಡು, ವೃದ್ಧಾಪ್ಯ ವೇತನ ಕಲ್ಪಿಸಿದ್ದಾರೆ. ಇದೆಲ್ಲಕ್ಕೂ ಮಿಗಿಲಾಗಿ ಕನ್ನಡ ೋರಾಟಗಳಲ್ಲಿ ಸಕ್ರಿಯರಾಗಿರುವ ಜೈಕುಮಾರ್ ಆದಿಚುಂಚನಗಿರಿ ಗಾಧರನಾಥ ಸ್ವಾಮಿಯ ಪರಮಭಕ್ತ. ಕಾಮಾಕ್ಷಿಪಾಳ್ಯದ ಜೆಡಿಎಸ್ ಗೋಪಾಲಯ್ಯ ಇಲ್ಲಿಗೆ ಅಭ್ಯರ್ಥಿಯಾಗಬೇಕಿತ್ತು. ತನಗಿಂತ ಾರ್ ನಿಂತರೇನೇ ವಾಸಿ ಎಂದು ಗೋಪಾಲಯ್ಯ ಕೂಡ ಅವರ ಪರ ಳಿದಿದ್ದಾರೆ. ಕಳೆದ 15 ವರ್ಷಗಳಿಂದ ಬಿಜೆಪಿಯಲ್ಲಿದ್ದ ಮುದಣ್ಣನ ನುಮಂತಪ್ಪ ಜೆಡಿಎಸ್ ಸೇರಿ ಜೈಕುಮಾರ್ ಪರ ಳಿದಿರುವುದು ಇಲ್ಲಿ ಜೆಡಿಎಸ್ ಶಕ್ತಿಯನ್ನು ಇಮ್ಮಡಿಸಿದೆ.


ಪಿ ನಾಯಕ ರಂಗಣ್ಣ ಇಲ್ಲಿ ಬಿಜೆಪಿ ಅಭ್ಯರ್ಥಿ. ಹಿಂದೆ ಗೆದ್ದು ಇದೇ ಕೌನ್ಸಿಲರ್ ಆಗಿದ್ದರು. ಕಾಂಗ್ರೆಸ್ ರಾಧಾಕೃಷ್ಣ ಎಂಬ ಡಮ್ಮಿ ಯನ್ನು ಹಾಕಿದೆ. ಅದೂ ಪೇಮೆಂಟ್ ಕೋಟಾದ ಟಿಕೆಟ್ಟಂತೆ. ಾಗಿ ಮೊದಲೇ ಪರಿಚಿತರಲ್ಲದ ರಾಧಾಕೃಷ್ಣರಿಗೆ ಕ್ಷೇತ್ರದ ವಾಗುವ ಹೊತ್ತಿಗೆ ಎಲೆಕ್ಷನ್ನೇ ಮುಗಿದಿರುತ್ತದೆ. ಜೆಡಿಎಸ್ ರ್ತರ ಒಗ್ಗಟ್ಟು ಮತ್ತು ಉತ್ಸಾಹ ನೋಡುತ್ತಿದ್ದರೆ ಕಾಮಾಕ್ಷಿಪಾಳ್ಯ ಈ ಕುಮಾರ್ ಗೌಡರ ಪಾಲಾಗುವ ಸಾಧ್ಯತೆಗಳೇ ಹೆಚ್ಚು.



ಯಲಚೇನಹಳ್ಳಿ -185

ಪ್ರಗತಿಪರ ರೌಡಿಗಳಿಂದ ಪಿಎಫ್ಐ ಮುಸ್ಲಿಮರಿಗೆ ಬೆದರಿಕೆ!

ಯಲಚೇನಹಳ್ಳಿಯ ವಾರ್ಡ್ ನಂಬರ್ 185 ರಿಂದ ಸ್ಪರ್ಧಿಸಿರುವ ಕಾಂಗ್ರೆಸ್ ಅಭ್ಯರ್ಥಿ ಓ. ಮಂಜುನಾಥ ಎಲೆಕ್ಷನ್ ಗೆಲ್ಲಲು ನೇರ ರೌಡಿಸಂಗೆ ಇಳಿದಿರುವುದೇ ಇಲ್ಲಿನ ವಿಶೇಷ.



ಈ ವಾರ್ಡಿನಿಂದ ಬಿಜೆಪಿ ಅಭ್ಯರ್ಥಿಯಾಗಿ ಬಾಲಾಜಿಸಿಂಗ್ ಹಾಗೂ ಜೆಡಿಎಸ್‌ನಿಂದ ಎಲೆಕ್ಟ್ರಿಕ್ ನಾಗರಾಜ್ ಕೂಡಾ ಇದ್ದಾರೆ. ಇದಕ್ಕಿಂತ ಮುಖ್ಯವಾಗಿ ಪಾಪುಲರ್ ಫ್ರಂಟ್ ಆಫ್ ಇಂಡಿಯಾದ ರಾಜಕೀಯ ಪಕ್ಷವಾದ SDPI (Social Democratic Party Of India) ನಿಂದ ಮೌಲಾನ ಸೈಯದ್ ಸೈಫುಲ್ಲಾ ಕೂಡ ಕಣಕ್ಕಿಳಿದಿದ್ದರು. ಈ ಸೈಫುಲ್ಲಾ ಎಷ್ಟು ಸರಳ ವ್ಯಕ್ತಿ ಹಾಗೂ ಜನಪ್ರಿಯರೆಂದರೆ ಈ ಬಾರಿ ಆತ ಎಲೆಕ್ಷನ್ ಗೆಲ್ಲುವುದು ಗ್ಯಾರಂಟಿ ಎಂಬಂತಿತ್ತು. ಯಲಚೇನಹಳ್ಳಿ ವಾರ್ಡ್‌ನಲ್ಲಿ ಮುಸ್ಲಿಮರೇ ಮೆಜಾರಿಟಿಯಲ್ಲಿರುವುದು ಹಾಗೂ ಈ ಹಿಂದೆ KFD ಹಾಗೂ PFI ಗಳು ಇಲ್ಲಿ ಸಂಘಟನಾ ಕಾರ್ಯ ಮಾಡಿರುವುದರಿಂದ ಬಹುತೇಕ ಮತದಾರರು SDPI ನ ಸೈಫುಲ್ಲಾರನ್ನು ಬೆಂಬಲಿಸಲು ತೀರ್ಮಾನಿಸಿದ್ದರು.

ಈ ಹಂತದಲ್ಲೇ ಕಾಂಗ್ರೆಸ್ ಕ್ಯಾಂಡಿಡೇಟ್ ಮಂಜುನಾಥ್ ಗಾಬರಿಯಾದ. ಬೆಂಗಳೂರಿನ ಭೂಗಳ್ಳರ ಹಾಗೂ ಮಾಫಿಯಾಗಳ ಲಿಂಕ್ ಇರುವ ಮಂಜುನಾಥ ತನ್ನ ರೌಡಿ ಪಟಾಲಂ ಅನ್ನು ಸೈಫುಲ್ಲಾ ವಿರುದ್ಧ ಛೂಬಿಟ್ಟ. ಇಲ್ಲಿಯಾಸ್ ನಗರದ ಪಾತಕಿಗಳಾದ ಅನ್ವರ್ ಹಾಗೂ ನಯಾಜ್ ಎಂಬುವರು ತಮ್ಮ ಪುಂಡರ ಗುಂಪನ್ನು ಕಟ್ಟಿಕೊಂಡು ಮೊನ್ನೆ ಮಾರ್ಚ್ 21ರ ಭಾನುವಾರ SDPI ಕಚೇರಿಗೆ ನುಗ್ಗಿ ದಾಂಧಲೆ ಎಬ್ಬಿಸಿಬಿಟ್ಟರು. ಸೈಫುಲ್ಲಾ ಪರ ಕೆಲಸ ಮಾಡುತ್ತ ಆಫೀಸಿನಲ್ಲಿದ್ದ PFI ಕಾರ್ಯಕರ್ತರಿಗೂ ಮನಬಂದಂತೆ ಹಲ್ಲೆ ಮಾಡಿದ್ದಾರೆ.

ಬಚ್ಚನ್ ಎನ್ನುವ ಏರಿಯಾ ರೌಡಿಯ ಹೆಸರು ಹೇಳಿಕೊಂಡು PFI ಆಫೀಸನ್ನು ಚಿಂದಿ ಎಬ್ಬಿಸಿದ ಈ ರೌಡಿಗಳ ಪೆಟ್ಟಿನಿಂದ ಇಬ್ಬರು PFI ಕಾರ್ಯಕರ್ತರ ತಲೆ ಸೀಳಿ ಗಂಭೀರ ಗಾಯಗಳಾಗಿವೆ. ಈ 'ಪ್ರಗತಿಪರ' ಗೂಂಡಾಗಳ ದೌರ್ಜನ್ಯ ಯಾವ ಲೆವೆಲ್‌ಗೆ ಹೋಗಿದೆಯೆಂದರೆ ಸೈಫುಲ್ಲಾ ಈಗ ತಮ್ಮ ಪ್ರಚಾರ ಕಾರ್ಯವನ್ನೇ ನಿಲ್ಲಿಸಿದ್ದಾರೆ. ಇಲ್ಲಿಯಾಸ್ ನಗರದಲ್ಲಿದ್ದ PFI ಆಫೀಸ್‌ಗೆ ಬೀಗ ಹಾಕಲಾಗಿದೆ.

ಇಡೀ ವಾರ್ಡಿನಲ್ಲಿ ಜನ ಎಷ್ಟು ಭಯಭೀತರಾಗಿದ್ದಾರೆಂದರೆ ಹಲ್ಲೆ ನಡೆಸಿದ ರೌಡಿಗಳಿಗೆ ಹೆದರಿಕೊಂಡು ಯಾರೊಂದಿಗೂ ಮಾತನಾಡುತ್ತಿಲ್ಲ. ಈ ಮಂಜುನಾಥ ಮೂಲತಃ ಗೂಂಡಾಗಳ ಸಂಬಂಧಿ. ಮುಸ್ಲಿಮರೆಂದರೆ ಬಿಜೆಪಿಯನ್ನು ವಿರೋಧಿಸಿ ಕಾಂಗ್ರೆಸ್‌ಗೆ (ಅಂದರೆ ತನಗೆ) ಮಾತ್ರ ಬೆಂಬಲಿಸಬೇಕಾದ ಓಟ್‌ಬ್ಯಾಂಕ್ ಎಂಬಂತಿದೆ ಇವನ ದುಷ್ಟತನ. ಈ ನಡುವೆ ಈ 'ಪ್ರಗತಿಪರ' ರೌಡಿಗಳು ಜೆಡಿಎಸ್ ಅಭ್ಯರ್ಥಿ ಎಲೆಕ್ಟ್ರಿಕ್ ನಾಗರಾಜನೊಂದಿಗೆ ಓಡಾಡುತ್ತಿದ್ದಾರೆ. ಮುಸ್ಲಿಮರೇನಾದರೂ ಕಾಂಗ್ರೆಸ್ ಅಥವಾ ಜೆಡಿಎಸ್ ಬಿಟ್ಟು ತಮ್ಮದೇ ಪಕ್ಷ ರಚಿಸಿಕೊಂಡರೆ, ತಮ್ಮವರನ್ನೇ ಕ್ಯಾಂಡಿಡೇಟ್ ಹಾಕಿ ಚುನಾವಣೆಗೆ ನಿಂತರೆ ಪ್ರಗತಿಪರ ಮುಖವಾಡ ಹಾಕಿಕೊಂಡಿರುವ ರೌಡಿಗಳ ಗೂಂಡಾಗಿರಿ ಹೇಗೆ ಶುರುವಾಗುತ್ತದೆನ್ನಲು ಯಲಚೇನಹಳ್ಳಿಯ ಹಲ್ಲೆ ಘಟನೆಯೇ ಸಾಕ್ಷಿಯಾಗಿದೆ.

ಮುಸ್ಲಿಂ ಸಮುದಾಯದ ನಡುವೆ ಜಾಗೃತಿ ಮೂಡಿಸಿ, ಸ್ವಾಭಿಮಾನ ಬೆಳೆಸಲು ಶ್ರಮಿಸುತ್ತಿರುವ PFI ಸಂಘಟನೆಯು ಬಚ್ಚನ್, ಅನ್ವರ್, ನಯಾಜ್‌ರಂತಹ ಈ ಚಿಲ್ಲರೆ ರೌಡಿಗಳಿಗೆ ಹೆದರಿ ತನ್ನ ಅಭ್ಯರ್ಥಿ ಸೈಫುಲ್ಲಾರಿಗೆ ರಕ್ಷಣೆ ನೀಡದೆ ಹಿಂದೆ ಸರಿದಿರುವುದೇ ಇಲ್ಲಿನ ದುರಂತ.

ಆದರೆ ಇಲ್ಲಿಯಾಸ್ ನಗರ, ಯಲಚೇನಹಳ್ಳಿ, ಕನಕನಗರ ಹಾಗೂ ರಾಮಕೃಷ್ಣ ನಗರ ಏರಿಯಾಗಳ ಮುಸ್ಲಿಂ ಮತದಾರರು ಕಾಂಗ್ರೆಸ್ ಮಂಜುನಾಥನ ಗೂಂಡಾಗಿರಿಗೆ ತಕ್ಕ ಪಾಠ ಕಲಿಸಲು ತಯಾರಾಗುತ್ತಿದ್ದಾರೆ.



ಪಿಎಫ್ಐ ಅಭ್ಯರ್ಥಿ ಸೈಫುಲ್ಲಾರ ದಾಳಿಗೊಳಗಾದ ಕಚೇರಿ

...ಸಭೆಗೆ ಜಯಶ್ರೀ ...ಗ್ರೆಸ್ ಎಚ್ಚರಗೊಂಡಿದೆಯೇ?

ತಿಕ ಸಾಮಾಜಿಕ ವಲಯದಿಂದ ರಾಜ್ಯಸಭೆಗೆ ನಡೆಯುವ ಹುತೇಕ ರಾಜಕೀಕರಣಗೊಂಡೇ ಇರುತ್ತದೆ. ಲಾಬಿ ಮಾಡುವ ಾವಿದರಿಗೆ, ತಮ್ಮ ಪಕ್ಷದೊಂದಿಗೆ ಗುರ್ತಿಸಿಕೊಂಡವರಿಗೆ ಮಣೆ ಹಾಕುವುದೂ ನಡೆದೇ ಬಂದಿದೆ.

ಈ ಸಾರಿ ಕರ್ನಾಟಕದಿಂದ ರಾಜ್ಯಸಭೆಗೆ ಂದಿರುವ ರಂಗಕರ್ಮಿ ಬಿ.ಜಯಶ್ರೀಯವರ ಆಯ್ಕೆಯಲ್ಲಿ ಾರಣ ಸುಸುಳದಿರುವುದು ಸ್ವಾಗತಾರ್ಹ ವಿಷಯವಾಗಿದೆ. ರಾಜಕಾರಣ ಗೊತ್ತಿರದ ಬಿ.ಜಯಶ್ರೀಯವರಿಗೆ ಕಾಂಗ್ರೆಸ್ ಸಿಯಾಗಾಂಧಿ ಫೋನ್ ಮಾಡಿ ತಿಳಿಸಿದಾಗಲಷ್ಟೇ ನೇಮಕವಾಗುತ್ತಿರುವ ವಿಷಯ ತಿಳಿದಿದ್ದು. ಸಾಹಿತ್ಯ ಂದಿಗೆ ಸಂಪರ್ಕದಲ್ಲಿರುವ ಕಾನೂನು ಸಚಿವ ವೀರಪ್ಪ ಯಶ್ರೀ ಹೆಸರು ಸೂಚಿಸಿದ್ದಾರೆ. ಇದಕ್ಕೆ ಆಸ್ಕರ್ ಮತ್ತು ಇತರರು ಹಿಂದುಮುಂದು ನೋಡದೇ ದ್ದಾರೆ. ಅಷ್ಟರಮಟ್ಟಿಗೆ ಈ ಆಯ್ಕೆ ಪಾರದರ್ಶಕವಾಗಿದೆ. ಷ್ಟು ಸೋನಿಯಾರಿಗೆ ಸಲ್ಲುತ್ತದೆ.

ಹಾಗೆಯೇ ಕವಿ, ಚಿತ್ರಸಾಹಿತಿ ಜಾವೇದ್ ಅಖ್ತರ್ ಆಯ್ಕೆ ಕೂಡಾ ಪಾರದರ್ಶಕವಾಗಿದೆ. ಮುಂಬೈ ವಿವಿಯ ನಿವೃತ್ತ ಉಪಕುಲಪತಿ ಬಾಲಚಂದ್ರ ಮುಂಗೇಕರ್ ಅವರನ್ನು ರಾಜ್ಯಸಭೆಗೆ ತಂದಿರುವುದು ಅಧಿವೇಶನಗಳಿಗೆ ಹೊಸ ಸಂಚಲನ ತರಬಹುದು.

ಆದರೆ ಕಾಂಗ್ರೆಸ್ಸಿನಿಂದ ಸಾರ್ವತ್ರಿಕ ಚುನಾವಣೆಗಳಲ್ಲಿ ಸೋಲುಂಡ ರಾಮ್ ದಯಾಳ್ ಮುಂಡಾ ಮತ್ತು ಮಣಿಶಂಕರ್ ಅಯ್ಯರ್ ಆಯ್ಕೆ ಮಾತ್ರ ಪ್ರಶ್ನಾರ್ಹವಾಗಿದೆ. ಅಯ್ಯರ್ ಪ್ರಾಮಾಣಿಕ, ಪಕ್ಕಾ ಜಾತ್ಯತೀತವಾದಿ ಎಂಬುದು ನಿಜವಾದರೂ, ಸಾಂಸ್ಕೃತಿಕ ವಲಯದ ವಿಭಾಗದಿಂದ ಅವರ ಆಯ್ಕೆ ಸೂಕ್ತ ಅಲ್ಲವೇ ಅಲ್ಲ.

ಕರ್ನಾಟಕದಲ್ಲಿ ಕಾಂಗ್ರೆಸ್ಸಿನಿಂದ ಬಿಜೆಪಿಗೆ ಬಂದ ವಿ.ಸೋಮಣ್ಣರನ್ನು ವಿಧಾನಪರಿಷತ್ತಿಗೆ ನೇಮಕ ಮಾಡಿದಾಗ, ರಾಜ್ಯಪಾಲರು ಅದನ್ನು ತಿರಸ್ಕರಿಸಿದ್ದರು. ಬಹುಶಃ ಮೊಯ್ಲಿ, ಆಸ್ಕರ್‌ಗಳಿಗೆ ಇದು ಎಚ್ಚರಿಕೆಯ ಗಂಟೆಯಾಗಿ ಕಂಡಿತೇನೋ?



ಏನೇ ಇರಲಿ, ಗುಬ್ಬಿ ವೀರಣ್ಣನವರ ಮೊಮ್ಮಗಳು ಬಿ.ಜಯಶ್ರೀ, ಎನ್.ಎಸ್.ಡಿಯಲ್ಲಿ ಪದವಿ ಪಡೆದು, ಅಲ್ಕಾಜಿ, ಬಿವಿ ಕಾರಂತರ ಗರಡಿಯಲ್ಲಿ ರಂಗಕೌಶಲ್ಯ ಕಲಿತು, ತಮ್ಮದೇ 'ಸ್ಪಂದನ' ತಂಡ ಕಟ್ಟಿ ರಂಗಭೂಮಿಗೆ ತಮ್ಮ ಶಕ್ತಿಯನ್ನೆಲ್ಲ ಧಾರೆಯೆರೆದ ಮಹಿಳೆ. ಯಾವ ಪಕ್ಷದೊಂದಿಗೆ ಗುರುತಿಸಿಕೊಳ್ಳದ ಪ್ರಾಮಾಣಿಕ ಬಿ.ಜಯಶ್ರೀ ರಾಜ್ಯಸಭೆಯಲ್ಲಿ ರಾಜ್ಯದ ಸಮಸ್ಯೆಗಳಿಗೆ ಪರಿಹಾರ ಪಡೆಯಲು ಯತ್ನಿಸುವಂತಾಗಲಿ.

ಬಿ.ಜಯಶ್ರೀ ಬದಲು ಯು.ಆರ್.ಅನಂತಮೂರ್ತಿಯಂತಹ ರಾಜಕೀಯ, ಸಾಮಾಜಿಕ ಎಚ್ಚರವುಳ್ಳ ಹಿರಿಯರೊಬ್ಬರನ್ನು ಆಯ್ಕೆ ಮಾಡಿದ್ದರೆ ಒಳ್ಳೆಯದಿತ್ತು. ಬಿಜೆಪಿಯಿಂದ 'ರಂಗಾಯಣ'ದ ಮುಖ್ಯಸ್ಥೆಯಾದ ಬಿ.ಜಯಶ್ರೀಯವರಿಗೆ ಅಲ್ಲಿ ಏಗಲಾಗಲಿಲ್ಲ. ಈಗಲಾದರೂ ಅವರು ಚಿಪ್ಪಿನಿಂದ ಹೊರಬಂದು ಸಾಮಾಜಿಕ ಜವಾಬ್ದಾರಿಯನ್ನು ನಿರ್ವಹಿಸುವಂತಾಗಲಿ ಎಂದು ಆಶಿಸೋಣ.

● ಮಲ್ಲಿ

ಗೋಕರ್ಣ ದೇವಾಲಯ ಮಠದ್ದಲ್ಲ

ರಗಳೆ ರಾಘವೇಶನಿಗೆ ಕೋರ್ಟ್ ಕಪಾಳಮೋಕ್ಷ

ದುಡ್ಡೇ ಧರ್ಮ, ದುಡ್ಡು ಧರ್ಮವನ್ನು ರಕ್ಷಿಸುತ್ತದೆ (ಧನೋ ರಕ್ಷತಿ ಧರ್ಮಃ) ಎಂಬ ಬೀಜಮಂತ್ರದ ರಾಮಚಂದ್ರಾಪುರ ಮಠಾಧೀಶ ರಾಘವೇಶ್ವರ ಸ್ವಾಮಿಗೀಗ ಪೀಠತ್ಯಾಗವೊಂದೇ ಗತಿ! ಇತ್ತ ಹೊಸನಗರ ಮಠದ ಆಚೀಚೆ, ಅತ್ತ ಗೋಕರ್ಣದಲ್ಲಿ ನಡುವೆ ಕೋರ್ಟುಗಳಲ್ಲೆಲ್ಲ ಈ ಸೋಗಲಾಡಿ ಸ್ವಾಮಿಗೆ ಒಂದರ ಹಿಂದೊಂದರಂತೆ ಕಪಾಳ ಮೋಕ್ಷಗಳಾಗುತ್ತಿವೆ. ಮಾಡಬಾರದ್ದು ಮಾಡಿದರೆ ಆಗಬಾರದ್ದೇ ಆಗುತ್ತದೆ, ಅಲ್ಲವೇ?

ಅನಾಯಾಸವಾಗಿ ಹಣ ಬಂದುಬೀಳುವ ಗೋಕರ್ಣ ದೇವಾಲಯವನ್ನು ಅನಾಮತ್ತು ನುಂಗಿ ನೀರು ಕುಡಿದಿರುವ ಈ ಸರ್ವಸಂಗ ಪರಿತ್ಯಾಗಿ ಆ ಮಹಾಬಲೇಶ್ವರನ ಜೀರ್ಣ ಮಾಡಿಕೊಳ್ಳಲಾಗದೆ ಒದ್ದಾಡುತ್ತಿದ್ದಾನೆ. ರಾಮಚಂದ್ರಾಪುರ ಮಠದ ಪೀಠದಲ್ಲಿ ಕುಳಿತು ರಾಘವೇಶನಿಗೆ ನಿರೀಕ್ಷಿತ ಗಂಟು ಕಟ್ಟಲಿಕ್ಕೆ ಆಗಲಿಲ್ಲ. ಒಕ್ಕಲಿಗರ-ಲಿಂಗಾಯತರ ಮಠಗಳಲ್ಲಿ ಸಂಗ್ರಹವಾಗುವ ಕೋಟಿ-ಕೋಟಿ ಕಾಸು-ಹರಿದುಬರುವ ಅನುಯಾಯಿಗಳ ಮಹಾಪೂರ ಕಂಡು ಕರುಬಿದ ರಾಘವ ಹೇಗಾದರೂ ಹಣ ಮಾಡುವ-ದೇವದೂತನಾಗುವ ಹವಣಿಕೆಗೆ ಬಿದ್ದಿದ್ದ. ಆಗ ಆತನ ಕಣ್ಣಿಗೆ ಬಿದ್ದಿದ್ದೇ ಆಗರ್ಭ ಶ್ರೀಮಂತ ಗೋಕರ್ಣ ದೇವಸ್ಥಾನ!

ಮತಾಂಧ ಮುಖ್ಯಮಂತ್ರಿ ಯಡ್ಡಿ ಸರ್ಕಾರ ಬರುತ್ತಲೇ ರಾಘವನ ಗೋಕರ್ಣ ಸ್ವಾಹ ಮಾಡುವ ಕಿತಾಪತಿ ಜೋರಾಯ್ತು. ಕೆಲವು ಧನಾಧಾರಿತ ಧರ್ಮಕಾರಣಕ್ಕೆ ಈ ಮಠವನ್ನು ಆಶ್ರಯಿಸಿದ್ದ ಯಡ್ಡಿ ಬ್ರಾಹ್ಮಣರ ಲಾಬಿಗೆ ಶರಣಾಗಿಬಿಟ್ಟರು. ಹಿಂದೆ-ಮುಂದೆ ನೋಡದೆ ಒಂದಿಷ್ಟು ಕಲ್ಪಿತ ಆಧಾರ-ಹುಸಿ ಇತಿಹಾಸದ ನೆಪದಿಂದ ಗೋಕರ್ಣ ದೇವಸ್ಥಾನ ರಾಮಚಂದ್ರಾಪುರ ಮಠಕ್ಕೆ ಏಕಪಕ್ಷೀಯವಾಗಿ ಹಸ್ತಾಂತರಿಸಿದರು. ಗೋಕರ್ಣದಲ್ಲಿ ಕುಳಿತು ಹಗಲುದರೋಡೆ ಮಾಡಲು ಮತ್ತು ದೇಗುಲದ ಚರ-ಸ್ಥಿರ ಆಸ್ತಿ ಕೊಳ್ಳೆ ಹೊಡೆಯಲು ರಾಘವೇಶನಿಗೆ ಸರ್ಕಾರ ಸಲಹತ್ತು ನೀಡಿದ್ದಕ್ಕೆ ನಾಡಿನಾದ್ಯಂತ ವಿರೋಧ ವ್ಯಕ್ತವಾಯಿತು. ಗೋಕರ್ಣದ ಭಕ್ತರು-ಉಪಾಧಿವಂತರು-ಅರ್ಚಕರು-ವೈದಿಕರೆಲ್ಲ ಮಠ ಮತ್ತು ಸರ್ಕಾರದ ವಿರುದ್ಧ ತಿರುಗಿಬಿದ್ದರು. ನ್ಯಾಯ ಕೇಳಿದವರ ಮೇಲೆ ಸ್ವಾಮಿ ಸರ್ಕಾರ ರೌಡಿಗಳ-ಪೊಲೀಸರ ಛೂಬಿಟ್ಟು ಬಗ್ಗುಬಡಿಯುವ 'ಅಧರ್ಮ' ಮಾಡಿತು!




ಗೋಕರ್ಣ ದೇವಸ್ಥಾನ ಕಬ್ಜಾ ಮಾಡಿಕೊಂಡು ಸುಲಿಗೆ ಶುರು ಹಚ್ಚಿಕೊಂಡಿದ್ದ ರಸಿಕ-ಸನ್ಯಾಸಿ ರಾಘವೇಶ ಮತ್ತು ಸಾರ್ವಜನಿಕ ದೇವಾಲಯವನ್ನು ಬೂಟಾಟಿಕೆಯಿಂದ ಹಸ್ತಾಂತರಿಸಿದ ಯಡ್ಡಿ ಸರ್ಕಾರದ ಕಾನೂನುಬಾಹಿರ ಕ್ರಮದ ವಿರುದ್ಧ ಕೋರ್ಟಿನ ಒಳಗೆ ಮತ್ತು ಹೊರಗೆ ಜನರ ಹೋರಾಟ ಚಾಲ್ತಿಯಲ್ಲಿತ್ತು. ತೀರಾ ಮೊನ್ನೆ-ಮೊನ್ನೆ ಕುಮಟಾಕ್ಕೆ ಬಂದಿದ್ದ 'ಬಂ' 'ಗೋಕರ್ಣದಿಂದ ರಾಘವೇಶ ಒದ್ದೋಡಿಸಿ' ಎಂದು ಬಹಿರಂಗ ಸಭೆಯಲ್ಲೇ ಆರ್ಭಟಿಸಿ ಹೋಗಿದ್ದರು. ಕೋರ್ಟು-ಕಚೇರಿಗಳಲ್ಲಂತೂ ಕೇಸುಗಳು ನಡೆಯುತ್ತಲೇ ಇತ್ತು.

ನಾಲ್ಕು-ನಾಲ್ಕು ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಗಳನ್ನು ಹೈಕೋರ್ಟಿನಲ್ಲಿ ಹೂಡಲಾಗಿತ್ತು. ಸರ್ಕಾರ ಸಾರ್ವಜನಿಕ ದೇವಾಲಯವನ್ನು ಖಾಸಗಿ ಮಠಕ್ಕೆ ವಹಿಸಿದ್ದು ಸರಿಯಲ್ಲವೆಂಬ ವಾದ ಈ ಪಿಐಎಲ್‌ನಲ್ಲಿತ್ತು. ವಿಶ್ವನಾಥ ಭಟ್ ಮತ್ತು ಇಪ್ಪತ್ತೈದು ಉಪಾಧಿವಂತ ಅರ್ಚಕರು (ರಿಟ್ ಪಿಟಿಷನ್ ನಂಬರ್ 1477), ಸಾಂಬ ದೀಕ್ಷಿತ್ (ರಿಟ್ ಪಿಟಿಷನ್ ನಂಬರ್ 11734), ಬೆಂಗಳೂರಿನ ಮುರಳೀಧರ್ ಪಿಟಿಷನ್ ನಂ. 1212) ಮತ್ತು ಶಿರಸಿಯ ಮೆಟಗುಪ್ಪಾ ಎಂಬುವರು ದೇವಾಲಯ ಹಸ್ತಾಂತರ ವಿರುದ್ಧ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ದಾಖಲಿಸಿದ್ದರು.

ಯತಿಧರ್ಮಕ್ಕೆ ವಿರುದ್ಧವಾಗಿ ವರ್ತಿಸುತ್ತಿರುವ ಲೌಕಿಕ ಚಟುವಟಿಕೆಗಳ ರಾಘವೇಶನಿಗೆ ಯಡ್ಡಿ ಸರ್ಕಾರ ಗೋಕರ್ಣ ದೇವಾಲಯ ಬಳುವಳಿಯಾಗಿ ಕೊಡುವ ಒಂದಿಷ್ಟು ಬೋಗಸ್ ದಾಖಲೆ-ಇತಿಹಾಸ ನೆಪವಾಗಿಟ್ಟುಕೊಂಡಿತ್ತು. ಗೋಕರ್ಣ ದೇವಸ್ಥಾನ ಮತ್ತು ರಾಮಚಂದ್ರಾಪುರ ಮಠಕ್ಕೆ ಐತಿಹಾಸಿಕ ಸಂಬಂಧವಿದೆ. ತಲತಲಾಂತರದಿಂದ ಈ ದೇಗುಲದ ಪಾರುಪತ್ಯ ರಾಮಚಂದ್ರಾಪುರ ಮಠಕ್ಕೆ ಸೇರಿತ್ತು. ಈ ಬಗ್ಗೆ ತಾಮ್ರಪತ್ರವಿದೆ... ಎಂದೆಲ್ಲ ಸರ್ಕಾರದ ಪುರೋಹಿತಶಾಹಿ ಪ್ರಭೃತಿಗಳು ಬೋಂಗು ಬಿಟ್ಟಿದ್ದರು.

ಇದು ಹಸಿ-ಹಸಿ ಸುಳ್ಳೆಂದು ನಾಲ್ಕು ಸಾರ್ವಜನಿಕ ಹಿತಾಸಕ್ತಿ ರಿಟ್‌ಗಳಲ್ಲಿ ವಾದಿಸಲಾಗಿತ್ತು. ಗೋಕರ್ಣ ದೇವಸ್ಥಾನ ಯಾವಾಗಲೂ ಸಾರ್ವಜನಿಕರದ್ದು; ಮುಜರಾಯಿ ಇಲಾಖೆಯದ್ದು. ಈ ಇಲಾಖೆ ಟ್ರಸ್ಟ್ ರಚಿಸಿ ದೇಗುಲದ ಆಡಳಿತ ವಹಿಸುತ್ತ ಬಂದಿದೆ. ಅದೆಂದಿಗೂ ಹವ್ಯಕರ ರಾಮಚಂದ್ರಾಪುರ ಮಠಕ್ಕೆ ಸೇರಿದ ದಾಖಲೆಗಳಿಲ್ಲ, ಹಾಗಂತ ಪಿಐಎಲ್‌ನಲ್ಲಿ ಉಲ್ಲೇಖಿಸಲಾಗಿತ್ತು. ಈ ಸಾರ್ವಜನಿಕರ ಹಿತಾಸಕ್ತಿ ಮೊಕದ್ದಮೆಯನ್ನು ಮಠ ಮತ್ತು ಮತಾಂಧ ಸರ್ಕಾರ ಛಾಲೆಂಜ್ ಮಾಡಿತ್ತು!!



ಹಣ-ಹೆಣ್ಣಿನ ಹಿಂದೆ ಬಿದ್ದಿರುವ ರಾಘವೇಶ ಸ್ವಾಮಿ ಮತ್ತು ಈ ಢೋಂಗಿಯ ಬ್ರಾಹ್ಮಣ ಪರಿವಾರದ ಹಿತ ಕಾಯುತ್ತಿರುವ ಯಡ್ಡಿ ಸರ್ಕಾರ ಸಾರ್ವಜನಿಕರ ಮೊಕದ್ದಮೆ ಹಿಂದೆ ಪಿಟಿಷನ್‌ದಾರರ ಸ್ವ-ಹಿತಾಸಕ್ತಿ ಅಡಗಿದೆ. ಹಾಗಾಗಿ ಅದು ಸಾರ್ವಜನಿಕ ಹಿತಾಸಕ್ತಿ ರಿಟ್ ಅಲ್ಲವೆಂದು ವಿಚಿತ್ರ ವಾದ ಮಂಡಿಸಿತ್ತು. ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆದಾರರ ವಾದ ಮತ್ತು ಎದುರುದಾರ ಸ್ವಾಮಿ-ಸರ್ಕಾರದ ತರ್ಕ ಆಲಿಸಿದ ಹೈಕೋರ್ಟ್ ಬರೋಬ್ಬರಿ ಒಂದು ವರ್ಷ ಐದು ತಿಂಗಳು ಆಳೆದೂ ಸುರಿದು ಈಗ 22-3-2010 ರಂದು ತನ್ನ ಅಭಿಪ್ರಾಯ ಹೇಳಿದೆ.

ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆದಾರರ ಪಿಟಿಷನ್‌ನಲ್ಲಿ ಸ್ವ-ಹಿತಾಸಕ್ತಿ ಏನಿಲ್ಲ; ಬದಲಿಗೆ ಮಠ-ಸರ್ಕಾರದ ಕ್ರಮ-ತರ್ಕದಲ್ಲಿ ಹಿತಾಸಕ್ತಿಗಳು ಅಡಗಿದೆ. ಹಾಗಾಗಿ ಪಿಐಎಲ್‌ಗಳನ್ನು ಪುರಸ್ಕರಿಸಿ ವಿಚಾರಣೆ ಕೋ... ಕೈಗೆತ್ತಿಕೊಂಡಿದೆ ಎಂದು ಅಭಿಪ್ರಾಯಪಟ್ಟಿದೆ. ಹಸ್ತಾಂ... ವಿರುದ್ಧ ಕೋರ್ಟಿಗೆ ಬಂದವರ ಅರ್ಜಿಯನ್ನು ಸಾರ್ವ... ಹಿತಾಸಕ್ತಿ ಅರ್ಜಿಯೆಂದು ಪರಿಗಣಿಸದೇ ತಿರಸ್ಕರಿಸಿ... ಸರ್ಕಾರ-ಸ್ವಾಮಿ ಪರಿವಾರದ ವಾದ ಹೈಕೋರ್ಟ್ ವಿಭಾ... ಪೀಠ ತಿರಸ್ಕರಿಸಿದೆ.

ಅಷ್ಟೇ ಅಲ್ಲ, ಗೋಕರ್ಣ ದೇವಾಲಯ ... ಸಂಬಂಧಿಸಿದ್ದು ಎನ್ನುವುದಕ್ಕೆ ಯಾವ ಆಧಾರಗ... ದಾಖಲೆಯೂ ಇಲ್ಲ; ತಾಮ್ರ ಪತ್ರ-ಇನ್ನಿತರ ಪು... ಅಧಿಕೃತವೆಂದು ಪರಿಗಣಿಸಲಾಗದು. ಸರ್ಕಾರ ಸಲ್ಲಿ... ದೇವಸ್ಥಾನ ಹಿಂದೆ ರಾಮಚಂದ್ರಾಪುರ ಮಠಕ್ಕೆ ಸೇರಿ... ಹೇಳುವ ಪುರಾವೆಗಳು ದಾಖಲಾತಿಗಳಲ್ಲ!! ಇದೆಲ್ಲ ನೋ... ದೇವಸ್ಥಾನ ಮಠಕ್ಕೆ ಹಸ್ತಾಂತರಿಸುವುದರ ಹಿಂದೆ ಸರ್ಕಾರ-... ಮಠದ ಹಿತಾಸಕ್ತಿ ಅಡಗಿರುವಂತೆ ಕಾಣಿಸುತ್ತದೆ. ಗೋ... ದೇವಸ್ಥಾನ ಸಾರ್ವಜನಿಕರದ್ದು. ಅದನ್ನು ... ರಾಮಚಂದ್ರಾಪುರ ಮಠಕ್ಕೆ ವಹಿಸುವುದು ಸರಿಯಲ್ಲ ... ಹೈಕೋರ್ಟ್ ಅಭಿಪ್ರಾಯ ವ್ಯಕ್ತಪಡಿಸಿದೆ.


ಅಲ್ಲಿಗೆ ಗೋಕರ್ಣ ದೇವಾಲ... ಗಂಟುಬಿದ್ದಿರುವ 'ಶನಿ' ರಾಘವ... ಸ್ವಾಮಿ ಮತ್ತವನ ಬೆನ್ನಿಗೆ ನಿಂತು ಲ... ನೆರವು ನೀಡುತ್ತಿರುವ 'ಧರ್ಮಾತ್ಮ' ... ಸರ್ಕಾರಕ್ಕೆ ಕೋರ್ಟ್ ಕಪಾಳಮೋ... ಮಾಡಿದಂತಾಗಿದೆ!! ವಿಚಾರಣೆ ... ಸ್ವಾಮಿ-ಸರ್ಕಾರದ ಮತ್ತಷ್ಟು ದಗ... ಹೂರಣ ಹೊರಬರುವುದು ಗ್ಯಾ... ಇನ್ನಾದರೂ ಶೂದ್ರರ ಸುಲಿವ ... ಹಾಕಿಕೊಂಡು ಕೂತಿರುವ ದಗಾಕ... ರಾಘವೇಶ್ವರ ಪಾರುಪತ್ಯದಿಂದ ... ಬಲೇಶ್ವರ ದೇವಸ್ಥಾನವನ್ನು ತಪ್ಪಿಸಬೆ... ಈ ಒಂದೂವರೆ ವರ್ಷದಲ್ಲಿ ... ಹೇಳುತ್ತ ಸುಲಿಗೆ ಮಾಡಿದ್ದು ... ಗೋಕರ್ಣದ ಅಭಿವೃದ್ಧಿಗೆ-ದೇಗ... ಉದ್ಧಾರಕ್ಕೆ ರಾಘವೇಶ ಏನನ್ನೂ ಮಾಡಿಲ್ಲ. ... ಮಾಡುವುದು ಮಜಾ ನೀಡುವುದು ಬಿಟ್ಟರೆ ಇನ್ನಾ... ಜನಪರ-ಧರ್ಮಪರ ಕಾಳಜಿ-ಗುಣಧರ್ಮ ರಾಘವ... ಗಾಗಲೀ, ಯಡ್ಡಿಯನ್ನು ಅಡಿಯಾಳಾಗಿಸಿಕೊಂಡು ಕ... ತ್ತಿರುವ ವಿಪ್ರ ಲಾಬಿಗಾಗಲಿ ಇಲ್ಲ!

ನ್ಯಾಯಾಲಯದಲ್ಲಾದ ಮುಖಭಂಗದಿಂದ ಸ್ವಾಮಿ ಸೋಗಲಾಡಿ ಸರ್ಕಾರ ಪಾಠ ಕಲಿಯುವುದೇ?

• ನ...

ಚಿಕ್ಕಮಗಳೂರು: ಲೂಟಿಕೋರ ಸಿ.ಟಿ.ರವಿ ಅರ್ಜೆಂಟ್ ಮಂತ್ರಿಯಾಗಬೇಕಂತೆ

ಶಾಸಕ ಸಿ.ಟಿ. ರವಿ ಚಿಕ್ಕಮಗಳೂರನ್ನು ಲೂಟಿ ಹೊಡೆಯಲು ಕುಳಿತಿರುವ ಪರಿಯನ್ನು ಗಮನಿಸಿದರೆ ಮೈನಡುಕ ಹುಟ್ಟುತ್ತದೆ. ಇಡೀ ಜಿಲ್ಲೆಯ ಮೇಲೆ ಅಧಿಪತ್ಯ ಸ್ಥಾಪಿಸಲು ಹೆಣಗುತ್ತಿರುವ ಈ ಮನುಷ್ಯನೀಗ ಭಿನ್ನಮತದ ಹೊಸ ಸೋಗು ಹಾಕಿ ಮಂತ್ರಿಗಿರಿ ಹೊಡೆಯಲು ಕಸರತ್ತು ಶುರು ಮಾಡಿದ್ದಾನೆ. ಶಾಸಕನಾಗಿ ಈತ ನುಂಗಿದ್ದನ್ನು ನೋಡಿರುವ ಜನತೆ, ಈತ ಮಂತ್ರಿಯಾದರೆ ಹೆಂಗಪ್ಪ? ಎಂದು ಗಾಬರಿ ಬಿದ್ದಿದ್ದಾರೆ. ಭಾರಿ ದೇಶಭಕ್ತನಂತೆ ಪೋಸು ಕೊಡುವ ಈ ದತ್ತ'ಪುತ್ರ'ನ ಆಸ್ತಿ ಹನುಮಂತನ ಬಾಲದಂತೆ ಬೆಳೆಯುತ್ತಲೇ ಇದ್ದು, ಇದಕ್ಕೇ ಶ್ರೀರಾಮನ ಬದಲಾಗಿ ಕಳ್ಳ ಕೃಷ್ಣನ ಆಶೀರ್ವಾದವೇ ಕಾರಣ ಎಂದು ಜನ ಮುಸಿಮುಸಿ ನಗುತ್ತಿದ್ದಾರೆ.



ಚಿಕ್ಕಮಗಳೂರನ್ನು ಲೂಟಿ ಹೊಡೆಯಲು ತನ್ನ ಸುತ್ತಮುತ್ತಲಿನ ಆಪ್ತೇಷ್ಟರ ಪಡೆಯೊಂದನ್ನು ಕಟ್ಟಿ, ಅಕ್ರಮ ಮರಳು, ಕಲ್ಲು ಗಣಿಗಾರಿಕೆಗಳಿಂದ ತಿಂಗಳ ಪ್ರಸಾದ ಸ್ವೀಕರಿಸುತ್ತಲೇ ಇದ್ದಾನೆ. ಹೇಮಾವತಿ, ಭದ್ರಾ ನದಿ ಪಾತ್ರದಿಂದ ಮರಳು ಗಣಿಗಾರಿಕೆ ನಡೆಸಲು ತನ್ನ ಚೇಲಾಗಳನ್ನು ಬಿಟ್ಟುಕೊಂಡಿದ್ದಾನೆ. ಮೂಡಿಗೆರೆ ಹೊರತುಪಡಿಸಿದರೆ ಕೊಪ್ಪ, ಶೃಂಗೇರಿ, ಎನ್.ಆರ್.ಪುರ ತಾಲ್ಲೂಕುಗಳಲ್ಲಿ ಮರಳು ಹರಾಜು ಪ್ರಕ್ರಿಯೆ ನಡೆದಿದೆ. ಆದರೆ ಮೂಡಿಗೆರೆಯಲ್ಲಿ ಸಿ.ಟಿ. ರವಿ ಪ್ರಾಬಲ್ಯ ಸಾಧಿಸುವುದನ್ನು ಶಾಸಕ ಕುಮಾರಸ್ವಾಮಿ ಒಪ್ಪುತ್ತಿಲ್ಲ. ಹೀಗಾಗಿ ಮರಳು ಹರಾಜು ಪ್ರಕ್ರಿಯೆ ನಡೆಸಲು ಜಿಲ್ಲಾಧಿಕಾರಿ ಆದೇಶ ಹೊರಡಿಸಿದ್ದನ್ನು ವಿರೋಧಿಸಿ ಕುಮಾರಸ್ವಾಮಿ ಎಚ್ಚರಿಕೆ ನೀಡಿದ್ದರು. ಆದರೆ ರವಿ ಪ್ರಭಾವದಿಂದ ಹರಾಜು ಬಲವಂತದಿಂದ ನಡೆಸಲು ಜಿಲ್ಲಾಧಿಕಾರಿ ಮುಂದಾದಾಗ ಕುಮಾರಸ್ವಾಮಿ ಮೂಡಿಗೆರೆ ತಾಲ್ಲೂಕು ಕಚೇರಿಯಲ್ಲಿ ಕಡತಗಳನ್ನು ಎಸೆದು ಹರಾಜು ನಡೆಯದಂತೆ ನೋಡಿಕೊಂಡಿದ್ದರು. ಅಕ್ರಮ ಮರಳು ಗಣಿಗಾರಿಕೆ ಮಾತ್ರ ಇಂದಿಗೂ ನಡೆಯುತ್ತಲೇ ಇದೆ. ಪೊಲೀಸರು ಜಪ್ಪಯ್ಯ ಅಂದರೂ ಕೇಸು ಜಡಿಯುತ್ತಿಲ್ಲ. ಮೂಡಿಗೆರೆ ಠಾಣಾಧಿಕಾರಿ ಶಿವಲಿಂಗಯ್ಯ, ಗೋಣಿಬೀಡಿನ ಸುನೀಲ್‌ಕುಮಾರ್ ಮತ್ತು ಸರ್ಕಲ್ ಇನ್ಸ್‌ಪೆಕ್ಟರ್ ಜಿ.ಟಿ. ಸ್ವಾಮಿಗೆ ಲಾರಿಗಿಷ್ಟು ಅಂತ ಕಪ್ಪ ಒಪ್ಪಿಸಿ ಮರಳು ಸಾಗಾಟ ನಡೆಸುತ್ತಿರುವವರು ರವಿಯ ಆಪ್ತೇಷ್ಟರು.

ಇನ್ನು ಮೂಡಿಗೆರೆ ವಿಧಾನಸಭೆ ಕ್ಷೇತ್ರ ವ್ಯಾಪ್ತಿಯ ಮುಗುಳವಳ್ಳಿಯಲ್ಲಿ ನಡೆದಿರುವ ದಗಲುಬಾಜಿತನ ನೋಡಿ. ವಿದ್ಯುತ್ ಘಟಕಕ್ಕೆ ಆರಂಭದಲ್ಲಿ ಗುದ್ದಲಿಪೂಜೆ ನಡೆಯುತ್ತಿದ್ದಾಗಲೇ ರವಿ ಮತ್ತು ಕುಮಾರಸ್ವಾಮಿ ನಡುವೆ ಗುದ್ದಾಟ ನಡೆದಿತ್ತು. ಇದರಲ್ಲಿ ಕುಮಾರಸ್ವಾಮಿ ಗೆದ್ದಿರುವುದರಿಂದ ಸಹಿಸಿಕೊಳ್ಳಲಾಗದ ರವಿ ಇದೀಗ ಆ ವಿದ್ಯುತ್ ಘಟಕ ಕಾರ್ಯಾರಂಭಗೊಳ್ಳದಿರಲು ಕಾರ್ಯಸೂಚಿ ಸಿದ್ಧಪಡಿಸಿಕೊಂಡಿದ್ದಾನೆ. ಮುಗುಳವಳ್ಳಿಯ ಭಾಗದ ಪರಿಸರದಲ್ಲಿ ಬಸ್ ಡಿಪೋ ಮಾಡುವುದಾಗಿ ಹೇಳಿ ವಿದ್ಯುತ್ ಘಟಕ ಸ್ಥಾಪಿಸಲಾಗಿದೆ, ಇದರಿಂದ ತಮಗೆ ಅನ್ಯಾಯವಾಗಿದೆ ಅಂತ ರೈತ ಸಮುದಾಯವನ್ನು ಮುಂದೆ ಬಿಟ್ಟು ಗುಲ್ಲೆಬ್ಬಿಸುತ್ತಿದ್ದಾನೆ. ಹೀಗೆ ರವಿ ಅಭಿವೃದ್ಧಿ ಕಾರ್ಯಕ್ಕೆ ಅಡ್ಡಿಯುಂಟುಮಾಡುತ್ತಿರುವುದು ಇದೇ ಮೊದಲಲ್ಲ, ಹಿಂದೆ ಸಗೀರ್ ಅಹಮ್ಮದ್ ಶಾಸಕರಾಗಿದ್ದಾಗ ನಗರದ ಐ.ಜಿ.ರಸ್ತೆ ಅಗಲೀಕರಣಕ್ಕೂ ಅಡ್ಡಿಪಡಿಸಲು ಮುಂದಾಗಿ ಜೆಸಿಬಿ ಅಡಿಯಲ್ಲಿ ಮಲಗಿ ಜನರಿಂದ ಉಗಿಸಿಕೊಂಡಿದ್ದ.

ಶಾಸಕನಾಗುವುದಕ್ಕೂ ಮುನ್ನ ಆಲ್ದೂರು ಬಳಿಯ ಚಿಕ್ಕಮಾಗರವಳ್ಳಿಯಲ್ಲಿ ರವಿಯ ತಂದೆ ಸಿ.ಇ. ತಿಮ್ಮೇಗೌಡ ಹೆಸರಿನಲ್ಲಿ 80 ಎಕರೆ ಭೂಮಿ, ವಾಹನ ಮತ್ತು ವಾಸಯೋಗ್ಯ ಮನೆ ಮಾತ್ರವಿತ್ತು. ಅದು ಇವತ್ತಿಗೂ ಪಾಲು ಆಗಿಲ್ಲ. ಆದರೆ ಸಿ.ಟಿ. ರವಿ ತನ್ನ ಹೆಸರಲ್ಲಿ ಮತ್ತು ಹೆಂಡತಿಯ ಹೆಸರಿನಲ್ಲಿ ಅಲ್ಲದೆ ಬೇನಾಮಿ ಹೆಸರಿನಲ್ಲಿ ಕೋಟ್ಯಾಂತರ ರೂ. ಆಸ್ತಿ ಮಾಡಿಕೊಂಡಿದ್ದಾನೆ. ಬಾಬಾಬುಡನ್ ಗಿರಿ ವಿವಾದದಲ್ಲಿ ಚಳಿ ಕಾಯಿಸುತ್ತಿದ್ದಾಗಲೇ ತೋರಣಮಾವು ಎಂಬಲ್ಲಿ ಅನಾಮತ್ತು ಒಂದು ಕೋಟಿ ಮೌಲ್ಯದ ಆಸ್ತಿ ಬಂಗಲೆ ಮಾಡಿಕೊಂಡಿದ್ದ ಬಳಿಕ ಆರೆನೂರು ಗ್ರಾಮದಲ್ಲಿ ಸರ್ವೇ ನಂ.101 ರಲ್ಲಿ 5 ಎಕರೆ ಭೂಮಿ, ರಾಮನಹಳ್ಳಿಯಲ್ಲಿ ಸರ್ವೇ ನಂ. 147/2ಪಿ ಯಲ್ಲಿ 1.32 ಎಕರೆ ತೆಂಗಿನತೋಟವನ್ನು ತನ್ನದಾಗಿಸಿಕೊಂಡ. ಇದೇ ಸರ್ವೇ ನಂಬರ್‌ನಲ್ಲಿ ಅನಾಮತ್ತು 4 ನಿವೇಶನ ಮತ್ತು ಬಂಗಲೆಗಳಿವೆ. ಕಲ್ಯಾಣನಗರ ಬಡಾವಣೆಯಲ್ಲಿ ನಂ.ಎ 241ರಲ್ಲಿ ನಿವೇಶನದ ಜೊತೆಗೆ ಬೆಂಗಳೂರಿನ ಹೆಚ್.ಆರ್.ಬಿ. ಬಡಾವಣೆಯಲ್ಲಿ 1 ನಿವೇಶನ ಇದೆ. ಪಲ್ಲವಿಯ ಹೆಸರಿನಲ್ಲಿ ರಾಮನಹಳ್ಳಿಯ 144/1ಎ1 ರಲ್ಲಿ 3 ಎಕರೆ 27 ಗುಂಟೆ ತೆಂಗಿನತೋಟ, ಮತ್ತೊಂದು ನಿವೇಶನ, ಕೆ.ಹೆಚ್.ಬಿ. ಕಾಲೋನಿಯ ನಂ.113 ಎಂಐಜಿ ಸೆಕೆಂಡ್ ಸ್ಟೇಜ್‌ನಲ್ಲಿ ನಿವೇಶನ, ಇದೇ ಕಾಲೋನಿಯಲ್ಲಿ ಮತ್ತೊಂದು ನಿವೇಶನ ಮತ್ತು ಆರ್.ಸಿ.ಸಿ.ಮನೆ ಇದೆ.

ಮೂಗ್ತಿಹಳ್ಳಿ ಬಳಿ ರಾಜೇಶ್ ಎಂಬಾತನ ಹೆಸರಿನಲ್ಲಿ ಕಾಫಿ ತೋಟವೊಂದನ್ನು ಖರೀದಿ ಮಾಡಿದ್ದಾನೆ. ಪಟ್ಟಣದೊಳಗೆ ಅಲ್ಲಲ್ಲಿ ತನಗೆಬೇಕು ಬೇಕಾದವರ ಬೇನಾಮಿ ಹೆಸರಿನಲ್ಲಿ ಕಟ್ಟಡ ನಿವೇಶನ ಮಾಡಿಟ್ಟಿದ್ದಾನೆ. ಇವತ್ತಿನ ಕಾಂಗ್ರೆಸ್‌ನ ಎಂ.ಎಲ್.ಸಿ. ಗಾಯಿತ್ರಿ ಶಾಂತೇಗೌಡರ ಅಂದಾಜು 17 ಕೋಟಿ ರೂ.ಮೌಲ್ಯದ ಪೂರ್ತಿ ಆಸ್ತಿಯನ್ನು ತೆಕ್ಕೆಗೆ ಹಾಕಿಕೊಂಡಿದ್ದಾನೆ. ಉಳಿದಂತೆ ಲೆಕ್ಕಕ್ಕೆ ಸಿಗದಷ್ಟು ಕಪ್ಪು ಹಣವನ್ನು ಗುಪ್ತವಾಗಿಟ್ಟಿದ್ದಾನೆ ಎಂಬ ಗುಮಾನಿ ಇದೆ. ಇಂತಹ ರವಿಯಿಂದ ಇಡೀ ಜಿಲ್ಲೆಯನ್ನು ರಕ್ಷಿಸಬೇಕಾದ ಹೊಣೆ ಜನರ ಕೈಯಲ್ಲಿದೆ.

• ಅಜೀಜ್ ಕಿರುಗುಂದ



ಮೇಯು... ಹಂಬಲ ಶುರುವಾಗಿದೆ

ತೀರ ಇತ್ತೀಚೆಗಷ್ಟೆ ... ಸದಾನಂದಗೌಡರ ಅವಧಿ ... ಯುವ ಹೊತ್ತಿಗೆ ತಾನೇ ರಾಜ್ಯ ಬಿಜೆಪಿ ಅಧ್ಯಕ್ಷ ಗಾದಿಗೇ... ಕನಸನ್ನು ರವಿ ಕಂಡಿದ್ದನಾದರೂ ಅದನ್ನು ನನಸಾಗಿಸಿಕೊಳ್ಳ... ವಿಫಲಗೊಂಡಿದ್ದ. ಆಗಲಾದರೂ ಈತನಿಗೆ ... ಬರಬೇಕಿತ್ತು. ಅನಂತಕುಮಾರ್ ಬಣದಲ್ಲಿ ಗುರು... ಕೊಂಡಿರುವ ರವಿಗೆ ಮೂಡಿಗೆರೆ ಶಾಸಕ ಕುಮಾರಸ್ವಾ... ಮತ್ತು ಶೃಂಗೇರಿಯ ಡಿ.ಎನ್. ಜೀವರಾಜ್‌ರೊಂ... ವೈಮನಸ್ಯವಿದೆ.

ರವಿಯ ಖತರ್‌ನಾಕ್ ನರಿ ಬುದ್ಧಿಯ ಅರಿವಿ... ಮುಖ್ಯಮಂತ್ರಿ ಯಡ್ಡಿ ರವಿಯನ್ನು ಹತ್ತಿರ ... ಬಿಟ್ಟುಕೊಳ್ಳುತ್ತಿಲ್ಲ. ಅಸೆಂಬ್ಲಿಯಲ್ಲಿ ಯಡ್ಡಿ ಬಜೆಟ್ ಮ... ಹೊರಬರುವ ಹೊತ್ತಿಗಾಗಲೇ ರವಿಯ ವರಸೆ... ಬದಲಾವಣೆ ಕಾಣಿಸಿಕೊಂಡಿತ್ತು. ಬಜೆಟ್‌ನಲ್ಲಿ ಚಿಕ್ಕಮಗ... ಜಿಲ್ಲೆಯನ್ನು ಕಡೆಗಣಿಸಲಾಗಿದೆ ಅಂತ ಹಾರಾಡತೊಡ...

ಅದರ ಹಿಂದೆ ಚಿಕ್ಕಮಗಳೂರಿನಲ್ಲಿ ಬಿಜೆಪಿಯ... ಇಬ್ಭಾಗ ಮಾಡುವ ತರ್ಕವಿತ್ತು. ಒಂದೆಡೆ ಮೂಡಿ... ಶಾಸಕ ಕುಮಾರಸ್ವಾಮಿ ಮತ್ತು ಶೃಂಗೇರಿ ಶಾಸಕ ... ರಾಜ್‌ಗೆ ರವಿಯ ಕುತಂತ್ರ ಬುದ್ಧಿ ಗೊತ್ತಿದ್ದರೆ, ಇನ್ನೊ... ತರೀಕೆರೆ ಶಾಸಕ ಡಿ.ಎಸ್. ಸುರೇಶ್ ಕೂಡ ಈತ... ಕಿಮ್ಮತ್ತು ಕೊಡುತ್ತಿಲ್ಲ.

ಅಂದಂತೆ ಮುಂದಿನ ಸಾರಿ ಚಿಕ್ಕಮಗಳೂರು ಮ... ಮೀಸಲು ಕ್ಷೇತ್ರವಾಗಬಹುದು ಎಂಬ ಗುಮಾನಿ ... ರವಿಯನ್ನು ಕಾಡುತ್ತಿದೆ. ಅದಕ್ಕೇ ಅರ್ಜೆಂಟ್ ಮಂತ್ರಿ... ಮೇಯುವ ಆತನಲ್ಲಿ ಇನ್ನಿಲ್ಲದ ಹಂಬಲ ಶುರುವಾ...

ಕನಕರ ಕಾಗಿನೆಲೆಗೆ ಬಿಜೆಪಿಗಳ ಜನಿವಾರ!

ಎಲ್ಲ ಜಾತಿಯ ಜನ ಕಾಗಿನೆಲೆಯ ಕನಕರನ್ನು ಗೌರವ, ಭಕ್ತಿಯಿಂದ ಕಾಣುತ್ತ ಬಂದಿದ್ದು, ಯಡ್ಡಿ ಸರ್ಕಾರವೀಗ ಅಂತಹ ಸೌಹಾರ್ದಕ್ಕೆ ಕೊಳ್ಳಿ ಇಡಲು ಹೊರಟಿದೆ. ಈಗಾಗಲೇ ಶಿಶುವಿನಹಾಳದಲ್ಲಿ ಶರೀಫರನ್ನು ಹಿಂದೆ ಸರಿಸಿ ಗುರು ಗೋವಿಂದರಾಯರನ್ನು ವಿಜೃಂಭಿಸುವ ಕೆಲಸವನ್ನು ಬ್ರಾಹ್ಮಣ ದಾನಶೂರರು ಮಾಡುತ್ತಿದ್ದಾರೆ.



...ಕುಲಕುಲವೆಂದು ಹೊಡೆದಾಡದಿರಿ, ನಿಮ್ಮ ಕುಲದ ನೆಲೆಯ ಬಲ್ಲಿರಾ ...ಕನಕದಾಸರ ಕರ್ಮಭೂಮಿಯಲ್ಲೀಗ ಬಿಜೆಪಿಯ ಜಾತಿವಾದಿಗಳು, ...ವಾದಿಗಳು ತಣ್ಣಗೆ ತಮ್ಮ ಕುತಂತ್ರ ಶುರು ಮಾಡಿದ್ದಾರೆ. ಜಗತ್ತಿಗೆ ...ತೆಯ ಹೊಸದೀವಿಗೆ ಕೈಗಿಟ್ಟ ಕನಕದಾಸರು ಅಸಮಾನ ಅಭಿವೃದ್ಧಿಗೆ ...ಡಬೇಕಾದ ಸ್ಥಿತಿ ನಿರ್ಮಾಣ ಮಾಡಲಾಗಿದೆ. ಈಗ ಚೆಡ್ಡಿ ಸಿಎಂ ಯಡ್ಡಿ ...ಕೃತಿಯ ಅಸ್ತ್ರಗಳನ್ನು ಕಾಗಿನೆಲೆಯಲ್ಲಿ ಪ್ರಯೋಗಿಸುತ್ತಿದ್ದಾನೆ. ಕನಕದಾಸ ...ಸಾಮಾಜಿಕ ಬಹಿಷ್ಕಾರಕ್ಕೆ ಒಳಪಟ್ಟ ಛಾಯೆ ಇಡೀ ಕಾಗಿನೆಲೆಯನ್ನು ...ಕೊಂಡಿದೆ.

...ತುಪಿಯಲ್ಲಿ ಕನಕಗೋಪುರ ಕೆಡವಿದ ಧೂರ್ತ ಸಂಘಪರಿವಾರಿಗಳೀಗ ಕಾಗಿನೆಲೆಯನ್ನು ಕೇಸರೀಕರಣಗೊಳಿಸುತ್ತಿದ್ದಾರೆ. ಜೊತೆಗೆ ಅಭಿವೃದ್ಧಿಯ ಲೂಟಿಯನ್ನು ನಡೆಸುತ್ತಿದ್ದಾರೆ.



...ನ್ನಕೇಶವ ಮೂಲ ದೇವಸ್ಥಾನದ ಅಭಿವೃದ್ಧಿಯೊಂದೇ ಸದ್ಯ ...ಸರ್ಕಾರದ ಗುರಿಯಾಗಿದೆ. ಕನಕದಾಸರ ಇತಿಹಾಸವನ್ನು ಸೈಡಿಗಿಟ್ಟು ...ಶವನನ್ನು ಉತ್ಸವಮೂರ್ತಿಯನ್ನಾಗಿಸಲಾಗುತ್ತಿದೆ. ಇದೂ ...ಹಿತಶಾಹಿಯ ಕುತಂತ್ರಗಳ ಫಲ ಎಂದು ಅರ್ಥಮಾಡಿಕೊಳ್ಳಲು ...ಹೊತ್ತು ಬೇಕಾಗಿಲ್ಲ. ಬ್ರಾಹ್ಮಣ ಧರ್ಮವನ್ನು ಕಾಗಿನೆಲೆಯಲ್ಲಷ್ಟೇ ... ಕನಕದಾಸರ ಕುಲಬಾಂಧವರ ಎದೆಯಾಳದಲ್ಲಿ ಸಾರ್ವತ್ರಿಕ ...ಬು ತಯಾರಿ ನಡೆಸಲಾಗುತ್ತಿದೆ. ಅದರ ಭಾಗವಾಗಿಯೇ ...ದಿರ ಸಂಪೂರ್ಣ ನಿರ್ಮಾಣವಾಗಿದ್ದರೂ ಅದನ್ನು ಲೋಕಾರ್ಪಣೆ ...ಲ್ಲ, ನಾಳೆ ದಿನ ಚನ್ನಕೇಶವ ದೇವಸ್ಥಾನದ ಅಭಿವೃದ್ಧಿ ಕಾಮಗಾರಿ ... ಮೇಲೆ ಎಲ್ಲರನ್ನೂ ಚನ್ನಕೇಶವನತ್ತ ಎಳೆದುತಂದು, ಕನಕದಾಸರ ...ನ್ನು ಅಸ್ಥಿರಗೊಳಿಸುವ ಕಾರ್ಯತಂತ್ರ ರೂಪಿಸಲಾಗಿದೆ.

...ಕದಾಸರು ಅತಿ ಹೆಚ್ಚು ಇಷ್ಟಪಟ್ಟ ಊರು ಕಾಗಿನೆಲೆ. ಇಲ್ಲಿಯ ...ರು ಚನ್ನಕೇಶವನನ್ನು ಗರ್ಭಗುಡಿಗೆ ಸೀಮಿತವಾಗಿರಿಸಲು ಪ್ರಯತ್ನಿಸಿದಾಗ ...ರು ಬ್ರಾಹ್ಮಣರ ಕಪಿಮುಷ್ಟಿಯಿಂದ ಚನ್ನಕೇಶವನನ್ನು ಬಿಡುಗಡೆಗೊಳಿಸಲು ...ಶ್ರಮಪಟ್ಟರು. ಕೊನೆಗೆ ಅದರಲ್ಲಿ ಯಶಸ್ಸನ್ನು ಕೂಡಾ ...ಕಂಡರು. ಇಂಥ ಐತಿಹಾಸಿಕ ಸಾಮಾಜಿಕ ಸಂಘರ್ಷವನ್ನು ...ನೆಲದಲ್ಲಿ ಮಲಗಿಸಿಕೊಂಡಿರುವ ಕಾಗಿನೆಲೆ ಸಾಮಾನ್ಯ ಕ್ಷೇತ್ರವಲ್ಲ. ...ಆಳುತ್ತಿರುವ ಸರ್ಕಾರಗಳಿಗೆ ಕನಕದಾಸರ ಪರಿಜ್ಞಾನವಿದ್ದಿದ್ದರೆ ...ಕಾಗಿನೆಲೆ ಬೇರೆ ಸ್ಥಿತಿಯಲ್ಲಿ ಇರುತ್ತಿತ್ತು. ಈಗ ಯಡ್ಡಿ ಸರ್ಕಾರ ... ಬದಿಗೊತ್ತಿ ಚನ್ನಕೇಶವನನ್ನು ಜನರಿಂದ ಅಪಹರಿಸಿ ...ೀಕರಣ ಮಾಡುತ್ತಿದೆ.



...ೂ ಈಗಲಾದರೂ ಕನಕ ಗುರುಪೀಠದ ನಿರಂಜನಾನಂದ ...ಗಳು ಎಚ್ಚೆತ್ತುಕೊಂಡು ಸರ್ಕಾರದ ವೈದಿಕಶಾಹಿ ಧೋರಣೆ ... ಕಾಗಿನೆಲೆ ಅಭಿವೃದ್ಧಿ ಹೆಸರಲ್ಲಿ ನಡೆಯುತ್ತಿರುವ ದರೋಡೆಯ ...ಪ್ರಶ್ನಿಯೆತ್ತಿ ಹೋರಾಟಕ್ಕೆ ಧುಮುಕಿದ್ದಾರೆ. (ಸಂದರ್ಶನ ಓದಿ)

...ನೆಲೆ ಅಭಿವೃದ್ಧಿಗಾಗಿ 2006ರಲ್ಲಿ ಅಂದಿನ ರಾಜ್ಯ ಸರ್ಕಾರ ಅಭಿವೃದ್ಧಿ ...ರವನ್ನೇನೋ ರಚಿಸಿತ್ತು. ಆದರೆ ಅಷ್ಟೇ ತೀವ್ರಗತಿಯಲ್ಲಿ ಪ್ರಾಧಿಕಾರದ ... ಸಿಕ್ಕವರನ್ನೆಲ್ಲ ತಂದು ಕೂಡಿಸಲಾಯಿತು. ಹಾಗೆ ಬಂದವರೆಲ್ಲ ...ಳೇ ಆಗಿದ್ದು ಕೆ.ರೇವಣಪ್ಪ ತರಹದವರಿಗೆ ಚೆಂಗಾವಲಾದರೇ ಹೊರತು ...ರು ಅಭಿವೃದ್ಧಿ ಬಗ್ಗೆ ತಲೆಕೆಡಿಸಿಕೊಳ್ಳಲಿಲ್ಲ.

...ನೆಲೆ ಅಭಿವೃದ್ಧಿ ಪ್ರಾಧಿಕಾರಕ್ಕೆ ನಿಶ್ಚಿತ ಗುರಿಯಿಲ್ಲ. ಇದು ಅವಸರಕ್ಕೆ ...ಟ್ಟಾಪದ ಕೂಸು. ರಾಜ್ಯ ಬಿಜೆಪಿ ಸರ್ಕಾರ ಅಭಿವೃದ್ಧಿ ಪ್ರಾಧಿಕಾರಕ್ಕೆ ...ಘೋಷಿಸಿದ್ದು ಬಿಟ್ಟರೆ ಬೇರೇನೂ ಮಾಡಿಲ್ಲ. ಅಭಿವೃದ್ಧಿ ಪ್ರಾಧಿಕಾರ ...ಮಾಡಿರುವ ಮೊದಲ ಹಂತದ ಐದು ಕಾಮಗಾರಿಯ ಕಥೆ ಕೇಳಿದರೆ ...ನಗಬೇಕೆಂದು ಅರ್ಥವಾಗುವುದಿಲ್ಲ.

ಈ ನಡುವೆ ಅಭಿವೃದ್ಧಿ ವಿಚಾರದಲ್ಲೂ ಅಸಮಾನತೆ ಮಾನದಂಡವಾಗಿದೆ. ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ ಜನ್ಮ ತಳೆದಿದ್ದೆ ಕೆಲವರ ಕುತರ್ಕಗಳ ಭಾಗವಾಗಿ. ಕಾಗಿನೆಲೆ ಅಭಿವೃದ್ಧಿಗಾಗಿ ಪ್ರಾಧಿಕಾರದಿಂದ ಒಂದೇಒಂದು ಸಭೆ ನಡೆದಿದೆ ಅಷ್ಟೇ. ಇದರೊಂದಿಗೆ ಪ್ರಾಧಿಕಾರದಿಂದ ನಡೆಯುತ್ತಿರುವ ಎಲ್ಲಾ ಕಾಮಗಾರಿಗಳ ಗುತ್ತಿಗೆಯನ್ನು ಕಳ್ಳ ಕಂಟ್ರಾಕ್ಟರುಗಳಾದ ಪರಮೇಶ್ವರಪ್ಪ, ಕೆ.ಎಲ್.ರೆಡ್ಡಿ ಮತ್ತು ಬೆಟ್ಟಸ್ವಾಮಿಗಳ ಮುಡಿಗೇರಿಸಲಾಗಿದೆ. ಹಿಂದೆ ಸಭಾಭವನದ ಮೇಲ್ಛಾವಣಿ ಕುಸಿದು ಬಿದ್ದಿದ್ದಾಗಲೇ ಇವರೆಲ್ಲ ಕಂಬಿ ಎಣಿಸಬೇಕಿತ್ತು. ಆದರೆ ಕೆ. ರೇವಣಪ್ಪರ ರಕ್ಷಣೆಯಲ್ಲಿ ಇವರೆಲ್ಲ ಬಲಿಯುತ್ತಿದ್ದಾರೆ.

ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರಕ್ಕೆ ಹಿಂದಿನ ಕುಮಾರಸ್ವಾಮಿ ಸರ್ಕಾರ 21 ಕೋಟಿಯನ್ನು ನೀಡಿತ್ತು. ಆ 21 ಕೋಟಿ ಕಾಗಿನೆಲೆಯ ಅಭಿವೃದ್ಧಿಗೆ ಬದಲಾಗಿ ಯಾರ್‍ಯಾರನ್ನೋ ಅಭಿವೃದ್ಧಿಪಡಿಸಿದೆ. ಒಂದು ಚೀಲ ಸಿಮೆಂಟ್‌ಗೆ 8 ಚೀಲ ಉಸುಕು ಬೆರೆಸಿ ಕಾಮಗಾರಿಗಳನ್ನು ನಿರ್ಮಿಸಲಾಗುತ್ತಿದೆ ಎಂದರೆ ಪ್ರಾಧಿಕಾರದಲ್ಲಿರುವ ಜನರ ಹಸಿವಾದರೂ ಯಾವ ಪ್ರಮಾಣದಲ್ಲಿದೆ ಎಂಬುದು ಗೊತ್ತಾಗುತ್ತದೆ. ಕುಮಾರಸ್ವಾಮಿ ಸರ್ಕಾರ ಪ್ರಾಧಿಕಾರಕ್ಕೆ ನಿರಂಜನಾನಂದಪುರಿ ಸ್ವಾಮೀಜಿ, ಕೆ.ಎಸ್.ಈಶ್ವರಪ್ಪ, ಮೈಸೂರಿನ ನಿವೃತ್ತ ಮುಖ್ಯ ಅಭಿಯಂತರ ಎಂ.ರಾಮದಾಸ್, ಮಾಜಿ ಜಿಪಂ ಸದಸ್ಯ ಸಿ.ಎನ್.ಶ್ಯಾಗೋಟಿಯವರನ್ನು ನಾಮಕರಣ ಮಾಡಿತ್ತು. ಅದರಂತೆ ಅಭಿವೃದ್ಧಿ ಕಾಮಗಾರಿಗಳ ಮೇಲ್ವಿಚಾರಣೆಯನ್ನು ಇದೇ ನಾಮಕರಣ ಸದಸ್ಯರು ನೋಡಿಕೊಳ್ಳುತ್ತಿದ್ದರು.

ಆದರೆ ಯಾವಾಗ ಯಡ್ಡಿ ಸರ್ಕಾರ ಬಂತೋ ಮರುಕ್ಷಣದಿಂದಲೇ ನಾಮಕರಣ ಸದಸ್ಯರನ್ನು ಹತ್ತಿಕ್ಕಲಾಯಿತು. ಇದಕ್ಕೆ ಬದಲಾಗಿ ಪ್ರಾಧಿಕಾರದ ಅಧಿಕಾರಿಗಳಿಗೆ ಹೆಚ್ಚಿನ ಅಧಿಕಾರ ನೀಡಲಾಯಿತು. ಆ ಮೂಲಕ ಸಂಘಪರಿವಾರದ ಅಜೆಂಡಾದಂತೆ ಕನಕದಾಸರನ್ನು ಅಮಾನ್ಯಗೊಳಿಸುವ ಹುನ್ನಾರ ನಡೆದಿದೆ. ಇಲ್ಲಿನ ಲಿಂಗಾಯತರನ್ನು ಯಾಮಾರಿಸಲು ಚನ್ನಕೇಶವನ ವೈಭವೀಕರಣ ಮಾಡಲಾಗುತ್ತಿದೆ. ಇಲ್ಲಿನ ಎಲ್ಲ ಜಾತಿಯ ಜನ ಕಾಗಿನೆಲೆಯ ಕನಕರನ್ನು ಗೌರವ, ಭಕ್ತಿಯಿಂದ ಕಾಣುತ್ತ ಬಂದಿದ್ದು ಯಡ್ಡಿ ಸರ್ಕಾರವೀಗ ಅಂತಹ ಸೌಹಾರ್ದಕ್ಕೆ ಕೊಳ್ಳಿ ಇಡಲು ಹೊರಟಿದೆ. ಈಗಾಗಲೇ ಶಿಶುವಿನಹಾಳದಲ್ಲಿ ಶರೀಫರನ್ನು ಹಿಂದೆ ಸರಿಸಿ ಗುರು ಗೋವಿಂದರಾಯರನ್ನು ವಿಜೃಂಭಿಸುವ ಕೆಲಸವನ್ನು ಬ್ರಾಹ್ಮಣ ದಾನಶೂರರು ಮಾಡುತ್ತಿದ್ದಾರೆ.

ಒಂದು ಕಡೆ ಕಾಮಗಾರಿಗಳಲ್ಲಿ ಯದ್ವಾತದ್ವಾ ತಿನ್ನುವುದು ಜರುಗುತ್ತಿದೆ. ಇನ್ನೊಂದು ಕಡೆ ಬಿಜೆಪಿ ಸರ್ಕಾರ ಕಾಗಿನೆಲೆಯಲ್ಲಿ ಬ್ರಾಹ್ಮಣ್ಯವನ್ನು ನೆಲೆಗೊಳಿಸಲು ಹವಣಿಸುತ್ತಿದೆ. ಅದರ ಭಾಗವಾಗಿಯೇ ಚನ್ನಕೇಶವನ ಗುಡಿಗೆ ಬೆಣ್ಣೆ ಕನಕದಾಸರ ಸಮಾಧಿಗೆ ಸುಣ್ಣ ಬಳಿಯುತ್ತಿದೆ. ಇದನ್ನು ಖಂಡಿಸಿ ನಿರಂಜನಾನಂದಪುರಿ ಸ್ವಾಮೀಜಿ ಬೀದಿಗಿಳಿದಿದ್ದು ತಕ್ಷಣಕ್ಕೆ ಸೂಕ್ತ ಬೆಳವಣಿಗೆಯಾಗಿದ್ದರೂ ಈ ಹೋರಾಟ ನಿರಂತರವಾಗಿ ಬೇರೂರುವತನಕ ಕನಕದಾಸರಿಗೆ ಮುಕ್ತಿ ಎನ್ನುವುದೇ ಇಲ್ಲ. ಕರ್ನಾಟಕದ ಪ್ರಗತಿಪರ ಸಂಘಟನೆಗಳು, ಮುಖ್ಯವಾಗಿ ಕರ್ನಾಟಕ ಕೋಮು ಸೌಹಾರ್ದ ವೇದಿಕೆ ಈ ಹೋರಾಟವನ್ನು ಬಲಗೊಳಿಸಬೇಕಿದೆ.

• ಹುರುಳಿಕುಪ್ಪಿ ವಿನಯ



ಸಂದರ್ಶನ

'ಕನಕನ ಸುತ್ತ ವೈದಿಕ ಹುತ್ತ...'

ಸರ್ಕಾರದ ವಿರುದ್ಧ ಕಾಗಿನೆಲೆ ನಿರಂಜನಾನಂದ ಪುರಿ ಸ್ವಾಮೀಜಿ ಕಿಡಿ

ಪ್ರಶ್ನೆ: ಪ್ರಾಧಿಕಾರದಿಂದ ಅಭಿವೃದ್ಧಿ ಎಷ್ಟರಮಟ್ಟಿಗೆ ಆಗಿದೆ?

ಉತ್ತರ: ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ ರೂಪುಗೊಂಡು ನಾಲ್ಕು ವರ್ಷ ಪೂರೈಸಿದ್ದರೂ ಕೂಡಾ ಕಾಗಿನೆಲೆ ಅಭಿವೃದ್ಧಿ ಮರೀಚಿಕೆಯಾಗುತ್ತಿದೆ. ಅಭಿವೃದ್ಧಿ ನೆಪದಲ್ಲಿ ಸನಾತನ ಮೌಲ್ಯಗಳನ್ನು ಹೇರಲಾಗುತ್ತಿದೆ. ಮಹಾದ್ವಾರ, ಸಭಾಭವನ, ಆಡಳಿತ ಕಚೇರಿ, ಕನಕಮಂದಿರ, ಚನ್ನಕೇಶವ ಮೂಲ ದೇವಸ್ಥಾನ ದುರಸ್ತಿ ಕಾರ್ಯವನ್ನು ಸರ್ಕಾರ ಮೊದಲ ಹಂತದ ಐದು ಕಾಮಗಾರಿಗಳೆಂದು ಹೇಳಿದ್ದರೂ ಅದರಲ್ಲಿ ಜಾತಿರಾಜಕಾರಣ ಬೆರೆಸಲಾಗುತ್ತಿದೆ. ಜಿಲ್ಲಾಧಿಕಾರಿ, ಆಯುಕ್ತರು ಮತ್ತು ಮುಖ್ಯಮಂತ್ರಿಗಳು ಜೊತೆಗೂಡಿ ಆಳದಲ್ಲಿ ಶೈವ ಸಂಸ್ಥಾನವಾಗಿದ್ದ ಕಾಗಿನೆಲೆಯನ್ನು ವೈದಿಕ ಸಂಪ್ರದಾಯದ ಕೇಂದ್ರ ಮಾಡುವ ಹುನ್ನಾರ ರೂಪಿಸಿದ್ದಾರೆ. ಹೊರ ಜಗತ್ತಿನಲ್ಲಿ ಅಭಿವೃದ್ಧಿ ಹೆಸರಲ್ಲಿ ಜನರಿಗೆ ಮಂಕುಬೂದಿ ಎರಚುತ್ತಿರುವ ರಾಜ್ಯದ ಬಿಜೆಪಿ ಸರ್ಕಾರಕ್ಕೆ ನಿಜವಾಗಿಯೂ ಕನಕದಾಸರ ಮೇಲೆ ಕಾಳಜಿ ಇದ್ದಿದ್ದರೆ ಅಭಿವೃದ್ಧಿ ಪ್ರಾಧಿಕಾರಕ್ಕೆ ಸಮಿತಿ ರಚಿಸುತ್ತಿತ್ತು. ಆದರೆ ಅದನ್ನು ತುಂಬಾ ಚಾಣಾಕ್ಷತೆಯಿಂದ ವಂಚಿಸಲಾಗುತ್ತಿದೆ. ರಾಜ್ಯ ಸರ್ಕಾರವು ಕಾಗಿನೆಲೆ ಅಭಿವೃದ್ಧಿ ಎಂದರೆ ಬರೀ ಚನ್ನಕೇಶವ ದೇವಸ್ಥಾನ ದುರಸ್ತಿ ಎಂದುಕೊಂಡಿದೆ. ಇದೂ ಕನಕದಾಸರನ್ನು ಅವಮಾನಿಸಿದಂತೆ.



ಪ್ರಶ್ನೆ: ಅಭಿವೃದ್ಧಿ ಪ್ರಾಧಿಕಾರದಿಂದ ಅವ್ಯವಹಾರ ಎಸಗಲಾಗುತ್ತಿದೆಯೇ?

ಉತ್ತರ: ಈ ಪ್ರಶ್ನೆಗೆ ನನ್ನ ಉತ್ತರ ಹೌದು. ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ ಪ್ರಾರಂಭದಿಂದಲೂ ಹಗರಣಗಳಿಗೆ ಆಶ್ರಯತಾಣವಾಗಿದೆ. ರೇವಣಪ್ಪನಂಥ ಆಯುಕ್ತ ದಿನಂಪ್ರತಿ ಯಾವುದರಲ್ಲಿ ಎಷ್ಟನ್ನು ಲೂಟಿ ಮಾಡಬೇಕೆಂದೇ ತಲೆ ಕೆಡಿಸುತ್ತಾನೆ. ಸ್ವಯಂಘೋಷಿತ ಹಿಟ್ಲರ್‌ನಂತಿರುವ ರೇವಣ್ಣಪ್ಪ ಮನ ಬಂದಂತೆ ಕಾಮಗಾರಿಗಳ ರೂಪುರೇಷೆಗಳನ್ನು ತಿದ್ದುತ್ತಿದ್ದಾನೆ. ಹೀಗಿರುವಾಗ ಅಭಿವೃದ್ಧಿ ಪ್ರಾಧಿಕಾರ ಹೇಗೆ ತಾನೆ ನ್ಯಾಯಸಮ್ಮತ ಕೆಲಸ ಮಾಡುತ್ತದೆ? ಇದಕ್ಕೆ ಉದಾಹರಣೆಯೆಂದರೆ ಸುಮಾರು ಐದು ಕೋಟಿ ವೆಚ್ಚದಲ್ಲಿ ನಿರ್ಮಿಸುತ್ತಿದ್ದ ಸಭಾಭವನದ ಮೇಲ್ಛಾವಣಿ ಕುಸಿದು ಬಿದ್ದದ್ದು...

ಪ್ರಶ್ನೆ: ಕಾಗಿನೆಲೆ ಅಭಿವೃದ್ಧಿ ಮಟ್ಟಿಗೆ ನಿಮ್ಮ ಪಾತ್ರವೇನು?

ಉತ್ತರ: ಇದನ್ನು ನನಗೆ ನಾನೇ ಪ್ರಶ್ನೆ ಮಾಡಿಕೊಳ್ಳಬೇಕು. ಯಾಕೆಂದರೆ ಕನಕದಾಸರನ್ನು ಆರಾಧಿಸುವ ಜನ ನನ್ನನ್ನು ಜಗದ್ಗುರು ಎಂದು ಒಪ್ಪಿಕೊಂಡಿದ್ದಾರೆ. ಇದರನ್ವಯ ಕಾಗಿನೆಲೆ ಅಭಿವೃದ್ಧಿ ವಿಚಾರದಲ್ಲಿ ಸರ್ಕಾರಗಳು ಯಾವುದೇ ತೀರ್ಮಾನ ಕೈಗೊಂಡರೂ ಅದಕ್ಕಾಗಿ ನಮ್ಮನ್ನು ಸಂಪರ್ಕಿಸುವುದು ಸೌಜನ್ಯ. ಆದರೆ ಈಗಿನ ರಾಜ್ಯ ಸರ್ಕಾರವಾಗಲಿ ಅಭಿವೃದ್ಧಿ ಪ್ರಾಧಿಕಾರವಾಗಲಿ ಕಾಗಿನೆಲೆ ವಿಷಯದಲ್ಲಿ ನಮ್ಮ ಕಣ್ಣಿಗೆ ಮಣ್ಣೆರಚುತ್ತಿವೆ. ಇದು ಇಡೀ ಕನಕದಾಸರನ್ನು ಆರಾಧಿಸುವ ಜನವರ್ಗಗಳಿಗೆ ಮಾಡಿದ ಅವಮಾನ ಎಂದರೆ ತಪ್ಪಲ್ಲ.

ಪ್ರಶ್ನೆ: ನಿಮ್ಮ ಕಾಳಜಿಗೆ ಸರ್ಕಾರ ಸ್ಪಂದಿಸುವ ನಂಬಿಕೆ ಇದೆಯೇ?

ಉತ್ತರ: ನಂಬಿಕೆ ಅನ್ನುವುದಕ್ಕಿಂತ ಅದು ಸರ್ಕಾರದ ಕರ್ತವ್ಯ. ಯಾರು ಏನೇ ಹೇಳಿದರೂ ನಮ್ಮನ್ನಾಳುವ ಸರ್ಕಾರಗಳು ತಮ್ಮ ಕರ್ತವ್ಯವನ್ನು ಮರೆಯಬಾರದು. ಆದರೆ ಕಾಗಿನೆಲೆ ಅಭಿವೃದ್ಧಿ ವಿಚಾರದಲ್ಲಿ ರಾಜ್ಯ ಬಿಜೆಪಿ ಸರ್ಕಾರ ವರ್ಗಭೇದ ನೀತಿಯನ್ನು ಜಾರಿಗೆ ತರುವ ಪ್ರಯತ್ನ ಮಾಡುತ್ತಿದೆ. ಇಡೀ ಮನುಕುಲಕ್ಕೆ ಮಾದರಿಯಾದ ಕನಕದಾಸರನ್ನು ಕೀಳಾಗಿ ಕಾಣುವ ಜಾತಿವ್ಯವಸ್ಥೆಗೆ ಸರ್ಕಾರ ನೀರೆರೆಯುತ್ತಿದೆ. ಇದರ ಹಿಂದ ಕಾಗಿನೆಲೆ ಕನಕಪೀಠವನ್ನು ಕತ್ತಲಲ್ಲಿಡುವ ವ್ಯವಸ್ಥೆ ಅಡಗಿದೆ. ಇದರ ವಿರುದ್ಧ ಸಾಮುದಾಯಿಕ ಹೋರಾಟ ರೂಪಿಸಲು ನಾವು ಸಿದ್ಧರಾಗುತ್ತಿದ್ದೇವೆ.

ಪ್ರಶ್ನೆ: ಸರ್ಕಾರ ಹಾಗೂ ರಾಜಕೀಯ ಒತ್ತಡ ಬಂದರೆ ಹೋರಾಟ ಕೈಬಿಡುತ್ತೀರಾ?


ಉತ್ತರ: ಖಂಡಿತ ಇಲ್ಲ. ಎದುರಿಗಿರುವ ಬಿಬಿಎಂಪಿ ಚುನಾವಣೆ ಮುಗಿದ ಬಳಿಕ ಕನಕದಾಸರ ಚರಿತ್ರೆಯ ಉಳಿವಿಗಾಗಿ ಹೋರಾಟ ಅನಿವಾರ್ಯ. ಮೊದಲಿಂದಲೂ ಕನಕಗುರುಪೀಠದಿಂದ ರಾಜಕಾರಣವನ್ನು ದೂರವೇ ಇಡಲಾಗಿದೆ. ಗುರುಪೀಠ ಯಾವತ್ತೂ ರಾಜಕೀಯ ಪಿತಾಮಹರಿಗೆ ಬೆನ್ನು ಬಿದ್ದಿಲ್ಲ. ಹೀಗಾಗಿ ರಾಜಕೀಯ ಒತ್ತಡದ ಪ್ರಶ್ನೆಯೇ ಎದುರಾಗುವುದಿಲ್ಲ. ಇನ್ನೂ ಸರ್ಕಾರ ಒತ್ತಡ ಹೇರುವ ನೈತಿಕತೆಯನ್ನೇ ಉಳಿಸಿಕೊಂಡಿಲ್ಲ. ಇದರಾಚೆ ಎಲ್ಲ ಒತ್ತಡಗಳಿಗಿಂತ ನಮಗೆ ಕನಕದಾಸರ ಮೌಲ್ಯಗಳೇ ಹೆಚ್ಚು. ಅದಕ್ಕೆ ಕನಕಗುರುಪೀಠ ಯಾವತ್ತೂ ಬದ್ಧವಾಗಿರುತ್ತದೆ. ಜೊತೆಗೆ ಕನಕ ಗುರುಪೀಠ ಸೂರ್ಯಚಂದ್ರ ಇರುವವರೆಗೂ ಜನಪರವಾಗಿಯೇ, ಪ್ರಭುತ್ವ ವಿರೋಧಿಯಾಗಿಯೇ ನಡೆದುಕೊಳ್ಳುತ್ತದೆ.

• ಸಂದರ್ಶನ: ಹುರುಳಿಕುಪ್ಪಿ ವಿನಯ

ನಶೆಯನ್ನು ಮೀರುವುದೇ ನಿಜವಾದಂತಹ ಕಾವ್ಯ

ಪುಸ್ತಕ ವಿಮರ್ಶೆ

"ಜಂಗಮ" ಮತ್ತು "ಜೋಳಿಗೆ" ಎಂಬ ಪದಗಳಿಗೆ ಅನುಭಾವಿ ಪರಂಪರೆಯಲ್ಲಿ ಅತ್ಯಂತ ನಿಗೂಢವೂ, ಶ್ರೇಷ್ಠವೂ ಆದಂತಹ ಅರ್ಥವಿದೆ. ಇಂತಹ ಈ ಪದಗಳನ್ನು ಪ್ರಸ್ತುತ ಆಧುನಿಕ ಸಾಹಿತ್ಯದ ಪರಿಭಾಷೆಯಲ್ಲಿ ಕಾವ್ಯದ ಧಾತುವಾಗಿಸಿಕೊಂಡು ಎಚ್.ಎಸ್. ಶಿವಪ್ರಕಾಶ್, ಕೆ.ಬಿ. ಸಿದ್ದಯ್ಯ, ಲಕ್ಷ್ಮೀಪತಿ ಕೋಲಾರ, ಎಸ್.ಜಿ. ಸಿದ್ದರಾಮಯ್ಯ, ಎಚ್.ಎಲ್. ಪುಷ್ಪ, ಮಹಾದೇವ ಶಂಕನಪುರ... ಮೊದಲಾದವರು ಕಾವ್ಯ ಕಟ್ಟುತ್ತಿದ್ದಾರೆ. ಇದು ಬರುಬರುತ್ತಾ ಒಂದು ಪರಂಪರೆಯಾಗುವ ಮೂಲಕ ಪುರಾಣ, ಮಹಾಕಾವ್ಯ ಮೊದಲಾದ ಸ್ಮೃತಿಗಳನ್ನು, ಅಲ್ಲಿರುವ ಪರಿಕರಗಳನ್ನು ವಾಸ್ತವದ ಜೊತೆಗೆ ಮುಖಾಮುಖಿಯಾಗಿಸುತ್ತಾ ಕಾವ್ಯದ ಶೈಲಿಯನ್ನೇ ಬದಲಾಯಿಸುತ್ತಿದೆ. ಇಂತಹ ಕಾವ್ಯ ಪರಂಪರೆಗೆ ಈಗ ಸೇರ್ಪಡೆಯಾಗುತ್ತಿರುವ ಹೊಸ ಹೆಸರು 'ಆರಿಫ್ ರಾಜಾ'. ಇವರ 'ಜಂಗಮ ಫಕೀರನ ಜೋಳಿಗೆ' ಸಂಕಲನವು ಇದನ್ನು ಪುಷ್ಟೀಕರಿಸುತ್ತದೆ.



ಜಂಗಮ ಫಕೀರನ ಜೋಳಿಗೆ
ಲೇ: ಆರಿಫ್ ರಾಜಾ
ಪುಟ : 104
ಬೆಲೆ : ರೂ. 40
ಪ್ರ : ಲಡಾಯಿ ಪ್ರಕಾಶನ ಗದಗ

ಆರೀಫ್‌ರ ಈ ಸಂಕಲನವು ಅನುಭಾವಿ ನೆಲೆಯ ಸೂಕ್ಷ್ಮ ಧಾತುಗಳನ್ನು ಕಾವ್ಯವಾಗಿಸುವ ಮೂಲಕ ಅಲ್ಲಿರುವ ವೈಯಕ್ತಿಕ ಅನುಭವವನ್ನು ಸಾಮಾಜಿಕವಾಗಿ, ಧಾರ್ಮಿಕವಾಗಿ ಅಭಿವೃದ್ಧಿಪಡಿಸುವಂತಹ ಪ್ರಯತ್ನವನ್ನು ಮಾಡಿದೆ. ಇಲ್ಲಿ ಸಮುದಾಯದ, ಧರ್ಮದ ಸಾಮಾಜಿಕ ಸಂಕೇತಗಳು ಕಾವ್ಯಕಟ್ಟುವ ಪರಿಕರಗಳಾಗಿರುವುದು ಒಂದು ವಿಶೇಷ. ಈ ಕವಿಯ ಕಾವ್ಯದ ಕುರಿತು ಮಾತನಾಡಿರುವ ಮುನ್ನುಡಿಕಾರರಾದ ಎಚ್.ಎಸ್. ಶಿವಪ್ರಕಾಶ್‌ರವರು, 'ನಿಮ್ಮ ಮುಸ್ಲಿಂ ವಿವರಗಳು ಕವಿತೆಯಲ್ಲಿ ಶಕ್ತರೂಪಕ ಮತ್ತು ಉಪಮೆಗಳಾಗಿ ಬರುವುದರಿಂದ ನೀವು ಮುಸ್ಲಿಂತನವನ್ನು ಕವಿತೆಯಾಗಿಸುತ್ತಿದ್ದೀರೇ ಹೊರತು ಕಾವ್ಯವನ್ನು ಇಸ್ಲಾಂ ಧರ್ಮಕ್ಕೆ ಸೇರಿಸುತ್ತಿಲ್ಲ, ಜಾತಿ ಫಲಕಗಳನ್ನು ಪ್ರಾದೇಶಿಕ ಹಿನ್ನೆಲೆಗಳನ್ನು ತತ್‌ಕ್ಷಣದ ಲಾಭಗಳಿಗೆ ಬಳಸಲಾಗುತ್ತಿರುವ ವಾತಾವರಣದಲ್ಲಿ ನೀವು ಕಾವ್ಯದ ಮೂಲಕ ಧರ್ಮವನ್ನು ಧರ್ಮನಿರಪೇಕ್ಷಗೊಳಿಸುತ್ತಿರುವುದು ವಿಶೇಷ.' ಎಂದಿರುವುದು ಎಚ್.ಎಸ್. ಶಿವಪ್ರಕಾಶ್‌ಗೆ ಕಾವ್ಯದ ಕುರಿತು ಕವಿಗಿರುವ ಕುತೂಹಲವನ್ನು ಹೊರಗೆಡಹುತ್ತದೆ. ಆದರೆ ಕುತೂಹಲವೇ ಕಾವ್ಯವಾಗುವುದಿಲ್ಲವಲ್ಲ, ಆದರೂ ಅದನ್ನು ಮೀರುವಂತಹ ಮುರಿದುಕಟ್ಟುವಂತಹ ಪ್ರಯತ್ನವನ್ನು ಆರೀಫ್ ಮಾಡಿರುವುದನ್ನು ನೋಡಿದರೆ ಆತನಿಗೆ ಕಾವ್ಯ ಕಟ್ಟುವ ಕುತೂಹಲವಷ್ಟೇ ಅಲ್ಲದೇ ಅದನ್ನು ಬದುಕಾಗಿಸುವ ಪ್ರಯತ್ನವಿರುವುದು ಕಾಣುತ್ತದೆ. ಇದು ಆರೋಗ್ಯಕರವಾದಂತಹ ಪ್ರಯತ್ನವೆನ್ನಬಹುದು. ಬಹುಶಃ ಮುಸ್ಲಿಂತನವನ್ನು ಕಾವ್ಯವಾಗಿಸುವುದು, ಕಾವ್ಯವೇ ಮುಸ್ಲಿಂ ಧರ್ಮಕ್ಕೆ ಸೇರುವುದು ಎಂಬ ಎರಡು ಪರಿಕಲ್ಪನೆಗಳನ್ನು ಮುನ್ನುಡಿಕಾರರು ಇಲ್ಲಿ ಗುರುತಿಸಿದ್ದಾರೆ. ಇದು ಪ್ರಸ್ತುತ ಸಮಕಾಲೀನ ಕನ್ನಡ ಕಾವ್ಯದ ತುರ್ತು ಕೂಡಾ ಎಂದು ಹೇಳಬಹುದು. ಇವತ್ತು ಕಾವ್ಯವೊಂದು ಧರ್ಮವಾಗಿಯೋ ಜಾತಿಯೊಳಗಡೆ ಲೀನವಾಗಿದ್ದರೆ ಶಿವಪ್ರಕಾಶರ 'ಸಮಗಾರ ಭೀಮವ್ವ', ಸಿದ್ದಯ್ಯರ 'ಬಕಾಲ', ಲಕ್ಷ್ಮೀಪತಿಯವರ 'ತೊಟ್ಟು', ಪುಷ್ಪರ 'ಗಾಜುಗೊಳ' ಪದ್ಯಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಂಡು ಯಾವಾಗಲೋ ನಮ್ಮ ನೆನಪುಗಳಿಂದ ದೂರವಾಗಿಬಿಡುತ್ತಿದ್ದವು. ಆದರೂ ಈ ಕವಿತೆಗಳನ್ನು ನಾವು ನಮ್ಮ ಎಚ್ಚರದಲ್ಲಿ ಯಾಕೆ ಮರುರೂಪಿಸಿಗೊಳ್ಳುತ್ತಿದ್ದೇವೆಯೆಂದರೆ ಇಲ್ಲಿ ವೈಯಕ್ತಿಕ ಅನುಭವಗಳು ಜಾತಿಯನ್ನು, ಧರ್ಮವನ್ನು ಮೀರಿ ನಿಲ್ಲುವ ಮೂಲಕ ಅಸ್ತಿತ್ವವನ್ನು ಕಟ್ಟಿಕೊಳ್ಳುತ್ತಿದೆ. ಆ ಮೂಲಕ ಇವರೆಲ್ಲಾ ಧರ್ಮವನ್ನು ಕಾವ್ಯವಾಗಿಸುತ್ತಿದ್ದಾರೆ ಹೊರತು ಕಾವ್ಯವೇ ಸಾಮಾಜಿಕ ಧರ್ಮವಾಗುತ್ತಿಲ್ಲ.

ಅದಕ್ಕೆ ಕವಿಯಾದವನಿಗೆ ಸಾಮಾಜಿಕ ಎಚ್ಚರ ಮತ್ತು ಅರಿವು ತುಂಬಾ ಮಹತ್ವವನ್ನು ಪಡೆದುಕೊಳ್ಳುತ್ತದೆ. ಬಹುಶಃ ಆರೀಫ್ ಪ್ರಸ್ತುತ ಸಂಕಲನದಲ್ಲಿ ಮೇಲ್ಕಂಡ ಕವಿಗಳ ಕಾವ್ಯಧರ್ಮವನ್ನು ಅನುಸರಿಸಿದ್ದಾರೆ.

'ಅಮೀಜಾನ್ ನಮಾಜ್‌ಗೆ ಕಣ್ಣೀರು ಬಿದ್ದು ಲೋಕದ ದೀಪ ಆರಿಹೋಗಿದೆ. ಈ ಜಂಗಮ ಫಕೀರನಿಗೆ ಜೋಳಿಗೆ ಕೊಟ್ಟು ಸಂತೆಯಲ್ಲಿ ನಿಲ್ಲಿಸಿ ಹೊರಟುಹೋದೆ' -ಜಂಗಮ ಫಕೀರನ ಜೋಳಿಗೆ 'ಜೇಲಿನ ಗೋಡೆ ಗುರುತುಗಳು ಮಾಯದೇ ಹಾಗೆಯೇ ಉಳಿದಿವೆ ನಿನ್ನ ಯುಗಾದಿಯ ಬೇವು ಬೆಲ್ಲ ನನ್ನ ರಮ್‌ಜಾನಿನ ದೂದ್‌ಖುರ್ಮಾ ಎಂದೂ ಒಂದಾಗುವುದಿಲ್ಲ"

ಇಲ್ಲಿ ಅಧಿಕೃತವಾಗಿರುವ ದೂದ್‌ಖುರ್ಮಾ, ರಮ್‌ಜಾನ್ ಮೊದಲಾದ ಇಸ್ಲಾಂಧರ್ಮದ ಪಾರಂಪರಿಕ ಶಬ್ದಗಳು ಒಂದರ್ಥದಲ್ಲಿ ಸೂಫಿ ಕಾವ್ಯಕ್ಕೆ ಹತ್ತಿರವಿರುವ ಪದಗಳಾಗಿದ್ದು ಇವು ಆರೀಫ್ ಕಾವ್ಯದಲ್ಲಿ ಸಾಂಪ್ರದಾಯಿಕವಾಗಿ ಬಂದುಹೋಗುತ್ತಿರುವುದನ್ನು ನೋಡಿದರೆ ಆರೀಫ್‌ರ ಕಾವ್ಯದ ತಾಜಾತನ ಎಂತಹದ್ದು ಎಂಬುದು ಅರಿವಾಗುತ್ತದೆ. ಅಂದರೆ ಇಲ್ಲೊಂದು ವೈಯಕ್ತಿಕ ಅನುಭವ ಸಾಮೂಹಿಕ ಪ್ರಜ್ಞೆಯನ್ನು ಪಡೆಯುವ ಮೂಲಕ ಏಕಕಾಲದಲ್ಲಿ ಅಲ್ಲೊಂದು ಸಾಮಾಜಿಕತೆಯನ್ನು ಸಾಂಸ್ಕೃತಿಕತೆಯನ್ನು ಪಡಿಮೂಡಿಸುವ ಪ್ರಯತ್ನವಾಗಿರುವುದನ್ನು ಕಾಣಬಹುದು.

ಹಾಗೆ ಸಂಕಲನದ ಉದ್ದಕ್ಕೂ ನೋವು, ಹತಾಶೆ, ವಿರಹ, ಪ್ರೇಮ, ಕಾಮ ಮೊದಲಾದವು ಕಾವ್ಯದ ವಸ್ತು ಆಗುತ್ತಾ ಬಂದಿದೆ. ಬಹುಶಃ ಈ ಎಲ್ಲವೂ ಕೂಡಾ ಕವಿಯ ವಸ್ತುಗಳೂ ಆಗಿವೆ. ಈ ಹತಾಶೆ, ವಿರಹ, ಪ್ರೇಮ-ಕಾಮ ಮೊದಲಾದ ಎಲ್ಲವೂ ಕೂಡಾ ಕೊನೆಕೊನೆಗೆ ಕವಿಯನ್ನು ಅತೃಪ್ತಗೊಳಿಸುತ್ತಾ ಕಾವ್ಯವನ್ನು ತೃಪ್ತವಾಗಿಸುವಂತಹ ಪರಿಕರಗಳಾಗಿವೆ. ಕವಿಯಾದವನಿಗೆ ಯಾವ ಕಾವ್ಯವೂ ತೃಪ್ತಿ ಕೊಡಬಾರದು. ಕೊಟ್ಟರೆ ಕವಿ ಮತ್ತು ಕವಿತೆ ಸಾಯುತ್ತದೆ. ಬಹುಶಃ ಈ ಅತೃಪ್ತಿಯೇ ಕವಿಗೆ ನಿಜವಾದಂತಹ ಸಂಕೇತ. ಈ ಹಿನ್ನೆಲೆಯಲ್ಲಿ ಸಂಕಲನದ ಶೀರ್ಷಿಕೆಯೇ ಸೂಚಿಸುವಂತೆ ಈ ಎಲ್ಲಾ ಪರಿಕರಗಳು ಕೂಡಾ ಧರ್ಮದ ಕಾವ್ಯದ, ಪರಂಪರೆಯ ಯಾವುದೋ ಒಂದು ಭಾಗವನ್ನೋ, ಮೂಲೆಯ ಮಡುಕನ್ನೂ ಇಲ್ಲಿ ಕವಿತೆಯಾಗಿಸುತ್ತಿದೆ.

'ಕಾಲಿನಿಂದ ಪೆಡಲು ತುಳಿಯುವ ಅವ್ವಿ ಚಕ್ರ ತಿರುಗಿಸಿದಂತೆಲ್ಲಾ ಇತಿಹಾಸ ಒಂದು ಸುತ್ತು ಉರುಳುತ್ತದೆ'

ಈ ಪದ್ಯದಲ್ಲಿ ಮರುಕಳಿಸುವ ನೋವು ಕವಿತೆಗೊಂದು ಹೊಸತಿರುವನ್ನು ಕೊಡುವ ಮೂಲಕ ಸಂವೇದನೆಯನ್ನು ಮರುಸ್ಥಾಪಿಸುವಂತಹ ಕೆಲಸ ಮಾಡುತ್ತದೆ. ಇದೇ ಹಿನ್ನೆಲೆಯಲ್ಲಿ ಇದನ್ನು ಧ್ವನಿಕರಿಸುವಂತೆ ಸಂಕಲನದಲ್ಲಿ ಬಸೂವಿನ "ನಾವೀಗ ಸಂಘರ್ಷ ಬದುಕಿನಲ್ಲಿ ಬದುಕುತ್ತಿದ್ದೇವೆ. ಪ್ರಭುತ್ವ ಪ್ರಾಯೋಜಿತ ಕೋಮುವಾದ, ಜಾಗತೀಕರಣ, ಪ್ರಾದೇಶಿಕತೆ, ಭಯೋತ್ಪಾದನೆಗಳು ನಮ್ಮ ನೆಲದಲ್ಲಿ ಸಮಸ್ಯೆಗಳಾಗಿ ಬೆಳೆದು ನಿಂತು ನಮ್ಮ ಬುಡವನ್ನೇ ಅಲ್ಲಾಡಿಸುವಷ್ಟು ಸಶಕ್ತವಾಗಿವೆ. ಅಕ್ಷರಗಳಿಂದ ಏನು ಆಗುವುದಿಲ್ಲ ಎಂದು ಹೇಳುವ ಒಂದು ಅಭಿಪ್ರಾಯವಿದೆ. ಆದರೆ ಅಕ್ಷರಗಳಿಂದ ಏನೆಲ್ಲವನ್ನೂ ಸಾಧಿಸಬಹುದು ಎಂಬುದು ಅಷ್ಟೇ ಸತ್ಯ" ಈ ಮಾತಿನಂತೆ ಆರೀಫರು ಸದ್ಯದ ಬದುಕಿನ ಸಂಘರ್ಷವನ್ನೇ ಅಕ್ಷರವನ್ನಾಗಿಸಿದ್ದಾರೆ. ಕನಸಿನ ನವಿಲುಗಳು, ಕರ್ಬಲಾ ಕುಣಿತ, ಗೋಧ್ರಾ : ಒಂದು ಅಂತಿಮ ಸಂದೇಶ' ಮೊದಲಾದ ಪದ್ಯಗಳು ಇದಕ್ಕೆ ಸಾಕ್ಷಿ.

ಈ ಎಲ್ಲದರ ಆಚೆಗೆ ನಡೆಸುವ ಹುಡುಕಾಟ ಕಾವ್ಯದ ಹುಡುಕಾಟದ ಜೊತೆಗೆ ಬದುಕಿನ ಹುಡುಕಾಟವೂ ಆಗಿರುವುದು ಒಂದು ವಿಶೇಷ. ಆದರೂ ಆರೀಫ್ ಕಾವ್ಯ ಬರೆದಾದ ಮೇಲೆ ಅದೇ ನಶೆಯಲ್ಲಿ ಅಲ್ಲಲ್ಲಿ ಉಳಿಯುತ್ತಿರುವುದು ಸಂಕಲನದಲ್ಲಿ ಅಲ್ಲಲ್ಲಿ ಕಾಣುತ್ತದೆ. ಇದು ಅವರಿಗಿರುವ ಕಾವ್ಯದ ಪ್ರೀತಿಯೋ, ಮೋಹವೋ ಗೊತ್ತಿಲ್ಲ, ಏಕೆಂದರೆ ಕಾವ್ಯವೆಂಬುದು ನಶೆಯಲ್ಲ ಅದು ನಶೆಯನ್ನು ಮೀರಬೇಕಾದ ಕ್ರಿಯೆ. ಬರೆದಾದ ಮೇಲೆ ಕವಿತೆ ಕವಿಯದ್ದಲ್ಲ, ಅದು ಲೋಕದ್ದು. ಈ ಎಚ್ಚರ ಕವಿಗಿಲ್ಲದಿದ್ದರೆ ಕವಿಯ ಜೊತೆಗೆ ಕಾವ್ಯವೂ ಸಾಯುವ ಅಪಾಯವಿದೆ, ಪ್ರಸ್ತುತ ಇಸ್ಲಾಂ ಧರ್ಮದ ಪರಿಕರಗಳು, ಸೂಫೀ ಕಾವ್ಯದ ಧಾತುಗಳು, ಸಮುದಾಯದ ಆಚರಣೆಗಳು ಇವೇ ಮೊದಲಾದ ಕಾವ್ಯ ಪರಿಕರಗಳು ಈಗಾಗಲೇ ಭಾರತದ ಅನೇಕ ಭಾಷೆಯ ಕಾವ್ಯ ಪರಿಮಿತಿಗಳಲ್ಲಿ ಬಂದುಹೋಗಿದ್ದರಿಂದ ಕವಿಯಿಲ್ಲಿ ಅದನ್ನು ಮುರಿದು ಕಟ್ಟುವ, ಮೀರುವ ಕೆಲಸ ಮಾಡಬೇಕೆ ಹೊರತು ಅದರಲ್ಲೇ ಉಳಿದು ಅದನ್ನು ಮುಂದುವರೆಸುವ ಕೆಲಸವನ್ನು ಮಾಡಬಾರದಲ್ವಾ? ಆದರೂ ಇಸ್ಲಾಂ ಧರ್ಮದ ಆಚರಣೆಗಳು, ಸೂಫಿ ನುಡಿಗಟ್ಟುಗಳು, ಅನುಭಾವದ ತಾತ್ವಿಕತೆಗಳು ಮೊದಲಾದವುಗಳನ್ನು ಹೊಸ ರೀತಿಯಲ್ಲಿ ಮುಟ್ಟಿರುವುದರಿಂದ ಕವಿಯಿಲ್ಲಿ ಹೊಸ ಕಾವ್ಯದ ಹುಡುಕಾಟಕ್ಕೆ ಮೊದಲಾಗಿರುವುದು ಒಂದು ತೆರನಾದ ಆರೋಗ್ಯಕರವಾದಂತಹ ಲಕ್ಷಣವೆನ್ನಬಹುದು. ಈ ಎಲ್ಲಾ ಕಾರಣಗಳಿಂದ ಜಂಗಮ ಫಕೀರನ ಜೋಳಿಗೆ ಓದಬಹುದಾದಂತಹ ಈ ಹೊತ್ತಿನ ಈ ದಿನಗಳಲ್ಲಿನ ಒಂದು ಉತ್ತಮ ಕಾವ್ಯ ಸಂಕಲನವಾಗಿದೆ.

• ಲಕ್ಕೂರು ಆನಂದ

ಹಿಂಗಂತಲ್ಬೆ ಖರೆಯನು?

ಎಡಗೈಯಾಗ ನಾಕ್ ರೊಟ್ಟಿ ಇಟ್ಗೊಂಡ ಸುಮಿತ್ರವ್ವ ಒಂದೀಟು ಉದರಬ್ಯಾಳಿ ಪಲ್ಯ, ಹಸಿಮೆಣಸಿನಕಾಯಿ ಚಟ್ನಿ ಹಚಗೊಂಡು ಬಡಬಡ ತಿಂದಾಕೀನ. ಬಲಗೈಯಾಗ ಬುತ್ತಿಗಂಟು, ಕುರ್ಚಿಗಿ ಹಿಡಕೊಂಡು ಎಡಗೈಯಾಗ ಆಕಳ ಹಗ್ಗ ಹಿಡಕೊಂಡು ತ್ವಾಟದ ಕಡಿಗಿ ಹೊಂಟಳು. ಧಾರ್‍ವಾಡದಿಂದ ಬಂದಿದ್ದ ಹೆಣ್ ಮೊಮ್ಮಗ್ಳು ಸುಮ್ಮಿನೂ 'ಯವ್ವಾ ನಾನು ಬರ್‍ತೀನ್ನಿ' [illegible] ಜೋಡಿಗಿ ಹೊಂಟ್ಳು.....

ತ್ವಾಟದೊಳಗ ನಿಂಗಿ ಅರ್ಲೇ ಕೆಲ್ಸ ಶುರು ಮಾಡಿಕೊಂಡಿದ್ಳು... ನೆಂಗಾ ನಡ್ಕ ಬೆಳೆದಿದ್ದ ಕಸ ತೆಗೆಯಾಕ ಶುರು ಮಾಡಿದ್ಳು. [illegible] ಹಂಗ ಅರ್ಲೇ ಕುಂತ್ಳು.....

ನಿಂಗಿ: ಅಲ್ಲೇ ಯತ್ತಿ, ನಿಮ್ದು ಅದು ದೊಡ್ ಎತ್ತು ಐತಲ್ಲ, ಭಾಳಾ ವಯಸ್ಸಾತು ಅದಕ್ಕ... ಈ ಸಲ ಮುಂಗಾರ್‍ಗೆ ಬ್ಯಾರೆ [illegible] ತಂದ್ ಬಿಡ್ರಿ—

ಸುಮಿತ್ರವ್ವ: ಹೌದ್ಲ, ಜಲ್ದಿ ಇದನ್ ಮಾರಿ ಹೊಸಾದು ತಗೊಂಡು ಅಂತಾ ನಿಮ್ ಮಾವ ಹೇಳಿಹೇಳಿ ಸಾಕಾತು ನೋಡು...

ಸುಮ್ಮಿ: ಯವ್ವಾ, ಮಾರಂಗಿದ್ರ, ಲಗೂನ ಮಾರಿಬಿಡು. ಇಲ್ಲಂದ್ರ ಮುಂದ್ ದನ ಮಾರಂಗಿಲ್ಲಂತ, ಕಡಿಯಂಗಿಲ್ಲಂತ, ತಿನ್ನಂಗಿಲ್ಲಂತ....

ಸುಮಿತ್ರವ್ವ: ಯಾರ್‍ಲೇ ಹಂಗ್ ಹೇಳಿದ್ದು?

ಸುಮಿ: ಯಡಿಯೂರಪ್ಪನ ಅಂತಾ ರೂಲ್ಸು ಮಾಡ್ಯಾನಂತ

ಸುಮಿತ್ರವ್ವ: ಅವಂಗ ತಲಿಗಿಲಿ ಕೆಟ್ಟೈತನು... ನಮ್ಮತ್ತು ನಾವ್ ಮಾರ್‍ತೀವಿ... ಮುಂದ ಅದನ್ನ ತಿನ್ನೋರು ತಿಂತಾರ...

ನಿಂಗಿ: ಏ, [illegible] ನಾವು ಕೇರಿಯವ್ರು ದನ ತಿನ್ನಂಗಿಲ್ಲನು ಮತ್ತ!

ಸುಮಿತ್ರವ್ವ: ಲೇ ನಿಂಗಿ, [illegible]

ಸುಮ್ಮಿ: ಯವ್ವಾ, [illegible]

ಸುಮಿತ್ರವ್ವ: [illegible]

ನಿಂಗಿ: [illegible]

ಸುಮಿ: ಯವ್ವಾ, ನೀನು [illegible] ಸಿಂಪಲ್ಲಾಗಿ ಸತ್ಯ ಹೇಳಿದಿ. ಎಲ್ಲ ಗೊತ್ತಿದ್ರೂ [illegible] ಮಂದಿ ಹೊಟ್ಟೆಮ್ಯಾಲ ಕಲ್ಲು ಹಾಕೋದ [illegible] ಆಗೇತಿ ನೋಡು....

ಸುಮಿತ್ರವ್ವ: ಬಿಡು, ಬಿಡು, ಆ ಮೂಳಂದೇನು ಮಾತಾಡದು. ನೆತ್ತಿಮ್ಯಾಲ ಬಿಸಿಲು ಬಂತು.... ಒಂದೀಟು ನೀರು ಕುಡ್ದು ಬರಾನು ಬರ್ರಿ....

• ಮುನ್ನಿ, ಗದಗ

ಉಗಾದಿಗೆ

ಉಗಾದಿ ಬಂತಂತೆ
ಹೊಸತು ಹೊಸತು ತಂತಂತೆ !!

ಉಗಾದಿಯ ದಿನ ನನ್ನಬ್ಬೆ
ಯಾರದಾದರು ಮನೆಯಿಂದ
ಪಾವು ಗೋಧಿಯ ಬೇಡಿ ತಂದು
ಕುದಿಸಿ, ಅದಕ್ಕೊಂದಷ್ಟು ಬೆಲ್ಲವ ಅಂಟಿಸಿ
'ಪಾಯಸ' ಅಂದಳು
ನನಗೂ ನನ್ನ ತಂಗಿಗೂ
ಅಂದು ಹಬ್ಬ; ನನ್ನಬ್ಬೆಗೆ
ಪಾವು ಗೋಧಿಯ ಹೊಸ ಸಾಲ !!

ಉಗಾದಿ ಬಂತಂತೆ
ಹೊಸತು ಹೊಸತು ತಂತಂತೆ !!

ಸಾಹುಕಾರರ ಮನೆಯ ಹಬ್ಬದಡುಗೆಯ
ಪಾತ್ರೆ ತೊಳೆದು ಸಂಜೆ ಬರುವಾಗ
ನನ್ನ ಪುಟಾಣಿ ಅಕ್ಕ
ತನ್ನ ಪಾಲಿನ ಹೋಳಿಗೆಯ
ಗೋಧಿ ಪಾಯಸಕ್ಕಂಟಿಸಿದರೆ
ನನಗೂ ನನ್ನ ತಂಗಿಗೂ
ಸಿಹಿ ಸಿಹಿ ಹಬ್ಬ

ಉಗಾದಿ ಬಂತಂತೆ
ಹೊಸತು ಹೊಸತು ತಂತಂತೆ !!

ಹಬ್ಬ ಹರಿದಿನ ಅಮಾವಾಸ್ಯೆ ಹುಣ್ಣಿಮೆ
ಎಂದೂ ನನ್ನಪ್ಪ ಕೂಲಿಯ ತಪ್ಪಿಸಿಲ್ಲ
ವಾರ ತಿಂಗಳು ವರುಷಪೂರ್ತಿ ಬರುವ
ಹಬ್ಬದ ಹರುಷಕ್ಕೆಂದು ಕೂತರೆ ಅವ
ನನ್ನ, ತಂಗಿಯ ಶಾಲೆಯೂ ಕೂತುಬಿಡುತ್ತದೆಂದು
ಅಪ್ಪನಿಗೆ ಕೂಲಿಯೆ ನಿತ್ಯದ ಹಬ್ಬ !!

ಉಗಾದಿ ಬಂತಂತೆ
ಹೊಸತು ಹೊಸತು ತಂತಂತೆ
ಮತ್ತೆ ಹೋಯ್ತಂತೆ
ಶುಭಾಷಯವೋ.... ನಿಮಗೆ
ಮತ್ತು ನಿಮ್ಮ ಮನೆಯವರಿಗೆಲ್ಲ !!

ಏನೂ ಬರದ ಏನೂ ತರದ
ಉಗಾದಿಗೆಂದು ಎಲ್ಲ ಹಾಡುವಾಗ
ಅಕ್ಕನ ಜೀತ ಅಬ್ಬೆಯ ಸಾಲ
ಅಪ್ಪನ ಬೆವರು ನನ್ನ ಕಂಗೆಡಿಸಿ
ನನ್ನಂತರಂಗ ಅಳುತ್ತದೆ
ನಾನು ಚೀರುತ್ತೇನೆ......
'ಓ ಉಗಾದಿಯೆ ನೀ ಬರಬೇಡ
ನನ್ನಕ್ಕನಿಂದ ಜೀತ ಮಾಡಿಸಬೇಡ
ನನ್ನಬ್ಬೆಯಿಂದ ಸಾಲ ಮಾಡಿಸಬೇಡ
ನನ್ನಪ್ಪನ ಚರ್ಮ ಸುಲಿಯಬೇಡ'

• ಸಂತೋಷ ಗುಡ್ಡಿಯಂಗಡಿ



…ತ್ಯಾನಂದನ ಪರವಾಗಿ ಮುಸಿ ಗಿರಾಕಿ ನಿಂತವ್ರುನಂತೆ!

…ಮೀಣ ಬ್ಯಾಂಕ್ ಚುನಾವಣೆಯಲ್ಲಿ ಓಟು … ಹೋಗಿದ್ದ ಜುಮ್ಮಿ ಅದೇ ಡ್ರಸ್ಸಿನಲ್ಲಿ ಹೋಟೆಲಿಗೆ … ಅವಳನ್ನು ನೋಡಿದ ಸೀರ,

"…ರಿಗೋಟು ಮಾಡಿದ್ದೆ ಜುಮ್ಮಿ?" ಎಂದ.

"…ಂತಣ್ಣನಿಗೆ ಮಾಡಿದೆ ಅತ್ಲಗೆ" ಎಂದಳು.

"…ತ್ಲಗೆ ಅಂದ್ರೇನರ್ಥ?"

…ಮು ಲು ಸೀ ಮೆ
…ಟ್ಟೆಪುರಾಣ
▶ ಬಿ. ಚಂದ್ರೇಗೌಡ

"…ವ್ರುನು ನಮ್ಮೂರಿಗೆ ನ್ಯಾಯಬೆಲೆ ಅಂಗಡಿ ತತ್ತನಂತೆ, …ಕಿದೆ."

"…ವ್ರುನು ನ್ಯಾಯಬೆಲೆ ಅಂಗಡಿ ತರಕ್ಕೆ, ಜಡ್‌ಪಿ …ಕಲ್ಲ" ಎಂದ ಉಗ್ರಿ.

"…ತ್‌ಪಿ ಅಂಗಾಡಿದ್ರು ಪುಕ್ಕಲ ಕಣೊ. ಜನ …, ಸಾಕು ಮನೆ ಬುಟ್ಟೆ ಈಚೆಗೆ ಬರದಿಲ್ಲ" …ಸೀರ.

"…ಯಾಕ್ಲ ಅವುನಂಗಾಡ್ತನೆ?" ಎಂದ ಕಾಳಮಾವ.

"…ಯಾಕೆ ಅಂದ್ರೆ ಏನೇಳನಪ್ಪ, ಜುಜುಬಿ ಜಿಲ್ಲಾ …ತ್ತ ಯಲಕ್ಷನ್ನಲ್ಲಿ ಗೆದಿದ್ಕೆ ಈಶ್ವರಪ್ಪನಂಗಾಡ್ತನೆ. … ಯಮ್ಮೆಲ್ಲೆ ಆಗಿದ್ರೆ ಗತಿಯೇನು ಅಂತ ನಾನು … ಯೋಚನೆ ಮಾಡಿದ್ದಿನಿ."

"… ಶಿವ್ರುರಾಮನೂ ಇವುನಂಗೆ ಆಡತಿದ್ದ, ಈಗ …ರೇದ್ನೋ ಏನೊ."

"…ತ್ತಗೂ ಹೋಗಿಲ್ಲ, ಮಯಿಳಾ ಮೀಸಲಾತಿ …ದ್ರೆ ಹೆಂಡತಿ ನಿಲ್ಲಿಸಿ ಗೆಲ್ಲಿಸಿಕೊಂಡು ತಿರಗ … ತರ ಆಡೇ ಆಡ್ತನೆ."

"…ವುನೆದ್ದಿ ಜನವ ತುಂಬಾ ಬಾವುಣಕೆ ಮಾಡ್ತಳೆ …ೕ. ಯಲ್ಲಾರು ಸುದಕ್ಕ ಸುದಕ್ಕ ಅಂತ ಭಾರಿ …ಾಡ್ತವೆ. ಅವುಳೇನಾರ ನಿಂತ್ರೆ ಗೆದ್ದೇ ಬುಡ್ತಳೆ. …ರ ಗೆದ್ರೆ ಶಿವ್ರುರಾಮುಂದೇ ರಾಜ್ಯಬಾರ."

"…ವುನು ಸುದಕ್ಕನ ನಿಲ್ಲಿಸಿದ್ರೆ ಚಲುವರಾಯಸ್ವಾಮಿ …ನಿಲ್ಲುಸ್ತನೆ ಕಂಡ್ರ" ಎಂದಳು ಜುಮ್ಮಿ.

"…ಲಕ್ಷ್ಮಿಗೆ ಸುಧನ ಜನಬಳಕೆಯಿಲ್ಲ ಕಣೆ. …ದ್ರು ಕತ್ತಿನ ತುಂಬಾ ಉಳೇ ಹಗ್ಗ ಸುತ್ತಿಗಂಡಂಗೆ …ಕಂಡು ತಿರಗಕ್ಕೇ ಸರಿ."

"…ಕೊಂತರ ಚಿನ್ನಿದ್ದತೇನ್ಲ?"

… ಕಣೆ. ಮದ್ದಿಗೆ ಬಡಸ್ತನದಲ್ಲಿ ಇದ್ದವಲವೆ. …ಿ ಶ್ರೀಮಂತಿಕೆ ಬಂದುಬುಡ್ತವ್ವ. ಆದ ಜನಗಳಿಗೆ …ಗೇ? ಅದ್ಕೆ ಚಿನ್ನ ಹೇರಿಕೊಂಡು ತಿರುಗ್ತವೆ. ಅವುಳು ಶಿವರಾಮನೆದ್ದಿ ಎದ್ರಿಗೆ ಏಗದು ಕಷ್ಟಬುಡು."

"ಅಂತೂ ಮುಂದೆ ಸ್ತ್ರೀಯಲಯಾಳ ಬರದದೆ ಅನ್ನು" ಎಂದ ಸೀರ.

"ಊ ಮತ್ತೆ. ಈಟುದಿನ ನಿಮ್ಮದು ನ್ಯಡಿಲಿಲವೆ. ಅಂಗೆ ಇನ್ನು ಮುಂದೆ ಅವುರದು ನ್ಯಡಿತದೆ ಬುಡು."

"ಸರಿಯಪ್ಪ, ಲೋಕಸಭೆವಳಗೆ ಇಂದಿ ಮಾತಾಡ್ಯರಂತೆ. ಇವುಕೆಲ್ಲಿ ಹಿಂದಿ ಬಂದತೂ? ಇಂಗ್ಲಿಸಂತೂ ಇವುರಿಗೆ ಈ ಜಲುಮದಲ್ಲಿ ಬರದಿಲ್ಲ."

"ಈಗ ಹಾಲಿ ಇರೊ ಲೋಕಸಭೆ ಸದಸ್ಯರಿಗೆ ಹಿಂದೀನು ಬತ್ತದೆ, ಇಂಗ್ಲಿಸೂ ಗೊತ್ತು, ಆದ್ರು ಅವುರೇನು ಕಡದು ಕಟ್ಟೆ ಹಾಕಿದ್ದರೂ?"

"ಅದೂ ನಿಜವೆ ಬುಡು" ಎಂದ ಸೀರ.

"ಅಂಗೇನಾರ ಮೀಸ್ಲಾತಿ ಬಂದ್ರೆ ಓದಿರೊ ಹೆಂಗಸ್ರೇ ಬಂದು ನಿಂತಗತ್ತರೆ ಬುಡು ಮಾವ. ರೈತ ಸಂಘದ ಸುನಂದಕ್ಕ ಯಾರಿಗೆ ಕಡಿಮ್ಯಾಗ್ಯವುಳೆ? ಅವುಳಂಥೋರು, ಶೋಭಾ ಕರಿಂದ್ಲಾಜೆ ಅಂಥೋರು ಅವುರೆ ಬುಡು" ಎಂದಳು ಜುಮ್ಮಿ.

"ಅವುಳ್ಯತ್ತಗೋದ್ಲೂ?" ಎಂದ ಸೀರ.

"ಯತ್ತಗೂ ಹೋಗಿಲ್ಲ, ಇಲ್ಲೆ ಅವುಳೆ ಕಣಮಾವ. ಪಾಪ ಚೆನ್ನಾಗಿ ಕ್ಯಲಸ ಮಾಡತಿದ್ಲು. ಅಂಥೋಳ ಮಂತ್ರಿಗಿರಿಯಿಂದ ತಗದದ್ದು ಸರಿಯಲ್ಲ ಅಂತ ಒಬ್ಬನೇ ಒಬ್ಬ ಬಿಜೆಪಿಯೋನು ಬಾಯಿ ಬುಡ್ಲಿಲವಲ್ಲಾ, ಇನ್ಯಂಥಾ ಜನಿದ್ದರವುರು."

"ನೋಡು ಮತ್ತೆ" ಎನ್ನುತ್ತ ವಾಟಿಸ್ಸೆ ಬಂದ.

"ಇಲ್ಲೆ ಇರಕ್ಕ ಬತ್ತಿನಿ ಅಂದೋನು ಯತ್ತಗೋದ್ಲ ನೀನು" ಎಂದಳು ಜುಮ್ಮಿ.

"ಕೆಲುವು ಕ್ಯಾಂಡೇಟಗೆ ಕನ್‌ಸಿಸನ್ ರೇಟಲ್ಲಿ ಪಟಾಕಿ ಕೊಡುಸಬೇಕಾಗಿತ್ತು ಕಣಕ್ಕ, ಅದ್ಕೆ ಹೋಗಿದ್ದೆ."

"ಪಟಾಕಿ ಕೊಡಿಸು. ಅಕಸ್ಮಾತ್ ಹುಲ್ಲುಮ್ಯದೆ ಕತ್ತಿಗಂಡ್ರೆ ಊರೆ ಉರುದೋಗ್ಲಿ ಅಂತವ ಇಂತ ಕ್ಯಲಸನ್ಲ ಮಾಡದು ನೀನು" ಎಂದ ಕಾಳಮಾವ.

"ಈಗಿನ ಪಟಾಕಿ ಈರುಳ್ಳಿ ಪಟಾಕಿ ಇದ್ದಂಗೆ ದೊಡಪ್ಪ. ಹುಲ್ಲುಮೆದೆ ಹುಡಿಕ್ಯಂಡು ಹೋಗದಿಲ್ಲ, ಹತ್ತಿಸಿದ ಜಾಗದಲ್ಲಿ ಪಟಾರಂತ ಸುಮ್ಮನಾಯ್ತವೆ. ಅದ್ಕೆ ಕೊಡಿಸಿ ಬಂದೆ."

"ಕಮಿಷನ್ ಸಿಗತೇನೊ?"

"ಕಮಿಷನ್ ಇಲ್ದೆ ಯವಾರ ಮಾಡಕ್ಯಾಯ್ತದೇನೊ ಉಗ್ರಿ. ದುಡ್ಡು ತಗಂಡು ಓಟು ಮಾಡನ ಅಂದ್ರೆ ಮನಸು ಬರದಿಲ್ಲ, ಅದ್ಕೆ ಬೇರೆ ತರ ಕಮಾಯ್ ಮಾಡಿಕಂಡು ಬಂದೆ. ಆದ್ರು ದ್ವಡಪ್ಪ ಈ ಚುನಾವಣೆಗಳಿಂದ ಇನ್ನು ಮುಂದೆ ನಮ್ಮಂಥೋರು ಎಂದೂ ಯಲಕ್ಷನ್ನಿಗೆ ನಿಲ್ಲಕ್ಯಾಗದಿಲ್ಲ."

"ಯಾಕ್ ನಿಲ್ಲಕ್ಯಾಗದಿಲ್ಲ?"

"ಒಂದು ಜುಜುಬಿ ಪಿಎಲ್‌ಡಿ ಬ್ಯಾಂಕ್ ಯಲಕ್ಷನಿಗೆ ಸೊಸೈಟಿ ಮೆಂಬರ್‌ಗೆ ಮೂರುವರೆ ಲಕ್ಷ ಖರ್ಚು ಮಾಡಿದ್ರಲ್ಲಾ, ಬಡವುರು ಮಾಡಕ್ಯಾಯ್ತದ ದ್ವಡಪ್ಪಾ?"


"ಬಡವಾ ನೀನು ಮಡಗಿದಂಗಿರು ಅಂತ ಬಡುವುರಿಗ್ಯಾಕ್ಲ ಯಲಕ್ಷನ್ನು."

"ಬರಿ ಓಟು ಮಾಡಿಕಂಡಿರು ಅಂತಿಯಾ?"

"ಊ ಮತ್ತೆ, ನವುಲಾಡ್ತು ಅಂತ ಕ್ಯಂಬೂತ ಪುಕ್ಕ ತರಕಂಡ್ರೆ ನವ್ವಾಗದು ಯಾರಿಗ್ಲಾ. ತರಕಂಡಿದ್ಕೆ ಅಲವೆ ನವ್ವಾಗದು" ಎಂದ ಕಾಳಮಾವ.

"ಬಡುವುರು ಯಲಕ್ಷನ್ನಿಗೆ ನಿಂತು ಶ್ರೀಮಂತರಾದದ್ದ ತೋರ್ಲೆ?" ಎಂದ ಉಗ್ರಿ.

"ಒಂದು ಸವುರ ಉದಾರಣೆ ಸಿಗತವೆ ಕಣೊ ಉಗ್ರಿ. ಆದ್ರೆ ಆ ಕಾಲ ಹೋಯ್ತು. ಅಂತ ಬಿಜೆಪಿ ಜನಗಳೇ ಬರೀ ನೀರು ಕುಡಕಂಡು ಯಲಕ್ಷನ್ ಮಾಡತಿದ್ರು. ಆದ್ರಿವತ್ತು ಬರಿಯಾನಿ ತಿನ್ನಕಂಡು ಯಲಕ್ಷನ್ ಮಾಡಂಗಾಗ್ಯವುರೆ."



"ಅವುರ ಸುದ್ದಿ ಬುಡೊ. ಅವುರಷ್ಟು ಅರ್ಜೆಂಟಾಗಿ ಕೆಟ್ಟೋರು ಯಾರೂ ಇಲ್ಲ, ಕೆಡತಿನಿ ಅಂತ ಇಂಗೂ ಕೆಟ್ಟರೆ."

"ಊ ಕಣೊ ಉಗ್ರಿ. ಅಂಗೇ ನೋಡಿದ್ರೆ ಅವುರೇನು ಕೆಟ್ಟಿಲ್ಲ ಕಣೊ. ಅರುರು ಇದ್ದಿದ್ದೇ ಅಂಗೆ. ಇಲ್ಲ ಅಂದ್ರೆ ನಿತ್ಯಾನಂದ ಸ್ವಾಮಿ ವಳ್ಳೋನು, ಧರ್ಮವಂತ, ಆಚಾರಿವಂತ, ದೇವರಂಥೋನು ಅಂತ ಹೇಳತಿದ್ರೆ?" ಎಂದ ವಾಟಿಸ್ಸೆ.

"ನಿತ್ಯಾನಂದ ಸತ್ಯವಂತ ಅಂತ ಯಾರ್ಲ ಹೇಳಿದೋರು?" ಎಂದಳು ಜುಮ್ಮಿ.

"ನಿತ್ಯಾನಂದ ಅಂದ್ಯಾರ್ಲ?" ಎಂದ ಕಾಳಮಾವ.

"ಓ ನಮ್ಮ ದ್ವಡಪ್ಪನಿಗೆ ಡೀಟೈಲ್ಸೇ ಗೊತ್ತಿಲ್ಲ, ದ್ವಡಪ್ಪಾ ನಿತ್ಯಾನಂದ ಸ್ವಾಮಿ ಅಂತ ತಮುಳನಾಡಿಂದ ಒಬ್ಬ ವ್ಯಭಿಚಾರಿ ಬಂದು ಬಿಡದಿ ಅತ್ರ ಗುಡ್ಯಾಯ್ಕಂಡು ಧ್ಯಾನ ಹೇಳಿಕೊಡ್ತಿನಿ ಬನ್ನಿ ಅಂತ ಕರದ. ಇತ್ತೀಚೆಗೆ ಬೆಂಗಳೂರಿನ ಜಾತ್ರೆವಳಗೆ ಸಮಾಧಾನಿಲ್ದೆ ಹಾಕ್ಯಾಡೋರು ಸಂಖ್ಯೆ ಜಾಸ್ತಿಯಾಗ್ಯದೆ. ಅಂಥೋರ್ಯಲ್ಲ ನಿತ್ಯಾನಂದನತ್ರಕೆ ಬಂದು ಆನಂದ ಪಡಕೊಂಡು ಹೋಗೋರಂತೆ. ಈ ನನಮಗ ಚನ್ನಾಗಿರೋ ಹೆಂಗುಸುರು ಬಂದ್ರೆ ಅಂಗಾತ ಮನಿಗಿಸಿ ನವನಾರ ಸಂದನ್ಯಲ್ಲ ಸವುರಿ ನೋಡಿ ಇದೇ ಆನಂದ ಅಂದು ಕಳುಸ್ತಿದ್ದನಂತೆ ದ್ವಡಪ್ಪಾ."

"ಅಂತ ಸೂಳೆಮಕ್ಕಳ ಕಂಬಕ್ಕಟ್ಟಿ ಹ್ವಡಿಬೇಕು ಕಂಡ್ಯ."

"ಕಂಬಕ್ಕಟ್ಟಿ ವಡಿಯದಕ್ಕಿಂತ ಬ್ಯಾರೆ ಕ್ಯಲಸನೆ ಮಾಡ್ಯವುರೆ ದ್ವಡಪ್ಪ, ಆ ನನಮಗ ಯಾವಳೊ ಸಿನಿಮಾ ನಟಿ ಜ್ವತೆ ಹಾವಿನಾಟ ಆಡಿದ ವಿಡಿಯೋ ತಗದು, ಟಿವಿಗೆ ಕೊಟ್ಟವುನೆ. ಈಗ ಸ್ವಾಮಿ ತಲೆಮರಿಸಿಗಂಡು ನಾನು ಮಾಡಿದ್ದು ತಪ್ಪಾಗ್ಯದೆ. ಅದ್ಕೆ ಗಂಗಾನದೀಲಿ ಮುಳುಗಾಕಿ ಶುದ್ಧವಾಗಿ ಬತ್ತಿನಿ. ಯಾರೂ ಬೇಜಾರಾಗದಂಗೆ ನಾನು ಬರದ್ನೆ ಕಾಯ್ತಾಯಿರಿ, ಅಂದವುನೆ."

"ತಗಳಪ್ಪ, ತಿರಗ ಬಂದನೇ?"

"ಊ ಚೆಗಪ್ಪ, ರೆಡ್ಯಾಂಡಲಿ ಸಿಕಿರೋ ಆ ಸ್ವಾಮಿ ಪರ ಯಾರು ನಿಂತವ್ರುರೆ ಗೊತ್ತೆ? ಬೆಂಗಳೂರಲ್ಲಿ ಮುಕ್ಕೆ ಮುಸಿ ಬಳಿಸಿಗಂಡನಲ್ಲ, ಅವನೂ ಈ ನಿತ್ಯಾನಂದನ ಪರ ನಿಂತಿದಾನೆ!"

"ಅವುನ ಪರ ನಿಂತವುನೆ ಅಂದ್ರೆ ಇವುನು ಅಂಥೊನೆ ಇರಬೇಕು!"

"ಈಗಂಗೆ ಆಯ್ತು, ನಿತ್ಯಾನಂದ ಸ್ವಾಮಿ ಯಂಥೋನು ಅಂತ ಇಡೀ ದೇಸಕೆ ಗೊತ್ತಿರುವಾಗ ಈ ಮುತಾಲಿಕ್ನ ಅನ್ನೊ ಮುಸಿಗಿರಾಕಿ ನಿತ್ಯಾನಂದ ಸಭ್ಯಸ್ಥ ಏನೂ ತಿಳದೋನು, ಬಾಯಿಗೆ ಬೆಳ್ಳಾಕಿದ್ರೆ ಚೀಪತನೆ ಅನ್ಸಂಗೆ ಮಾತಾಡ್ತನಲ್ಲ, ಈ ಬಿಜೆಪಿ ಮುಂದೆವುಕೆ ಏನಾಗ್ಯದೆ ಅಂತ."

"ಬಿಜೆಪಿಗಳು ನಿತ್ಯಾನಂದನ ಮ್ಯಾಲೆ ಕ್ರಮ ತಗಂಡ್ರೆ ಏನಾಯ್ತದೆ?" ಗೊತ್ತೆ?


"ಏನಾಯ್ತದೊ ಉಗ್ರಿ?"

"ನಿತ್ಯಾನಂದನಂಗಿರೊ ಬಿಜೆಪಿ ಸ್ವಾಮಿಗಳು ಬೇಜಾರಾಯ್ತರೆ. ಅದ್ಕೆ ಬಿಜೆಪಿ ಸರ್ಕಾರ ಮುತಾಲಿಕ್‌ನಂಥೋರ ಬಾಯಲಿ, ಸ್ವಾಮಿ ಅಂಥೋನಲ್ಲ, ಯಾರೊ ಹೆಣ್ಣುಮಗಳು ಯಣ್ಣೆ ಮಜ್ಜನ ಮಾಡುಸ್ತಿದ್ಲು. ಅದು ಭಕ್ತಿನೆ ಹೊರತು ಸೆಕ್ಸಲ್ಲ. ಸೆಕ್ಸಾಗಿದ್ರೆ ಆ ಹೆಣ್ಣುಕ್ಯಳಗೆ, ಸ್ವಾಮಿ ಮೇಲಿರಬೇಕಾಗಿತ್ತು ಅಂತ ವಾದ ಮಾಡ್ತಾ ಅವುರೆ. ಇದಕೇನೇಳ್ತೀ?"

"ದಿಸೀಸ್ ರಿಯಲಿ ವಂಡ್ರುಫುಲ್!" ●

…ರಲೇಬೇಕು

…ಲ್ಲೊ, ದೂರದೂರಿನ ಹೆಣ್ಣುಮಗಳು; ನನ್ನ ಅಭಿಮಾನಿ. ಈ ಚಿಕ್ಕಮರಿಗಳಿಗೆ ಇಲ್ಲದ ವ್ಯಾಮೋಹ. ಸಿಕ್ಕಾಗಲೆಲ್ಲ 'ನಮ್ಮ ಊರಿಗೆ ಬನ್ನಿ' ಅನ್ನುತ್ತಿದ್ದಳು. 'ಆಗಲಿ' ಅನ್ನುತ್ತಿದ್ದೆ. ಒಮ್ಮೆ …ತಂದೆತಾಯಿಯರನ್ನೆಲ್ಲ ಕರೆದುಕೊಂಡು ಬಂದು 'ದೀಪಾವಳಿಗೆ ಬರಲೇಬೇಕು' ಎಂದು ಕೂತಳು. ನಾನು ನಕ್ಕು 'ಅದಕ್ಕೇನಂತೆ!' ಎಂದೆ. ಬರಲಿಕ್ಕಿಲ್ಲ ಎಂಬುದು ಅವಳಿಗೂ ಗೊತ್ತಿತ್ತು. …ತಿಯಿಂದ ಟೀಕಿಸಿ ಬರೆದಾಗ ಚಿಕ್ಕ ಕಾಗದ ಬರೆದೆ, "ಮರಿ, ನಿನಗೆ ಗೊತ್ತು, ನೀನೇ ಬಿಡುವಾದಾಗ ಬಂದು ಹರಟಿ ಹೋದರೆ ಒಳ್ಳೆಯದು. ಯಾಕೆ ಗೊತ್ತಾ, ನೀನು ನನಗಿಂತ …, ಚುರುಕು ಮತ್ತು portable..."




'ನಾಚ್'

"ಇಂಗ್ಲಿಷ್ ಕಾದಂಬರಿಕಾರ ಇ.ಎಂ. ಫಾರ್‌ಸ್ಟರ್‌ಗೆ ಭಾರತ ಕಂಡರೆ ತುಂಬ ಇಷ್ಟ; ಆತ ತನ್ನ ಮೂವತ್ತಾಲ್ಕನೇ ವಯಸ್ಸಿನಲ್ಲಿ ಭಾರತದಲ್ಲಿದ್ದ, ಗೆಳೆಯ ಮಸೂದ್ ಜೊತೆಗೆ ಇದ್ದಾಗ ಇಲ್ಲಿಯ ಬದುಕಿನ ರೀತಿ, ಕರೆಯದೆ ಬರುವ ಅತಿಥಿಗಳು, ಗದ್ದಲ-ಎಲ್ಲದರ ಬಗ್ಗೆ ತನ್ನ ತಾಯಿಗೆ, ಗೆಳೆಯರಿಗೆ ಪತ್ರ ಬರೆಯುತ್ತಿದ್ದ. ಇಲ್ಲೇ ಸದಾ ಇರುವ ನಮಗೆ ಇದೆಲ್ಲ ಕಾಣಿಸುವುದೇ ಅಪರೂಪಕ್ಕೆ ಎಂಬ ಕಾರಣಕ್ಕೆ ಇದನ್ನು ಬರೆಯುತ್ತಿದ್ದೇನೆ. ಒಂದು ದಿನ ಗೆಳೆಯ ಮಸೂದ್, "ನಿನಗಾಗಿ ಒಂದು ನಾಚ್ (ನೃತ್ಯ) ಏರ್ಪಡಿಸಿದ್ದೇವೆ!" ಎಂದು ಸಾರಿದ; ಫಾರ್‌ಸ್ಟರ್‌ಗೆ ಕುತೂಹಲ ಮತ್ತು ಆತಂಕ. ಹಾಗೆಂದರೇನೆಂದೇ ಆವನಿಗೆ ಗೊತ್ತಿರಲಿಲ್ಲ, ಅದು ಹೇಗಿರಬಹುದು ಎಂದು ಕಲ್ಪಿಸಿಕೊಳ್ಳುತ್ತಲೇ ಗೆಳೆಯರೊಂದಿಗೆ ಹೊರಟ. ದಾರಿಯಲ್ಲಿ ಮಸೂದ್ ತನ್ನ ಗೆಳೆಯ ಮಹಮದ್ ಅಲಿ ಎಂಬುವನನ್ನು ಕರೆದುಕೊಂಡು ಹೋಗಲು ತೀರ್ಮಾನಿಸಿದ. ಆಗ (ಈಗಿನಂತೆಯೇ) ಬಾಲ್ಕನ್ ಯುದ್ಧ ಆಗುತ್ತಿತ್ತು; ಬಲ್ಗೇರಿಯಾ ದೇಶ ಟರ್ಕಿ ದೇಶವನ್ನು ಸದೆಬಡಿಯತೊಡಗಿತ್ತು, ಮಸೂದ್ ಗೆಳೆಯ ಮಹಮದ್ ಅಲಿ ಟರ್ಕಿಗಾಗುತ್ತಿರುವ ಸುದ್ದಿ ಕೇಳಿ ಅಳುತ್ತಾ ಆತ್ಮಹತ್ಯೆ …ಳ್ಳುವುದಾಗಿ ಹೇಳಿ ಕೂತಿದ್ದ. "ನಾವು ವಿಶ್ವವಿದ್ಯಾನಿಲಯ ಆರಂಭಿಸಲು ಶೇಖರಿಸಿರುವ ಹಣವನ್ನೆಲ್ಲ ಟರ್ಕಿಗೆ ಕಳಿಸಿಬಿಡೋಣ" ಎಂದು ಮಹಮದ್ ಅಲಿ ಬಡಬಡಿಸಿದ. … ಅವನಿಗೆ ಸಮಾಧಾನ ಮಾಡಿ ನಾಚ್‌ಗೆ ಅವನನ್ನು ಕರೆದ. ಮಹಮದ್ ಅಲಿ 'ಬರುವುದಿಲ್ಲ' ಅಂದ. ಮಸೂದ್ ಬಿಡಬೇಕಲ್ಲ, ಗೆಳೆಯರೆಲ್ಲ ಸೇರಿ ಅವನನ್ನು ಅನಾಮತ್ತಾಗಿ …ಡು ಹೋದರು. ಮಹಮದ್ ಅಲಿ ನಾಚ್ ಕಡಿಮೆ ಆನಂದಿಸಲಿಲ್ಲ, ನೃತ್ಯ ಮಧ್ಯರಾತ್ರಿಯಾದರೂ ನಡೆಯುತ್ತಾ ಹೋಯಿತು. ತೂಕಡಿಸತೊಡಗಿದ ಫಾರ್‌ಸ್ಟರ್‌ಗೆ ಆಗ ಗೊತ್ತಾಯಿತು. … ಏರ್ಪಾಟಾದ ನಾಚ್ ತಾನು ನೋಡುತ್ತಿರುವವರೆಗೆ ನಡೆಯುತ್ತಲೇ ಇರುತ್ತದೆ ಎಂದು. ಆದ್ದರಿಂದ ಅಲ್ಲಿಂದ ಎದ್ದು ಹೊರಟ. …ಯು ವಿಶೇಷವೆಂದರೆ ನಾಚ್‌ಗೆ ಬರುವುದಿಲ್ಲವೆಂದಿದ್ದ ಮಹಮದ್ ಅಲಿ ರಾತ್ರಿ ನಡೆದದ್ದರ ಬಗ್ಗೆ ಖುಷಿಯಲ್ಲಿ ಯಾರಿಗೋ ಹೇಳಿಬಿಟ್ಟಿದ್ದ- ಮರುದಿನದ ವೃತ್ತಪತ್ರಿಕೆಗಳಲ್ಲಿ "ಟರ್ಕಿ …ಯುತ್ತಿರುವಾಗ ಅಲಿ ಸೋದರರ ನಾಚ್ ಸಡಗರ!" ಎಂದು ಬಂದುಬಿಟ್ಟಿತ್ತು.

…ಕಾದಂಬರಿಕಾರನೊಬ್ಬ ಹೇಗೆ ಅನುಭವ ಹಿಡಿಯುತ್ತಾನೆ ಎಂಬುದನ್ನು ಇಂಥ ನೂರಾರು ಘಟನೆಗಳು ತೋರುತ್ತವೆ. ಇವೆಲ್ಲ ಫಾರ್‌ಸ್ಟರ್ ಕುರಿತ ಜೀವನಚರಿತ್ರೆಯಲ್ಲಿ ಬರುತ್ತದೆ.


-ಆಗಸ್ಟ್ 4, 1993



ಮರೆಯುವ ಮುನ್ನ
▶ ಪಿ. ಲಂಕೇಶ್

ಕರ್ನಾಟಕ ಪೊಲೀಸರ ಎದೆ ಬಗೆದರೆ...

ಅಣಕ



▶ ಎಚ್.ಎಲ್. ಕೇಶವಮೂರ್ತಿ

ಎದೆ ಸೀಳಿದರೆ ಮೂರಕ್ಷರ ಇಲ್ಲ ಅನ್ನುವ ಮಾತನ್ನು ಕೇಳೇ ಇರುತ್ತೀರಿ. ಹೀಗೆ ಉಗಿಸಿಕೊಂಡೋನು ಭಕ್ತನೂ ಆಗಿದ್ದರೆ ಅಕ್ಷರ ಕಾಣದೆ ಇರಬಹುದು. ಆದರೆ ಆರಾಧ್ಯದೈವ ಸಾಕ್ಷಾತ್ಕಾರವಾಗುವುದಂತೂ ಖಚಿತ.

ಪುರಾಣದ ಹನುಮಂತನನ್ನೇ ನೋಡಿ. ಅವನಿಗೆ ಅಕ್ಷರ ಜ್ಞಾನ ಇತ್ತೋ ಇಲ್ವೋ ಗೊತ್ತಿಲ್ಲ. ಆದರೆ ಅವನು ಶ್ರೀರಾಮನ ಬಂಟ ಅಲ್ಲವಾ. ಎದೆ ಬಗೆದರೆ ಅಲ್ಲಿ ಆ ಶ್ರೀರಾಮದೇವರ ಪತ್ನಿ ಅನುಜ ಸಹಿತನಾಗಿ ದೃಗೋಚರಿ ಸುವುದು ಸಹಜ ತಾನೆ. ಭಕ್ತ ಸೇವೆ ಮಾಡುವುದು ಅವನ ಕರ್ಮ; ದೈವ ಸೇವೆ ಸ್ವೀಕರಿಸಿ ಅನುಗ್ರಹಿಸುವುದು ಧರ್ಮ.

ಈ ಹನುಮಂತನಿಗೆ ತನ್ನ ಶಕ್ತಿಯ ಅರಿವೇ ಇರಲಿಲ್ಲವಂತೆ. ಸಮುದ್ರ ಹಾರೋಕೆ ಸಾಧ್ಯಾನೆ ಇಲ್ಲ ಅಂತ ಕೂತಿತ್ತಂತೆ ಮಂಗ. ಅಯ್ಯಾ ನೀನು ಸಾಮಾನ್ಯ ಮಂಗ ಅಲ್ಲ ಅಸಾಮಾನ್ಯ ಮಂಗನಾಗಿದ್ದೀಯ. ಆ ದಯಾಮಯನಾದ ಶ್ರೀರಾಮನ ನೆಚ್ಚಿನ ಬಂಟ ನೀನಾಗಿದ್ದೀಯ. ನಿನ್ನಲ್ಲಿ ಅಗಾಧಶಕ್ತಿ ಇದೆ ಎಂದು ಅವರಿವರು ತಿದಿ ಒತ್ತಿದ ಮೇಲೆ ಪೌರುಷದ ಅರಿವಾಯಿತಂತೆ. 'ಜೈಶ್ರೀರಾಮ' ಅಂತ ಹೇಳ್ತಾ ಸಮುದ್ರ ಲಂಘಿಸಿದನಂತೆ.

ಈ ಪುರಾಣನೆಲ್ಲ ಯಾಕೆ ಇಲ್ಲಿ ಒದರ್‍ತಿದ್ದೀನಿ ಅಂದ್ರೆ, ಗೃಹಮಂತ್ರಿ ವಿ.ಎಸ್. ಆಚಾರ್ಯರು ಕರ್ನಾಟಕ ಪೊಲೀಸರು ಅಂದ್ರೆ ಹನುಮಂತ ಇದ್ದಂಗೆ. ಅವರ ಅಗಾಧಶಕ್ತಿಯ ಅರಿವು ಅವರಿಗಿಲ್ಲ. ಅದನ್ನು ಅರಿವು ಮಾಡಿಕೊಟ್ಟರೆ ಏನನ್ನು ಬೇಕಾದರೂ ಸಾಧಿಸಬಲ್ಲರು ಎಂದು ಹೇಳಿದ್ದಾರೆ. ನಿಜ ಇರಬೇಕು. ಯಾಕೆಂದರೆ ಅದು ಮಂತ್ರಿಗಳ ಬಾಯಿಂದ ಹೊರಬಿದ್ದ ಆಣಿಮುತ್ತುಗಳಲ್ಲವಾ. ಪುರಾಣದ ಹನುಮಂತ ರಾಮನ ಬಂಟ. ಅವನ ಎದೆಯಲ್ಲಿ ಶ್ರೀರಾಮ ಸ್ಥಾನ ಪಡೆದಿದ್ದ, ಹನುಮಂತನೂ ತನ್ನ ಆರಾಧ್ಯದೈವದ ಎದೆಯಲ್ಲಿ ಇಂತಹದ್ದೇ ಸ್ಥಾನ ಪಡೆದಿದ್ದನು ಎಂಬುದನ್ನು ಕುರಿತು ಯಾವ ಪುರಾಣದಲ್ಲಿಯೂ ಉಲ್ಲೇಖ ಇದ್ದ ಹಾಗಿಲ್ಲ. ಇದು ಸಹಜವೇ ಅನ್ನಿ. ಒಬ್ಬ ಸೇವೆ ಮಾಡಲೆಂದೇ ಜನಿಸಿದವನು, ಮತ್ತೊಬ್ಬ ಸೇವೆ ಮಾಡಿಸಿಕೊಳ್ಳಲೆಂದೇ ಅವತಾರವೆತ್ತಿದವನು! ಅದು ಹಾಗಿರಲಿ. ಆಚಾರ್ಯರು ಕರ್ನಾಟಕ ಪೊಲೀಸರನ್ನು ಹನುಮಂತನಿಗೆ ಹೋಲಿಸಿದಾರಲ್ಲ... ಈ ಪೊಲೀಸರ ಎದೆ ಬಗೆದರೆ ಏನು ಕಾಣಿಸಬಹುದು?

'ಸಂಘ ಪರಿವಾರ' ಅಂತಾರೆ.... ಹೌದಾ ಆಚಾರ್ಯರೆ....

ದ(ದೌ)ಲತ್ ಕಿ ಬೇಟಿ

ಕೆಲಸ ಹಗುರ ಅನ್ನುವುದಕ್ಕೆ 'ಹೂವೆತ್ತಿದಂಗೆ' ಅನ್ನುವ ಮಾತಿದೆ. ಕೆಲವೊಮ್ಮೆ ಹೂವು ಭಾರವೂ ಆಗಬಹುದು. ಕುವೆಂಪು ಅವರು 'ಶ್ರೀರಾಮಾಯಣ ದರ್ಶನಂ' ಮಹಾಕಾವ್ಯ ಬರೆದ ಹೊಸದು. ಅಭಿಮಾನಿಗಳು, ಕಾವ್ಯ ಪ್ರಿಯರು, ಕವಿಗೆ ಆಳುದ್ದದ ಬೃಹತ್ ಮೈಸೂರ ಮಲ್ಲಿಗೆ ಹಾರ ಹಾಕಿದನಂತರ ಮಹಾಕವಿ ಉದ್ಗರಿಸಿದರಂತೆ- 'ಹೂವೂ ಭಾರ ಎನ್ನುವುದು ಇವತ್ತು ತಿಳೀತು.'

ಕೆಂಗಲ್ ಹನುಮಂತಯ್ಯನವರು ಸಭೆಸಮಾರಂಭಗಳಲ್ಲಿ ಹಾರ ಹಾಕಿಸಿಕೊಳ್ಳುತ್ತಿರಲಿಲ್ಲ. ಹಾರವನ್ನು ಅಲ್ಲೇ ಹರಾಜಿಗೆ ಹಾಕುತ್ತಿದ್ದರು. ಬಂದ ಹಣವನ್ನು ಸ್ವಾತಂತ್ರ್ಯ ಯೋಧರ ನಿಧಿಗೆ ಅರ್ಪಿಸುತ್ತಿದ್ದರು.

ಹೂವಿನ ಹಾರ ಹಾಕಿಸಿಕೊಳ್ಳೋದು, ನಂತರ ಅದನ್ನು ಹರಾಜಾಕೋದು ರೇಜಿಗೆ ಕೆಲಸ ಎಂದೋ ಏನೋ ದಲಿತ್ ಕೀ ಬೇಟಿ ಮಾಯಾವತಿಯವರಿಗೆ ಅವರ ಅಭಿಮಾನಿಗಳು ನೇರವಾಗಿ ನೋಟಿನ ಹಾರ ಹಾಕುವ ನೂತನ ಸಂಪ್ರದಾಯ ಹುಟ್ಟು ಹಾಕಿದ್ದಾರೆ.

ಹಾಗೆ ನೋಡಿದರೆ ನೋಟು ಹಾಕುವ ಸಂಪ್ರದಾಯದ ಆವಿಷ್ಕಾರ ನಮ್ಮದು ಎಂದು ರಾಜಕಾರಣಿ ಗಳು ಹೆಮ್ಮೆಪಡಬೇಕಾಗಿಲ್ಲವೇನೋ. ಇದು ಅನಾದಿಕಾಲ ದಿಂದಲೂ ನಡೆದುಬಂದಿದೆ. ಹಳ್ಳಿಗಳ ಬಯಲು ನಾಟಕಗಳಲ್ಲಿ ಇದನ್ನು ಕಾಣಬಹುದು. ನಾಟಕದ ನಡುವೆಯೇ ಇದು ನಡೆಯುತ್ತದೆ. 'ಶ್ರೀಯುತರ ಅಭಿನಯವನ್ನು ಮೆಚ್ಚಿ... ಅವರು ಹತ್ತು ರೂಪಾಯಿ ಇನಾಮು ನೀಡಲಿದ್ದಾರೆ' ಎಂಬುದಾಗಿ ಘೋಷಣೆ ಆಗುತ್ತದೆ. ಇನಾಮು ನೀಡುವವರು ಘನಗಂಭೀರವಾಗಿ ವೇದಿಕೆ ಏರುತ್ತಾರೆ. ನಿರ್ದಿಷ್ಟ ವ್ಯಕ್ತಿಯ ಎದೆಯ ಮೇಲಿನ ಪೋಷಾಕಿಗೆ ನೋಟನ್ನು ಪಿನ್ನಿನಿಂದ ಸಿಗಿಸಲಾಗುತ್ತದೆ. ನಾಟಕ ಅಂತ್ಯವಾಗುವವರೆವಿಗೂ ರೂಪಾಯಿ ನೋಟು ಹೆಮ್ಮೆ ಯಿಂದ ಅವನನ್ನು ಅಲಂಕರಿಸಿಯೇ ಇರುತ್ತದೆ. ನೋಟು ಹಾಕಿಸಿಕೊಳ್ಳುವುದು ಪ್ರತಿಷ್ಠೆಯ ಪ್ರಶ್ನೆ ಎಂದೇ ಪರಿಗಣಿಸಲಾಗು ತ್ತದೆ. ಬಾಂಧವ್ಯ ಬೆಸೆಯುವ ದೃಷ್ಟಿಯಿಂದ ಇದು ಪ್ರಯೋಜನಕಾರಿ. ಕೆಲವೊಮ್ಮೆ ಯಾರಿಗೂ ತಿಳಿಯದಂತೆ ನಟರೇ ಮೊದಲು ಹಣ ನೀಡಿ ರಂಗಮರ್ಯಾದೆ ಪಡೆಯುವುದೂ ಉಂಟು! ಹೇಗಾದರೂ ಇರಲಿ. ಬಹುಪಾಲು ನಟರಿಗೆ ನೋಟು ಮರ್ಯಾದೆ ನಡೆದೇ ನಡೆಯುತ್ತದೆ. ಮಾಯಾವತಿಯವರ ನೋಟಿನ ಹಾರ ಮರ್ಯಾದೆ ಇದರ ಇಂಪ್ರೂವ್ಡ್ ವರ್ಷನ್ ಅನ್ನಬಹುದು.

ಇರಲಿ. ಇತ್ತೀಚೆಗೆ ಬಿಎಸ್‌ಪಿಯ 25 ನೇ ಹುಟ್ಟು ಹಬ್ಬದ ಆಚರಣೆ ನಡೀತಲ್ಲ ಅದ್ದೂರಿಯಾಗಿ. ಅಲ್ಲಿ ಮಾಯಾವತಿಗೆ ಒಂದು ಸಾವಿರ ರೂಪಾಯಿ ಮುಖ ಬೆಲೆಯ ನೋಟುಗಳ ಹಾರ ಹಾಕಿದರು. ಅದರ ಒಟ್ಟು ಬೆಲೆ ಹದಿನೈದು ಕೋಟಿಗೂ ಮಿಗಿಲು ಅನ್ನುವ ಅನುಮಾನ ಇದೆ.

ಈ ಹಾರ ಹಾಕಿದವರು ಯಾರು?


ಖಚಿತವಾಗಿಲ್ಲ, ಕರ್ನಾಟಕ ಮೂಲದ ಹಾರ ಇದು ಎನ್ನಲಾಗುತ್ತಿದೆ. ಇಲ್ಲ, ಇಲ್ಲ ನಮಗೂ ಅದಕ್ಕೂ ಯಾವ ಸಂಬಂಧವೂ ಇಲ್ಲ. ಬೆಹನ್‌ರ ಕೃಪಾದೃಷ್ಟಿಗೆ ಒಳಗಾಗಬೇಕೂಂತ ಯಾರೋ ಮಾಡಿರೋದು ಇದು ಅಂತಾನೂ ಕೇಳಿಬರುತ್ತಿದೆ. ಕಾರ್ಯಕರ್ತರ ಕೊಡುಗೆ ಇದು ಎಂದು ಹೇಳುತ್ತ ಅವರ ಕಡೆ ಕೈ ತೋರಿಸುವವರೂ ಇದ್ದಾರೆ. ಯಾರಾದರೂ ಆಗಲಿ ಹಾರ ಹಾಕಿದ್ದಂತೂ ಸತ್ಯ.

ಈಕೆ ದಲಿತ್ ಕಿ ಬೇಟಿ ಅಲ್ಲ, ದೌಲತ್ ಕಿ ಬೇಟಿ ಎಂದು ಕೆಲವು ವಿರೋಧಿಗಳು ಕೂಗಾಡಿದರೆ ಮತ್ತೆ ಕೆಲವರು ಸಂಪತ್ತಿನ ಅಸಹ್ಯ ಪ್ರದರ್ಶನ ಇದು ಎಂದು ಹಾರಾಡ್ತಿದ್ದಾರೆ. ಬಿಎಸ್‌ಪಿಯವರೇನು ಸುಮ್ಮನೇ ಕುಂತಿಲ್ಲ, 'ತುಲಾಭಾರ' ಅನ್ನೋ ಹೆಸರಲ್ಲಿ ಚಿನ್ನದ ಗಟ್ಟಿ, ಬೆಳ್ಳಿ ಬಾರು, ರೂಪಾಯಿ ನೋಟು ಹಾಕಿ ನಾಯಕರನ್ನು ತೂಗುತ್ತಿದ್ದಿರಲ್ಲ ಆವಾಗ ಅದು ಸಂಪತ್ತಿನ ಅಸಹ್ಯ ಪ್ರದರ್ಶನ ಅನ್ನಿಸಲಿಲ್ಲವೆ ಅಂತ ತಿರುಗೇಟು ನೀಡುತ್ತಿದ್ದಾರೆ.

ಇದು ರಾಜಕಾರಣಿಗಳ ಜಟಾಪಟಿ ಆಯಿತು. ಆರ್‌ಬಿಐ ಅಂತ ಇದೆಯಲ್ಲ ಪಾಪ ಅದಕ್ಕೆ ನೋಟುಗಳ ದುರ್ಬಳಕೆ ಕುರಿತು ಶಿಕ್ಷೆ ವಿಧಿಸುವ ಅಧಿಕಾರವೇ ಇಲ್ಲವಂತೆ! ಆದಾಯ ತೆರಿಗೆಯವರು ಇಷ್ಟೊಂದು ಹಣದ ಮೂಲ ಯಾವುದು ಅನ್ನುವುದರ ಹುಡುಕಾಟದಲ್ಲಿದ್ದಾರಂತೆ.

ಇಷ್ಟೆಲ್ಲ ಹಗರಣ ಆದನಂತರ ಬಿಎಸ್‌ಪಿ ಕಾರ್ಯಕರ್ತರೇನು ಮಾಡಿದರು?

ಮಾಯಾವತಿಯವರಿಗೆ ಹದಿನೆಂಟು ಲಕ್ಷ



ರೂಪಾಯಿಯ ನೋಟುಗಳ ಹಾರ ಹಾಕಿದರು! ಅಷ್ಟೇ ಅಲ್ಲ, ಇನ್ನು ಮುಂದೆ ತಮ್ಮ ನಾಯಕಿಗೆ ಎಲ್ಲಾ ಸಮಾರಂಭಗಳಲ್ಲೂ ನೋಟುಗಳ ಹಾರವನ್ನೇ ಹಾಕುತ್ತಾರಂತೆ!

ಏನು ಕಿತ್ಕೊಳ್ತೀರಿ ಅವರತ್ರ.....

ಬೇಕಾದ್ದ ಮಾಡ್ಕಳಿ ಪಾಸ್ ಮಾತ್ರ ಕೊಡಿ

ವಿಧಾನ ಪರಿಷತ್ತು ಅಂದರೆ ಹುಡುಗಾಟವಾ. ಅಲ್ಲಿರೋ ಜನಾನು ಅಷ್ಟೇಯ. ಭಾರೀ ಬುದ್ಧಿವಂತರು. ಅದ್ಯೇ ಅದ ಮೇಲ್ಮನೆ, ಜಾಣದ ಮನೆ ಅಂತೆಲ್ಲ ಯಾವುಯಾವುದೋ ಹೆಸರಿನಲ್ಲಿ ಕರೀತಾರೆ. ಇಂತಹವರೆಲ್ಲ ಇರೋವಾಗ ಎಂತಹ ಸಣ್ಣ ವಿಷಯ ಆದರೂ ಬುದ್ಧಿ... ಅದರ ತಳ ಬುಡ ಶೋಧಿಸಿ ಬಿಸಾಕ್ತಾರೆ. ಮೊನ್ನೆಮೊ... ವಿಜಯಮಲ್ಯ ಹುಡುಗ್ರಿಗೂ ಪ್ರೀತಿ ಜಿಂಟಾ ಹುಡುಗ್ರಿಗೂ ಪಂದ್ಯ ನಡೀತಲ್ಲ, ಅದೇ ಐಪಿಎಲ್ ಲೀಗ್ T20 ಕ್ರಿಕೆಟ್ ಪಂದ್ಯ, ಕ್ರಿಕೆಟ್ಟು ಅಂದರೆ ಇಂಡಿಯಾದವ... ರಿಲಿಜಿಯನ್ ಅನ್ನೋ ಸಂಗತಿ ಜಗತ್ತಿಗೇ ಗೊತ್ತಿ... ದೇಯ.... ಇದನ್ನು ಬಿಟ್ಹಾರಾ.... ಅವತ್ತು ಏನಾಯಿತು ಅಂದರೆ ಈ ಲೀಗ್‌ನ ನಡೆಸ್ತಿರೋರು ವಿಧಾನ ಪರಿಷತ್ತು ಅಂದರೆ ಏನು, ಅಲ್ಲಿರೋರು ಎಂತೆಂತೋರು ಅನ್ನೋದ ತಿಳ್ಕಂಡು ಅವರ ಘನತೆ ಗೌರವಕ್ಕೆ ಚ್ಯುತಿ ಬರದಂಗೆ ನಡ್ಕೊಬಾರ್‍ದ. ಉಹೂಂ. ಹಂಗೆನಡ್ಕೊಳ್ಳಲಿಲ್ಲ, ದುಡ್ಡಿನ ಧಿಮಾಕು ಹಂಗೆ ಮಾಡಿಸಿರ್‍ಬೇಕು. ಒಬ್ಬೊಬ್ಬರಿಗೆ ಒಂದೊಂದು ಪಾಸು ಕಳಿಸಿದ್ದರು ನಿಜ. ಯಾಚಕರವರಿಗೆ ಬಿಸಾಕೋ ರೀತಿ ಕನಿಷ್ಠ ಮೌಲ್ಯದ ಪಾಸ್ ಕಳಿಸಿಬಿಡೋದೆ! ಇವರಿಗೇನು 49 ರೂಪಾಯಿ ಬಿಸಾಕೋಕೆ ಯೋಗ್ಯತೆ ಇರಲಿಲ್ಲವಾ. ಕೆಲವರು ಹಿಂಗೇ ಮಾಡಿರಬಹುದು. ಆದ್ರೆ ವಿಷಯ. ಇವರೇನು ಪಾಸ ಕಳ್ಸಿ ಅಂತ ಯಾಚನೆ ಮಾಡಿರಲಿಲ್ಲ, ಅವರೇ ಕಳ್ಸಿದ್ರು. ಕಳುಸ್ತಾ ಕಳುಸ್ತಾ ಅತ್ಯಂತ ಕಡಿಮೆ ದರ್ಜೆಯಾ ಪಾಸು ಕಳಿಸಿ ಅವಮಾನ ಮಾಡಿದ್ರಲ್ಲಾ....

ಪರಿಷತ್ತು ಪಕ್ಷಾತೀತವಾಗಿ ನಿಗಿನಿಗಿ ಕೆಂಡದ ಮೇಲೆ ನಿಂತಿತು.

ಸಾರಿತು: 'ನಮಗೆ ಅವಮಾನ ಆಗಿದೆ.'

ಅಲ್ವೆ ಮತ್ತೆ, ಅಧಿಕಾರಿಗಳಿಗೆ ಮೇಲ್ದರ್ಜೆಯ ಪಾಸು, ಇವರಿಗೆ ಕನಿಷ್ಠ ದರ್ಜೆಯ ಪಾಸು!

'ಇದರ ವಿವರ ಬೇಕು' ಪರಿಷತ್ತಿನ ಒಕ್ಕೊರಲ ದನಿ.

ಇದೊಂದೇ ಅಪರಾಧವೇ ಸಂಬಂಧಿಸಿದ್ದು?

ಇಲ್ಲ, ಬಹಿರಂಗವಾಗಿಯೇ ಮದ್ಯ ಸರಬರಾಜಾಗಿತ್ತು!

ಇದೇನು ಕಡಿಮೆ ಅಪರಾಧವೆ? ಯುವಕಯುವತಿಯರು ಪಬ್‌ನಲ್ಲಿ ಕುಡಿದರೆ ನೈತಿಕ ಪೊಲೀಸು ಅವರ ಹುಟ್ಟಿದ ದಿನ ಕಾಣಿಸುತ್ತೆ, ಅಂತಹದ್ದರಲ್ಲಿ ಸಾರ್ವಜನಿಕವಾಗಿ ಹೀಗೆ ಮಾಡಿದರೆ ಸರಿಯೆ?

'ತನಿಖೆ ಆಗಬೇಕು'

ಇಲಾಖೆಯ ತನಿಖೆಯೇ ಸಾಕೋ ಅಥವಾ ಪೊಲೀಸು, ಸಿಒಡಿ, ಸಿಬಿಐ ತನಿಖೆಯೇ ನಡೆಯಬೇಕೋ ಎಂಬುದು ತಿಳಿದುಬಂದಿಲ್ಲ.

ಸರ್ಕಾರ ಮಧ್ಯ ಪ್ರವೇಶಿಸಿತು.

'ಇದನ್ನ ಕುರಿತ ವಿವರಗಳನ್ನು ಸದನದ ಮುಂದೆ ಇಡಲಾಗುತ್ತದೆ' ಎಂದು ಕ್ರೀಡಾ ಸಚಿವರು ತಿಪ್ಪೆ ಸಾರಿಸಿದರು.

ಸದಸ್ಯರಿಗೆ ಸಮಾಧಾನ ಆಯಿತು!

ಇಲ್ಲಿಗೆ ಅಂತ್ಯಗೊಂಡಿತೆ?

ಇಲ್ಲ. ಕೆಲವು ಸದಸ್ಯರು ಐಪಿಎಲ್ ಸಂಘಟಕರಿಗೆ ಸಲಹೆ ನೀಡಿದರು.

ಏನು ಸಲಹೆ ಅದು?

'ಪಾಸು ಕೊಡುವುದಾದರೆ ಒಂದು ಪಾಸು ಸಾಲದು ಕನಿಷ್ಠ ಎರಡಾದರೂ ನೀಡಿ!'

ಅಲ್ವೆ ಮತ್ತೆ... ಅವರ ಘನತೆಗೆ ಅಷ್ಟಾದರೂ ಬೇಡವೆ.

ನೀತಿ: ವಿಧಾನ ಪರಿಷತ್ತಿನ ಸದಸ್ಯರಿಗೆ ಎರಡು ಮೇಲ್ದರ್ಜೆಯ ಪಾಸು ನೀಡಿ ಕಾನೂನು ಉಲ್ಲಂಘಿಸಿ!

ಶಿಯಾಗಳಿಂದ ಇತರ ಮುಸ್ಲಿಮರು ಕಲಿಯುವುದು ಬಹಳಷ್ಟಿದೆ

ಒಂದು ಪತ್ರ

ಮೂಲಭೂತವಾದಿಯಾಗದೇ ಮುಸ್ಲಿಮರ ನಾಯಕನಾಗಲು ಸಾಧ್ಯವಿಲ್ಲ ಎಂಬ ಸರ್ವೇಸಾಧಾರಣ ಅಭಿಪ್ರಾಯ ಎಲ್ಲೆಡೆ ಗಟ್ಟಿಗೊಳ್ಳುತ್ತಿರುವಂತೆ ಕಾಣುತ್ತಿದೆ. ಕೊನೆಗೆ ಪ್ರಜಾವಾಣಿ ದಿನಪತ್ರಿಕೆಯ ಅಂಕಣಕಾರ ದಿನೇಶ್ ಅಮೀನ್ ಮಟ್ಟು ಸಹ ಇದನ್ನು ಅನುಮೋದಿಸುವ ಧೈರ್ಯ ತೋರಿದರು. (ಲಂಕೇಶ್ 24.3.10 ನೋ ಕಾಮೆಂಟ್ಸ್) ಎಂದೂ ನಮಾಜ್ ಮಾಡದಿದ್ದ ಪಾಶ್ಚಾತ್ಯ ಮನೋವೃತ್ತಿಯ ಬ್ಯಾರಿಸ್ಟರ್ ಜಿನ್ನಾ ಸಹ ಕೊನೆಗೆ ಮುಸ್ಲಿಂ ನಾಯಕನಾಗಿ ಬೆಳೆಯಲು ಮೂಲಭೂತವಾದಿಯಾಗಿ ಪರಿವರ್ತನೆಗೊಳ್ಳಲೇ ಬೇಕಾಯಿತು ಎಂಬುದನ್ನು ಉದಾಹರಿಸಲಾಗುತ್ತಿದೆ.

ಆದರೆ ಮುಸ್ಲಿಮರಲ್ಲೇ ಇರುವ ಒಂದು ಉಪ-ಪಂಗಡವಾದ ಶಿಯಾ ಜನಾಂಗಕ್ಕೆ ಇದು ಬಿಲ್‌ಕುಲ್ ಅನ್ವಯವಲ್ಲವೆಂದು ಬಹುತೇಕರು ಗಮನಿಸಿಲ್ಲ. ಶಿಯಾ ನಾಯಕರಲ್ಲಿ ಹೆಚ್ಚಿನವರು ಉದಾರವಾದಿಗಳೇ. ಮತಾಂತರದ ವಿಷಯದಲ್ಲಿ ಹಿಂದೂತ್ವವಾದಿಗಳು ಎಲ್ಲಾ ಕ್ರೈಸ್ತ ಪಂಗಡಗಳನ್ನು ಒಂದೇ ತಕ್ಕಡಿಯಲ್ಲಿ ತಪ್ಪಾಗಿ ತೂಗಿದಂತೆ, ಮೂಲಭೂತವಾದದ ವಿಷಯದಲ್ಲಿ ಮುಸ್ಲಿಮರ ಎಲ್ಲಾ ಪಂಗಡಗಳನ್ನು ಒಂದೇ ತಕ್ಕಡಿಯಲ್ಲಿ ತಪ್ಪಾಗಿ ತೂಗಲಾಗುತ್ತಿದೆ.

ಸಾಮಾನ್ಯವಾಗಿ ಶಿಯಾಗಳೆಲ್ಲಾ ಉದಾರವಾದಿಗಳು ಹಾಗೂ ಅವರದ್ದು ಪ್ರಗತಿಪರ ದೃಷ್ಟಿಕೋನವುಳ್ಳ ಸಮಾಜ. ಶಿಯಾ ಮಹಿಳೆಯರಲ್ಲಿ 90% ಜನ ಬುರ್ಖಾ ಧರಿಸುವುದಿಲ್ಲ, ಶಿಯಾ ಮಹಿಳೆಯರಲ್ಲಿ 100% ಸಾಕ್ಷರತೆ ಇದೆ. ಒಟ್ಟು ಭಾರತೀಯ ಮುಸ್ಲಿಮರಲ್ಲಿ ಶಿಯಾ ಪಂಗಡದವರು 15% ಗೂ ಕಡಿಮೆ ಇದ್ದರೂ ಒಟ್ಟು ಮುಸ್ಲಿಂ ಬುದ್ಧಿ ಜೀವಿಗಳಲ್ಲಿ /ಸಾಹಿತಿಗಳಲ್ಲಿ/ ಕಲಾವಿದರಲ್ಲಿ/ವಿಜ್ಞಾನಿಗಳಲ್ಲಿ 70% ಗೂ ಮಿಕ್ಕಿ ಶಿಯಾ ಪಂಗಡದವರೇ ಇರುವುದು ಅವರ ಉನ್ನತ ಬೌದ್ಧಿಕ ಮಟ್ಟ ಸೂಚಿಸುತ್ತದೆ. ಶಿಯಾಗಳು ಕೇಂದ್ರಿತವಾಗಿರುವುದು ಲಖನೌ, ಕಾನ್‌ಪುರ್, ಅಲಿಘಡ್, ಆಗ್ರಾ ಹಾಗೂ ದಕ್ಷಿಣ ಪ್ರದೇಶದಲ್ಲಿ ಹೈದ್ರಾಬಾದ್‌ನಲ್ಲಿ. ನಾನು ಬ್ಯಾಂಕು ನೌಕರಿ ನಿಮಿತ್ತ ಹಲವು ವರ್ಷ ಉತ್ತರ ಪ್ರದೇಶದಲ್ಲಿ ಹಾಗೂ ನಾಲ್ಕು ವರ್ಷ ಹೈದರಾಬಾದ್‌ನಲ್ಲಿ ಇದ್ದಾಗ ನನಗೆ ಅನೇಕ ಶಿಯಾ ಮಿತ್ರರಿದ್ದರು. ಆಗ ಅವರ ವಿಶಾಲ ಮನೋಭಾವ ಹಾಗೂ ಹಿಂದೂ-ಕ್ರೈಸ್ತರೊಂದಿಗೆ ಸುಲಭವಾಗಿ ಹೊಂದಿಕೊಳ್ಳುವ ಅವರ ಸ್ವಭಾವ ಗಮನಿಸಿದ್ದೆ.

ಟೆನ್ನಿಸ್ ಆಟಗಾರ್ತಿ ಸಾನಿಯಾ ಮಿರ್ಜಾ ಸಹಾ ಶಿಯಾ ಪಂಗಡದವಳು. ಅವಳು ಗಿಡ್ಡ ಡ್ರೆಸ್ ಹಾಕಿಕೊಂಡು ಆಡುವುದನ್ನು ವಿರೋಧಿಸಿ ಹೈದ್ರಾಬಾದ್‌ನ ಸುನ್ನಿ ಮುಲ್ಲಾಗಳು ಅವಳ ವಿರುದ್ಧ ಫತ್ವಾ ಹೊರಡಿಸಿದ್ದರೆ, ಮರುದಿನವೇ ಶಿಯಾ ಧಾರ್ಮಿಕ ಮುಖಂಡರು ಪ್ರತಿ-ಫತ್ವಾ ಹೊರಡಿಸಿ-ಸಾನಿಯಾ ಶಿಯಾ ಪಂಗಡದವಳಾದುದರಿಂದ ಅವಳಿಗೆ ಸುನ್ನಿಗಳ ಫತ್ವಾ ಲಾಗೂ ಇಲ್ಲ, ಅವಳ ತನಗೆ ಆಟಕ್ಕೆ ಅನುಕೂಲವಾಗುವಂತಹ ಡ್ರೆಸ್ ಹಾಕಿಕೊಂಡು ಆಡಬಾರದು ಎಂದು ಅನುಮೋದಿಸಿದ್ದರು. ಇದು ಶಿಯಾ ಸಮಾಜದಲ್ಲಿ ಮಹಿಳೆಯರಿಗಿರುವ ಮುಕ್ತ ವಾತಾವರಣಕ್ಕೆ ಸಾಕ್ಷಿ.

ಲಖನೌನ ಮುಸ್ಲಿಮರಲ್ಲಿ 60% ಶಿಯಾ ಪಂಗಡದವರು. ಹಾಗಾಗಿ ಈವರೆಗೆ ಲಖನೌನಲ್ಲಿ ಒಮ್ಮೆಯೂ ಹಿಂದೂ-ಮುಸ್ಲಿಂ ಗಲಭೆಯಾಗಿಲ್ಲ (ಅಲ್ಲಿ ಶಿಯಾ-ಸುನ್ನಿ ಗಲಾಟೆ ಹಲವು ಸಾರಿ ಆಗಿದೆ). ಇದು ಹಿಂದೂ ಹಾಗೂ ಶಿಯಾಗಳ ನಡುವೆ ಇರುವ ನಂಬಿಕೆ ಹಾಗೂ ಸೌಹಾರ್ದತೆಗೆ ಸಾಕ್ಷಿ.

ಸಾಮಾನ್ಯವಾಗಿ ಶಿಯಾಗಳು ವದಂತಿ ಕೇಳಿ ದೊಂಬಿಗಿಳಿಯುವುದಿಲ್ಲ. ಅವರೆ... ಎಲ್ಲರೂ ವಿದ್ಯಾವಂತರಾಗಿರುವುದರಿಂದ ತುಂಬಾ ಸಂಯಮದ ವರ್ತನೆ ಅವರದ್ದು. ಶಿಯಾ ಸಮಾಜದಲ್ಲಿ ಕ್ರಿಮಿನಲ್‌ಗಳು ಅಪರೂಪ.

ಶಿಯಾಗಳದ್ದು ಮೂಲತಃ ಭಾರತೀಯ ರಕ್ತವಲ್ಲ. ಅವರು ಮೊಘಲರ ಆಡಳಿತದ ಕಾಲದಲ್ಲಿ ಇರಾನ್ ಹಾಗೂ ಇರಾಕ್‌ನಿಂದ ವಲಸೆ ಬಂದ ಸುಸಂಸ್ಕೃತ ಜನಾಂಗ. ಮೂಲತಃ ಉರ್ದು ಭಾಷೆಯ ಹುಟ್ಟು ಮತ್ತು ಬೆಳವಣಿಗೆ... ಶಿಯಾಗಳ ಕಾಣಿಕೆ ದೊಡ್ಡದು. ಹಾಗಾಗಿ ಉರ್ದುವಿನಲ್ಲಿ ಪರ್ಶಿಯನ್ ಶಬ್ದಗಳು ಹೇರಳವಾಗಿದೆ. ಮೊಘಲರು ಸುನ್ನಿಗಳಾಗಿದ್ದರೂ ಅವರ ರಾಜ್ಯದ ದೈನಂದಿನ ಆಡಳಿತ ನೋಡಿಕೊಳ್ಳುತ್ತಿದ್ದ ಅಧಿಕಾರಿಗಳಲ್ಲಿ ಹೆಚ್ಚಿನವರು ಶಿಯಾಗಳಾಗಿದ್ದರು. ಸುನ್ನಿಗಳು ಯೋಧರಾಗಿದ್ದರೆ ಶಿಯಾಗಳು ರಾಜ್ಯಶಾಸ್ತ್ರ ಪರಂಪರಾಗತರಾಗಿದ್ದರು. ಹಾಗಾಗಿ ಮೊಘಲರ ಆಡಳಿತ ಭಾಷೆ ಪರ್ಶಿಯನ್ ಆಗಿತ್ತು. ಜಗತ್ಪ್ರಸಿದ್ಧ ತಾಜ್ ಮಹಲ್‌ನ ಮೂಲ ಆರ್ಕಿಟೆಕ್ಟ್‌ಗಳೂ ಶಿಯಾಗಳಾಗಿದ್ದರು. ಹಾಗಾಗಿ ಪರ್ಶಿಯನ್ ವಸ್ತು ಶಿಲ್ಪದ ಛಾಯೆ ತಾಜ್‌ನಲ್ಲಿ ಗಾಢವಾಗಿದೆ.

ಹಿಂದೆಲ್ಲಾ ಭಾರತೀಯ ಹಿಂದೂ ಕಟ್ಟೋಣಗಳಲ್ಲಿ "ಕಮಾನುಗಳು" ಇರುತ್ತಿರಲಿಲ್ಲ, ಭಾರತೀಯರಿಗೆ "ಕಮಾನು" ಕಟ್ಟುವುದನ್ನು ಕಲಿಸಿದವರು ಇದೇ ಪರ್ಶಿಯಾದಿಂದ ಬಂದ ಶಿಯಾ ಶಿಲ್ಪಿಗಳು. ಭಾರತೀಯ ಶಿಯಾಗಳ ಮುಖಚರ್ಯೆ ಹೆಚ್ಚಾಗಿ ಮುಂಬೈ-ಗುಜರಾತ್‌ನ ಪಾರ್ಸಿ ಜನಾಂಗದವರನ್ನು ಹೋಲುತ್ತದೆ. ಭಾರತೀಯ ಪಾರ್ಸಿಗಳೂ ಪರ್ಶಿಯಾ ಅರ್ಥಾತ್ ಇರಾನ್‌ನಿಂದಲೇ ಸಮುದ್ರ ಮಾರ್ಗವಾಗಿ ವಲಸೆ ಬಂದು ಗುಜರಾತ್‌ನ ತೀರದ 'ನವಸಾರಿ' ಎಂಬಲ್ಲಿ ಮೊದಲಿಗೆ ನೆಲೆನಿಂತ 'ಅಗ್ನಿ' ಪೂಜಕ-ವಜ್ರದ ವ್ಯಾಪಾರಿಗಳು ತಾನೇ. ಪಾರ್ಸಿಗಳ ಉನ್ನತ ಬೌದ್ಧಿಕ ಮಟ್ಟ ಜಗತ್ತಿಗೆಲ್ಲಾ ಗೊತ್ತಿದೆ. ಶಿಯಾಗಳದ್ದೂ ಅದೇ ಜೀನ್ಸ್. ಶಿಯಾಗಳಿಂದ ಇತರ ಮುಸ್ಲಿಮರು ಕಲಿಯುವುದು ಬಹಳಷ್ಟಿದೆ ಎಂದರೆ ಯಾರ ಅಭಿಮಾನಕ್ಕೂ ಧಕ್ಕೆಯಾಗಲಾರದು ಎಂದು ಭಾವಿಸುತ್ತೇನೆ.

-ಪ್ರವೀಣ್ ಎಸ್. ಶೆಟ್ಟಿ, ಮಂಗಳೂರು


ಕಿಚ್ಚನ ಕಿರಿಕ್!

...ಚ್ಚ ಸುದೀಪ್ ಮತ್ತೊಂದು ಯಡವಟ್ಟು ...ಕೊಂಡಿದ್ದಾರೆ.

...ಮು ಮಿನರ್ವ ಮಿಲ್‌ನ ಒಳಾಂಗಣ. ಸಹಕ...ರು, ಯೂನಿಟ್‌ನವರು ಎಲ್ಲಾ ಸೇರಿ ಸುಮಾರು ...ಂದ ಅರವತ್ತು ಜನ ಅಲ್ಲಿ ಸೇರಿದ್ದರು. ಸ್ವತಃ ... ನಿರ್ದೇಶನದ 'ಕನ್ವರ್‌ಲಾಲ್' ಚಿತ್ರದ ಚಿತ್ರೀಕರಣ ...ಗಿತ್ತು...

...ದೀಪ್ ಬಹಳ ಒತ್ತಡದಲ್ಲೇ ...ಗಲೂ ಕೆಲಸ ಮಾಡುವುದರಿಂದ ...ರುವ ಶೂಟಿಂಗ್ ಸ್ಪಾಟಿಂ...ಗಲೂ ಉದ್ವಿಗ್ನ ವಾತಾವರಣದಿಂದ ...ತ್ತದೆ. ಸುದೀಪ್ ಕೂಡಾ ಸದಾ ...ಆಗೇಇರುತ್ತಾರೆ. ಮೊನ್ನೆ ಕೂಡಾ ... ಆಗಿದೆ. ಶೂಟಿಂಗ್ ನಡುವೆ ...ತೆ ತನ್ನ ಸಹಾಯಕ ಸಾಗರ್‌ನನ್ನು ...ಶೀಟ್‌ಗಾಗಿ ಸುದೀಪ್ ...ದ್ದಾರೆ. ಸಾಗರ್ ಸ್ವಲ್ಪ ...ಯಿಸಿದ್ದಾನೆ... ತಕ್ಷಣ ಸಿಟ್ಟಿಗೆದ್ದ ...ನೆ ಆತನ ಕಪಾಳಕ್ಕೆ ಹೊಡೆದಿದ್ದಾರೆ.

...ಂದ ಸಾಗರ್ ಅಳುತ್ತಾ ಹೋಗಿ ಅಲ್ಲೇ ಇದ್ದ ...ರ ಅಸೋಸಿಯೇಟ್ ಸುರೇಶ್‌ರಾಜ್ ಬಳಿ ...ಂಡಿದ್ದಾನೆ. ಸುದೀಪ್ ನಡೆದುಕೊಂಡ ರೀತಿ ...ಪಗೊಂಡ ಸುರೇಶ್‌ರಾಜ್ ಮತ್ತು ಸುದೀಪ್ ...ಜಸ್ಟ್ ಮಾತ್‌ಮಾತಲ್ಲೇ ಗಲಾಟೆಯಾಗಿದೆ.



ಯಾರೀ ಸುರೇಶ್?

ಈ ಸುರೇಶ್‌ರಾಜ್ ಸುದೀಪ್ ನಿರ್ದೇಶನದ ಎಲ್ಲ ಚಿತ್ರಗಳಿಗೂ ಅಸೋಸಿಯೇಟ್ ಆಗಿ ದುಡಿದಿರುವ ವ್ಯಕ್ತಿ. ಜೊತೆಗೆ ತಾಯಿಯ ಕಡೆಯಿಂದ ನೆಂಟ ಬೇರೆ. ಸುದೀಪ್ ಕಾಲ್‌ಶೀಟ್‌ನಿಂದ ಹಿಡಿದು ಹೆಚ್ಚುಕಮ್ಮಿ ಎಲ್ಲವನ್ನು ನೋಡಿಕೊಳ್ಳುವ ಮನುಷ್ಯ. "ನನ್ನ ಮುಂದಿನ ಚಿತ್ರಕ್ಕೆ ಸುರೇಶಣ್ಣಾನೇ ಡೈರೆಕ್ಟ್ರು" ಎಂದು ಸುದೀಪ್ ಕೂಡ ಆಗೊಮ್ಮೆ ಈಗೊಮ್ಮೆ ಆತನನ್ನು ಮರ ಹತ್ತಿಸುತ್ತಿರುತ್ತಾರೆ.

ಇಂಥ ಸುರೇಶ್‌ರಾಜ್‌ಗೆ 'ಸುದೀಪ್ ತಾನೇ ನಿರ್ದೇಶಿಸುತ್ತಾ ನನಗೆ ನಿರ್ದೇಶನದ ಅವಕಾಶ ಕೊಡುತ್ತಿಲ್ಲವಲ್ಲಾ' ಎಂಬ ಕೊರಗು ಮನಸ್ಸಿನಲ್ಲೇ ಕೊರೆಯುತ್ತಿತ್ತು. ಜೊತೆಗೆ ಪಿ.ಎನ್. ಸತ್ಯಾನನ್ನು ಹೊಸದಾಗಿ ಸುದೀಪ್ ಅಸೋಸಿಯೇಟ್ ಮಾಡಿಕೊಂಡಿರುವುದು ಸಹ ಸುರೇಶನನ್ನು ಅಸಮಾಧಾನಕ್ಕೆ ಈಡುಮಾಡಿದೆ. ಇದೇ ಸಂದರ್ಭದಲ್ಲಿ ತನ್ನ ಕಡೆಯಿಂದ ಬಂದ ಹುಡುಗ ಸಾಗರ್ ಮೇಲೆ ಕಿಚ್ಚ ಕೈ ಮಾಡಿದ್ದನ್ನೇ ನೆಪ ಮಾಡಿಕೊಂಡ ಸುರೇಶ್ 'ನೀನೇನು ಮಹಾನ್ ನಿರ್ದೇಶಕನ ಥರಾ ಆಡ್ತೀಯ...' ಎಂದು ಹೇಳಿ ಮುನಿಸಿಕೊಂಡು ಯೂನಿಟ್‌ನಿಂದ ಹೊರನಡೆದಿದ್ದಾನೆ.

ಕಿಚ್ಚನ ಹುಚ್ಚು...!

ಸುದೀಪ್‌ರ ಕಿರಿಕ್ಕುಗಳೇನೂ ಚಿತ್ರರಂಗಕ್ಕೆ ಹೊಸತಲ್ಲ. ಈತ ನಿರ್ದೇಶಿಸಿದ ಮೊದಲ ಚಿತ್ರ 'ಮೈ ಆಟೋಗ್ರಾಫ್' ಚಿತ್ರದ ಸಂದರ್ಭದಲ್ಲೂ ಇಂಥದೊಂದು ಪ್ರಸಂಗ ನಡೆದಿತ್ತು. ಮೈಸೂರಿನ ಚಿಕ್ಕಳ್ಳಿ ಬಳಿ ಶೂಟಿಂಗ್ ನಡೆಯುತ್ತಿದ್ದಾಗ ಅಲ್ಲಿನ ಸ್ಥಳೀಯರೊಂದಿಗೆ ಕಾರಣವಲ್ಲದ ಕಾರಣಕ್ಕೆ ಗಲಾಟೆ ಮಾಡಿಕೊಂಡಿದ್ದ. ನಂತರ ಅಲ್ಲಿನ ಜನ ಕಿಚ್ಚನ ಸಮೇತ ಇಡೀ ಯೂನಿಟ್ಟಿನವರಿಗೆ ಸಮಾ ಲಾತ ಕೊಟ್ಟು, ನಾಯಕಿ ಮೀನಾಳ ಕಾರಿನ ಗಾಜುಗಳನ್ನು ಪುಡಿಪುಡಿಗೊಳಿಸಿದ್ದರು. ಇದರಿಂದ ಸುದೀಪ್ ಎದ್ನೋ ಬಿದ್ನೋ ಎಂದು ಬೆಂಗಳೂರಿಗೆ ಓಡಿಬಂದಿದ್ದರು.


ಸುದೀಪ್ ತನ್ನ ಗೆಣೇಕಾರರೊಂದಿಗೇ ಜಗಳ ಮಾಡಿಕೊಂಡು ಆಗಾಗ ಸುದ್ದಿಯೆಬ್ಬಿಸುತ್ತಿರುತ್ತಾರೆ. ಯಾವುದೋ ಹಳೇ ಸಾಲದ ವಿಚಾರಕ್ಕೆ ತನ್ನ ಮಾಜಿ ಸ್ನೇಹಿತ ಜಾಕ್ ಮಂಜನೊಂದಿಗೆ ಸುದೀಪ್ ಮಾರಾಮಾರಿ ಜಗಳವಾಡಿಕೊಂಡಿದ್ದರು. ತನ್ನೊಟ್ಟಿಗಿದ್ದ ಪ್ರಶಾಂತ್ ಎಂಬ ಹುಡುಗ ತನ್ನ ಬಗ್ಗೆ ಅದೇನನ್ನೋ ಮಾತಾಡಿದ ಎಂಬ ಕಾರಣಕ್ಕೆ ಆತನ ಮನೆಗೆ ದಾಳಿಯಿಟ್ಟು, ಪ್ರಶಾಂತರ ವಯಸ್ಸಾದ ತಂದೆ-ತಾಯಿ ಸೇರಿದಂತೆ ಮನೆಮಂದಿಯೆಲ್ಲಾ ತನ್ನ ಕಾಲಿಗೆ ಬೀಳುವಂತೆ ಮಾಡಿದ್ದರು...

ಒಟ್ಟಾರೆಯಾಗಿ ಸುದೀಪ್ ತನ್ನೊಟ್ಟಿಗಿರುವ ಯಾರೊಂದಿಗೂ ಹೆಚ್ಚು ದಿನ ಸ್ನೇಹವನ್ನು ಉಳಿಸಿಕೊಳ್ಳುವುದಿಲ್ಲ. ಜಾಕ್ ಮಂಜ, ನಾಯಿ ಚಂದ್ರು, ಪ್ರಶಾಂತ್.. ಹೀಗೆ ಹಗಲೂರಾತ್ರಿ ತನ್ನೊಂದಿಗಿದ್ದ ಬಹಳಷ್ಟು ಜನರೊಂದಿಗೆ ಸುದೀಪ್ ದುಶ್ಮನಿ ಬೆಳೆಸಿಕೊಂಡಿದ್ದಾರೆ. ಸ್ನೇಹ ಮಾಡೋದು, ಆನಂತರ ಕ್ಷುಲ್ಲಕ ಕಾರಣಗಳಿಗಾಗಿ ಅವರನ್ನು ತೊರೆದುಕೊಳ್ಳುವುದು ಕಿಚ್ಚನ ನಿರಂತರ ಕಸುಬಿನಂತಾಗಿಹೋಗಿದೆ.

ಹಾಗೆಂದು ಎಲ್ಲದಕ್ಕೂ ಸುದೀಪ್ ಮಾತ್ರ ಹೊಣೆ ಎಂದೇನೂ ಅಲ್ಲ. ಕೆಲವೊಮ್ಮೆ ಸುದೀಪ್ ನಂಬಿದವರಿಂದಲೇ ಮೋಸ ಹೋದದ್ದೂ ಇದೆ. ನಿರ್ಮಾಪಕ ದಿನೇಶ್ ಗಾಂಧಿ ಸುದೀಪ್‌ರಿಂದ ಸಿನಿಮಾ ಮಾಡಿಸಿಕೊಂಡು, ಕಾಸು ಕೈ ಸೇರುತ್ತಿದ್ದಂತೇ ಒಂದು ರೂಪಾಯಿಯ ಸಂಭಾವನೆಯನ್ನೂ ನೀಡದೇ ಕಿಚ್ಚನಿಗೇ ಕಿಚಾಯಿಸಿದ್ದ.

ಇದೆಲ್ಲ ಏನೇ ಇರಲಿ, ಹೊಟ್ಟೆಪಾಡಿಗಾಗಿ ಸಿನಿಮಾವನ್ನು ಅವಲಂಬಿಸಿರುವ ಕಾರ್ಮಿಕರ ಮೇಲೆ ಕೈಮಾಡುವುದು ಅಕ್ಷಮ್ಯ. ಇತ್ತೀಚೆಗೆ ತಾನೆ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್ ನಟಿ ಅಂದ್ರಿತಾಳ ಕೆನ್ನೆಗೆ ಬಾರಿಸಿ, ಅದು ಊರಗಲ ಊದಿಕೊಂಡಿತ್ತು. ಪರಸ್ಪರ ಮಾನ-ಮರ್ಯಾದೆಗಳು ಬೀದಿ ಪಾಲಾಗಿದ್ದವು. ಇಂಥವನ್ನು ಗಮನಿಸಿಯೂ ದೈಹಿಕ ಬಲಪ್ರಯೋಗ ಮಾಡಲು ಮುಂದಾಗುವ ಸುದೀಪ್‌ರಂಥವರಿಗೆ ಯಾರಾದರೂ ಬುದ್ಧಿ ಹೇಳಬೇಕಿದೆ.

ಯುವ ಪೀಳಿಗೆಗೆ ಆದರ್ಶವಾಗಬಲ್ಲ ಕೆಲವೇ ನಟರಲ್ಲಿ ಸುದೀಪ್ ಕೂಡಾ ಒಬ್ಬರು. ಈತನ ಅತಿರೇಕಗಳೇನೇ ಇದ್ದರೂ ಸುದೀಪ್ ಅಪ್ಪಟ ಪ್ರತಿಭಾವಂತ. ಈಗ ಏಕಕಾಲದಲ್ಲಿ ಕನ್ನಡ ಮತ್ತು ಹಿಂದಿ ಸಿನೆಮಾ ರಂಗದಲ್ಲಿ ಮಿಂಚುತ್ತಿರುವ ಅಪರೂಪದ ಕಲಾವಿದ. ಚಿತ್ರರಂಗದ ಈ ತಲೆಮಾರನ್ನು ಪ್ರತಿನಿಧಿಸಬೇಕಾದ, ಅದನ್ನು ಪೋಷಿಸಬೇಕಾದ ಸುದೀಪ್‌ಗೆ ಇವೆಲ್ಲಾ ತರವೇ? ●



...ಹಿ ಸತ್ಯಾ...

...ಪಿ.ಎನ್. ಸತ್ಯಾ ಎಂಬ ಘನಘೋರ ನಿರ್ದೇಶಕನಿಗೆ ಎಂತಹ ದುರ್ಗತಿ? ...'ಮೆಜೆಸ್ಟಿಕ್' ಎಂಬ ಚಿತ್ರವನ್ನು ನಿರ್ದೇಶಿಸಿ ದರ್ಶನ್‌ನಂತಹ ಹೀರೋ ...ಗೆ ಕಾರಣರಾದವರು ಸತ್ಯಾ. ಕನ್ನಡದ ಬಹುತೇಕ ಯುವ ನಟರೊಂದಿಗೆ ... ಮಾಡಿರುವ ಸತ್ಯಾ ಇತ್ತೀಚೆಗೆ ಶಿವಣ್ಣ ಅಭಿನಯದ 'ಹೊಡಿಮಗ' ... ಕಿಚ್ಚನೇ ಅಭಿನಯಿಸಿದ್ದ 'ಗೂಳಿ' ಚಿತ್ರವನ್ನೂ ನಿರ್ದೇಶಿಸಿದ್ದಾತ. ಇಂಥ ... ಈಗ ಸುದೀಪ್ ಕೈಕೆಳಗೇ ಸಹಾಯಕನಾಗಿ ದುಡಿಯಬೇಕಾದ ಸ್ಥಿತಿ ...ೊದಗಿದೆ.

...ಎಲ್ಲಾ ಅಂದುಕೊಂಡಂತೇ ಆಗಿದ್ದಿದ್ದರೆ ಪಿ.ಎನ್. ಸತ್ಯಾ ನಿರ್ದೇಶನದ ...ನಲ್ಲಿ ಸುದೀಪ್ ನಟಿಸಬೇಕಿತ್ತು. ಆದರೆ ಆ ಚಿತ್ರ ಕೊನೆಕ್ಷಣದಲ್ಲಿ ಡ್ರಾಪ್ ...ದ್ದರಿಂದ ಸತ್ಯಾನೇ ಬಂದು ಸುದೀಪ್‌ನ 'ಕನ್ವರ್‌ಲಾಲ್' ಚಿತ್ರಕ್ಕೆ ಸಹಾಯಕ ...ಶಕನಾಗಿ ನೇಮಕಗೊಳ್ಳುವಂತಾಗಿದೆ. ಕನ್ನಡ ಚಿತ್ರರಂಗದ ಈಗಿನ ದುಃಸ್ಥಿತಿಗೆ ...ಂದು ನಿದರ್ಶನವಷ್ಟೇ.



ಹೊಸಬರ ಸಾಧನೆ ಪ್ರೇಕ್ಷಕ ದಿಲ್‌ದಾರ್ ಆಗಲಿ


... ಆದರೂ ಕನ್ನಡದ ಸಿನಿಮಾಗಳನ್ನು ...ಬಾರದು ಎಂದು ಪ್ರೇಕ್ಷಕರು ಹಠ ...ತಮ್ಮ ಮನೆಯೊಳಗೇ ಪದ್ಮಾಸನ ...ತುಬಿಟ್ಟಂತೆ ಕಾಣುತ್ತಿದೆ.

... ಎರಡೂವರೆ ವರ್ಷಗಳಿಂದ ಚಿತ್ರ...ಂದ ಕೆಲ ಹೊಸಬರು ಸಿನಿಮಾ...ನ್ನಿ ಒಂದಷ್ಟು ಎಕ್ಕುಡಿಸಿದ್ದು ನಿಜ. ... ಹೊಸಬರ ಚಿತ್ರಗಳೆಲ್ಲವೂ ...ಎನ್ನುವುದನ್ನು ಪ್ರೇಕ್ಷಕರು ಮನವರಿಕೆ ...ಬೇಕು.

...ವರ್ಷ ಬಿಡುಗಡೆಯಾದ ಒಂದೆರಡು ಚಿತ್ರಗಳನ್ನೇ ...ಒಂದೆರಡು ತಿಂಗಳ ಹಿಂದೆ ಬಿಡುಗಡೆಯಾದ ...ರಾಜ್ ನಿರ್ದೇಶನದ 'ಶಿಶಿರ' ಚಿತ್ರವನ್ನು ನೋಡಿದ ...ರು 'ಈ ಸಿನಿಮಾ ತುಂಬಾ ಚೆನ್ನಾಗಿದೆ' ಎಂದರು. ...ಳೆದ ತಿಂಗಳಷ್ಟೇ ತೆರೆಗೆ ಬಂದ, ಹಾಸ್ಯ ಚಕ್ರವರ್ತಿ ...ಹರಾಜು ಕುಟುಂಬದವರೇ ಸೇರಿ ತಯಾರಿಸಿದ್ದ ...ಸಿನಿಮಾವನ್ನೂ ವಿಮರ್ಶಕರು ಮೆಚ್ಚಿದ್ದರು.

...ಮಾಧ್ಯಮಗಳು ಈ ಸಿನಿಮಾಗಳ ಬಗ್ಗೆ ಎಷ್ಟೇ ... ಆದ ವರದಿಗಳನ್ನು ನೀಡಿದರೂ ಕಾಸು ಕೊಟ್ಟು ...ಗೆ ಬರುವ ಪ್ರೇಕ್ಷಕ ಪ್ರಭು ಮಾತ್ರ ಯಾವುದಕ್ಕೂ ...ಲಿಲ್ಲ.

...ದಿಲ್ದಾರ' ಸಿನಿಮಾದ್ದೂ ಅದೇ ಕತೆ. ಚಿತ್ರರಂಗದ ... ಇಲ್ಲದ ಅಮರ್ ಎಂಬ 26ರ ತರುಣ ಈ ...ನಿರ್ದೇಶಿಸಿದ್ದಾನೆ. ಕೋಲಾರದ ಯಾವುದೋ ...ಯಿಂದ ಬಂದ ಈ ಯುವಕನ ಮೊದಲ ...ಷ್ಟೇ ಪತ್ರಿಕೆಗಳು ...ಿ. ...ತ್ರ ಬಿಡುಗಡೆಗೆ



ಮುನ್ನವೇ ಎಲ್ಲರಲ್ಲಿ ಕ್ಯೂರಿಯಾಸಿಟಿ ಸೃಷ್ಟಿಸಿತ್ತು. ಅದಕ್ಕೆ ಕಾರಣ ಆ ಚಿತ್ರದ ಪೋಸ್ಟರ್‌ಗಳು. ಮಾಮೂಲಿ ಸಿದ್ಧ ಸೂತ್ರಗಳಿಂದ ಹೊರತಾಗಿದ್ದ ಆ ಪ್ರಚಾರ ಪರಿಕರಗಳೇ 'ಈ ಸಿನಿಮಾ ಡಿಫರೆಂಟಾಗಿರಬಹುದು' ಎಂಬುದನ್ನು ಸಾರುತ್ತಿತ್ತು.


ಆರ್ಥಿಕ ಸಂಕಷ್ಟದ ನಡುವೆಯೂ ಸರಿ ಸುಮಾರು ಎರಡು ವರ್ಷಗಳ ಕಾಲ ತೆಗೆದುಕೊಂಡು ಸಿದ್ಧಗೊಂಡಿರುವ 'ದಿಲ್ದಾರ' ಸಿನೆಮಾದ ಕಥೆ, ಸಂಭಾಷಣೆ ಎಲ್ಲವನ್ನೂ ಅಮರ್ ನಿರ್ವಹಿಸಿದ್ದಾನೆ. ಕಷ್ಟಗಳೇನೇ ಇದ್ದರೂ ಅವು ಸಿನಿಮಾದಲ್ಲಿ ಕಾಣಿಸಿಕೊಂಡಿಲ್ಲ. ಕನ್ನಡಕ್ಕೆ ಹೊಸತಾದ 'ಬ್ಲೀಚ್ ಬೇ ಪಾಸ್' ತಂತ್ರಜ್ಞಾನವನ್ನು ಬಳಸಿ ಈ ಚಿತ್ರವನ್ನು ಶೂಟ್ ಮಾಡಿದ್ದಾರೆ. ಈ ತಂತ್ರಜ್ಞಾನ ಈ ಹಿಂದೆ ಹಾಲಿವುಡ್‌ನಲ್ಲಿ ಮಾತ್ರ ಬಳಕೆಯಾಗಿತ್ತು.

ಚಿತ್ರದ ನಿರ್ದೇಶಕ ಅಮರ್, ಸಂಗೀತ ನಿರ್ದೇಶಕ ಪ್ರವೀಣ್ ಡಿ. ರಾವ್ ಸೇರಿದಂತೆ ಈ ಸಿನಿಮಾಕ್ಕೆ ದುಡಿದ ಯಾವೊಬ್ಬ ಕಲಾವಿದರೂ ತಮ್ಮ ಪಾಲಿನ ಸಂಭಾವನೆಯನ್ನು ಪಡೆಯದೇ 'ಚಿತ್ರರಂಗಕ್ಕೆ ಒಂದು ಸದಭಿರುಚಿಯ ಸಿನಿಮಾವನ್ನು ನೀಡಬೇಕು' ಎಂಬ ಬಯಕೆಯಿಂದ ದುಡಿದಿದ್ದಾರೆ. ಹಾಗಿದ್ದೂ 'ದಿಲ್ದಾರ'ನಿಗೆ ಒಂದೂಮುಕ್ಕಾಲು ಕೋಟಿ ರೂಪಾಯಿ ಖರ್ಚಾಗಿದೆ.

ಕೆಲಸಕ್ಕೆ ಬಾರದ ಕಮರ್ಷಿಯಲ್ ಸಿನಿಮಾಗಳನ್ನು ತಯಾರಿಸಿ ನೋಡುಗರ ಮೆದುಳಿಗೆ ಕೈಹಾಕುವ, ನಿರ್ಮಾಪಕನ್ನು ಬರ್ಬಾದು ಮಾಡುವವರ ನಡುವೆ 'ಸಾಧಿಸಬೇಕು' ಎಂದು ಹೊರಟವರ 'ದಿಲ್ದಾರ'ನ್ನು ಮೆಚ್ಚದಿದ್ದರೆ ಹೇಗೆ?

● ಅರುಣ್






ಎಸ್‌ಎಸ್‌ಎಲ್‌ಸಿ ನನ್ ಮಗನ ಮದುವೆ

ಫಣಿ ರಾಮಚಂದ್ರ ನಿರ್ದೇಶನದ 'ಗೌರಿ ಗಣೇಶ', ವಿಷ್ಣುವರ್ಧನ್ ಅವರ 'ಮುತ್ತಿನ ಹಾರ' ಸೇರಿದಂತೆ ಹಲವಾರು ಚಿತ್ರಗಳಲ್ಲಿ ಚೆಡ್ಡಿ ತೊಟ್ಟು (ಕೆಲವೊಮ್ಮೆ ಅದೂ ಇಲ್ಲದೆ!) ಬಾಲನಟನಾಗಿ ನಟಿಸಿದ್ದ ಮಾಸ್ಟರ್ ಆನಂದ್ ಈಗ ಮದುವೆಯಾಗಿದ್ದಾನೆ!

ಸದ್ಯ ಕಿರುತೆರೆಯ 'ಎಸ್‌ಎಸ್‌ಎಲ್‌ಸಿ ನನ್ ಮಕ್ಳು' ಎಂಬ ಜನಪ್ರಿಯ ಹಾಸ್ಯ ಧಾರಾವಾಹಿಯ ನಿರ್ದೇಶಕನೂ ಆಗಿರುವ ಆನಂದ್ ತನ್ನ ಮನೆಯವರು ನೋಡಿದ ಯಶಸ್ವಿನಿಯನ್ನೇ ಮದುವೆಯಾಗಿದ್ದಾನೆ. ಹೊಸ ದಂಪತಿಗಳಿಗೆ ಶುಭಾಶಯ.

Regd.No.KA/RNP/BGS/2036/2008-10 Posted at : GPO, Bangalore-01. R B P LANKESH, Kannada Weekly Price Rs. 12/-

ಎಸ್ಸೆಮ್ಮೆಸ್‌ನಲ್ಲಿ ಸತ್ತು ಬದುಕಿದ ವಿಜಿ!



Bad News for all Kannada Movie Fans;
Actor Duniya Vijay has taken Poison & died!
Pass this to all his fans.

ಇದ್ದಕ್ಕಿದ್ದಂತೆ ಇಂಥದೊಂದು ಮೆಸೇಜು ಮೊನ್ನೆ ಇಡೀ ಚಿತ್ರರಂಗ ಮತ್ತು ಸಿನಿಮಾ ರಸಿಕರನ್ನು ದಿಗ್ಭ್ರಾಂತರನ್ನಾಗಿಸಿತು. ಮೆಸೇಜಿನ ಈ ಮೊದಲೆರಡು ಸಾಲುಗಳನ್ನು ಓದುತ್ತಿದ್ದಂತೇ ಜನ 'ಕಲ್ಲುಬಂಡೆಯಂಗಿರುವ ವಿಜಿಗೆ ಇದೆಂಥ ದುರ್ಗತಿ ಬಂತಪ್ಪಾ' ಎಂದು ಕುಸಿದು ಕೂತುಬಿಟ್ಟರು. ಮೆಸೇಜಿನಲ್ಲಿ ಮುಂದೆ ಏನಿದೆ ಎಂದು ನೋಡುವ ವ್ಯವಧಾನವೂ ಕೆಲವರಿಗಿರಲಿಲ್ಲ. ಚಿತ್ರರಂಗಕ್ಕೆ ಬಂದು, ಸಣ್ಣಪುಟ್ಟ ಪಾರ್ಟ್ ಮಾಡಿಕೊಂಡು, ನಂತರ 'ದುನಿಯಾ'ದ ಮೂಲಕ ಕಪ್ಪಗಿದ್ದರೂ ಹೀರೋ ಆಗಬಹುದು ಎಂದು ಸಾಧಿಸಿತೋರಿಸಿದ ಈ ಕರಿಚಿರತೆ ಪ್ರಾಣ ಬಿಟ್ಟಿದೆ ಎಂದರೆ ಯಾರಿಗೆ ತಾನೆ ಎದೆ ಹೊಡೆದಂತಾಗುವುದಿಲ್ಲ...

ಆದರೆ ಅದೇ ಮೆಸೇಜಿನಲ್ಲಿ ನಾಲ್ಕೈದು ಸಾಲುಗಳಿಗಾಗುವಷ್ಟು ಸ್ಪೇಸ್ ಬಿಟ್ಟು

For more details watch
.... Duniya film climax!

ಎಂದು ಸೇರಿಸಲಾಗಿತ್ತು.

ಆದರೆ ಅಷ್ಟು ಹೊತ್ತಿಗೆ ಗಾಂಧಿ ನಗರದವರು ಈ ಮೆಸೇಜಿಗೆ ಇನ್ನೊಂದಿಷ್ಟು ಉಪ್ಪು ಖಾರ ಬೆರೆಸಿ ಹೊಸ ನಾತ ಬೀರುವ ಮಸಾಲೆಯನ್ನೇ ಅರೆದುಬಿಟ್ಟಿದ್ದರು.

"ತಾನು ನಾಯಕನಾಗಿ ನಟಿಸಿದ ಚಿತ್ರಗಳ ನಾಯಕಿಯರೊಂದಿಗೆ ವಿಜಿ ಅಫೇರ್ ಇಟ್ಟುಕೊಳ್ಳೋ ವಿಚಾರವಾಗಿ ಮನೆಯಲ್ಲಿ ಸಿಕ್ಕಾಪಟ್ಟೆ ರಾದ್ಧಾಂತವಾಗಿದೆ ಯಂತೆ. ಜೊತೆಗೆ ತನ್ನ ಗೆಳತಿಯರೊಂದಿಗೂ ಜಗಳವಾಡಿಕೊಂಡು ವಿಜಿ ಆತ್ಮಹತ್ಯೆಗೆ ಶರಣಾದನಂತೆ... " ಹೀಗೆ ತರಹೇವಾರಿ ಗಾಳಿಸುದ್ದಿಗಳು ಸೃಷ್ಟಿಯಾಗಿದ್ದವು.

ಆದರೆ ಇಂಥ ಸುದ್ದಿ ಹಬ್ಬಿದ ಸಂದರ್ಭದಲ್ಲಿ ವಿಜಯ್ ತನ್ನ ಪಾಡಿಗೆ ತಾನು 'ಕರಿಚಿರತೆ' ಶೂಟಿಂಗ್‌ನಲ್ಲಿ ತೊಡಗಿಕೊಂಡಿದ್ದರು. ಕಡೆಗೆ ಸುವರ್ಣ ಚಾನೆಲ್‌ನವರು ಸಾಕ್ಷಾತ್ ವಿಜಿಗೇ ಫೋನಾಯಿಸಿ ನೇರಪ್ರಸಾರದಲ್ಲಿ ಮಾತಾಡಿಸಿದ ನಂತರವೇ ಆತನಿಗೇನೂ ಆಗಿಲ್ಲ ಎಂಬುದು ಎಲ್ಲರಿಗೂ ಖಾತ್ರಿಯಾಗಿದ್ದು.

ಇಂಥ ಮೆಸೇಜುಗಳನ್ನು ಕಳಿಸುವವರಿಗೆ ಅದೇನು ವಿಕೃತ ಖುಷಿಯೋ. ಆದರೆ ಇದರಿಂದ ಬೇಸರಕ್ಕೀಡಾಗುವುದು ಮಾತ್ರ ಅಭಿಮಾನಿಗಳು. ಕೆಲ ನಟರ ಖಾಸಗಿ ಬದುಕು ಕೂಡಾ ರಾಡಿಯಾಗಿರುವುದರಿಂದ ಹಲವೊಮ್ಮೆ ಇಂಥ ಪೊಳ್ಳು ಮೆಸೇಜುಗಳನ್ನೂ ಜನ ನಂಬುವಂತಾಗಿಬಿಡುತ್ತದೆ.



ಇದು ಮೊದಲಲ್ಲ....

ಹಾಗೆ ನೋಡಿದರೆ, ಇಂಥ ಎಸ್ಸೆಮ್ಮೆಸ್ಸುಗಳೇನೂ ಹೊಸತಲ್ಲ. ಅಮಿತಾಭ್ ಬಚ್ಚನ್ ತೀರಿಕೊಂಡಿದ್ದಾಗಿ ಆಗಾಗ್ಗೆ ಮೆಸೇಜುಗಳು ಬರುತ್ತಲೇ ಇರುತ್ತವೆ.



ಕಳೆದ ವರ್ಷ ಇಂಥದ್ದೇ ಒಂದು ಮೆಸೇಜು ಕನ್ನಡಿಗರ ಮನ ಕದಡಿಹಾಕಿತ್ತು. ಆಗಿನ್ನೂ ಸಾಹಸಸಿಂಹ ವಿಷ್ಣುವರ್ಧನ್ ಗಟ್ಟಿಮುಟ್ಟಿಯಾಗೇ ಇದ್ದರು. ಆಗ 'ನಟ ವಿಷ್ಣುವರ್ಧನ್ ಬ್ಲಡ್ ಕ್ಯಾನ್ಸರ್‌ನಿಂದ ತೀರಿಕೊಂಡಿದ್ದಾರೆ....' ಎಂಬ ಮೆಸೇಜು ಟೈಪ್ ಮಾಡಿ ಕಡೆಗೆ 'ಬಂಧನ ಸಿನೆಮಾದ ಕ್ಲೈಮ್ಯಾಕ್ಸ್‌ನಲ್ಲಿ' ಎಂದು ಸೇರಿಸಲಾಗಿತ್ತು.



ಈಗ್ಗೆ ಆರು ತಿಂಗಳ ಹಿಂದೆ ತಮಿಳು ನಟನಿಗೆ ಬ್ರೈನ್ ಟ್ಯೂಮರ್ ಅಂತೆ, ಶೂಟಿಂಗ್ ಸ್ಪಾಟ್‌ನಲ್ಲೇ ಆತ ತಲೆ ತಿರುಗಿ ಬಿದ್ದು ಆಸ್ಪತ್ರೆ ಸೇರಿದ್ದಾನಂತೆ... ಎಂಬ ಮೆಸೇಜು ಬಂದುಬಿಟ್ಟಿತ್ತು. ಈ ಸುದ್ದಿ ಕೇಳಿದ ಆತನ ಅಸಂಖ್ಯ ಅಭಿಮಾನಿಗಳು ಆತನ ಮನೆ ಮುಂದೆ ಜಮಾಯಿಸಿಬಿಟ್ಟಿದ್ದರು.

'ನಮ್ಮ ಪ್ರೀತಿಯ ರಾಮು' ಚಿತ್ರದಲ್ಲಿ ಕುರುಡನ ಪಾತ್ರದಲ್ಲಿ ನಟಿಸಿದ ದರ್ಶನ್‌ಗೆ ಕಣ್ಣುಗಳೇ ಹೋಗಿಬಿಟ್ಟವು ಎಂಬುದಾಗಿಯೂ, ಸುದೀಪ್ ಸಣ್ಣಗಾಗಿದ್ದಕ್ಕೆ ಆತನಿಗೆ ಅದೆಂಥದ್ದೋ ಕಾಯಿಲೆ ಬಂದಿರುವುದಾಗಿಯೂ ಸುದ್ದಿಗಳು ಹಬ್ಬುತ್ತಲೇ ಇರುತ್ತಿದ್ದವು. ಕೆಲಸವಿಲ್ಲದ ಪೋಕರಿಗಳ ಕೈಯಲ್ಲೂ ಈಗ ಮೊಬೈಲ್ ಸೆಟ್‌ಗಳು ಬಂದಿರುವುದರಿಂದ ಇಂಥ ಕಪಿಚೇಷ್ಟೆಗಳನ್ನು ತಡೆಯುವುದು ಅಸಾಧ್ಯವಾಗಿದೆ.

ವಾಸ್ತವವಾಗಿ ಮೊಬೈಲ್‌ಗಳು ಇಲ್ಲದಿದ್ದ ಕಾಲದಲ್ಲೂ ಇಂಥವೇ ಗಾಳಿಸುದ್ದಿಗಳು ಹರಡುತ್ತಿದ್ದವು. ಒಮ್ಮೆ 'ಡಾ. ರಾಜ್‌ಕುಮಾರ್ ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂಬ ಅನಾಹುತಕಾರಿ ಗಾಸಿಪ್ ಹರಡಿತ್ತು. ಆಗ ಇಡೀ ರಾಜ್ಯವೇ ಬೆಚ್ಚಿಬಿದ್ದಿತ್ತು. ಕಡೆಗೆ ಗಾಜನೂರಿಗೆ ವಿಶ್ರಾಂತಿಗೆಂದು ತೆರಳಿದ್ದ ಡಾ. ರಾಜ್ ಟೀವಿ ಪರದೆಯ ಮುಂದೆ ಬಂದು 'ನಿಮ್ಮ ಈ ರಾಜ್‌ಕುಮಾರನಿಗೆ ಏನೂ ಆಗಿಲ್ಲ. ಸಾಯುವಂಥ ಸಮಸ್ಯೆ ನನಗೇನೂ ಇಲ್ಲ' ಎಂದು ಹೇಳಿಕೆ ನೀಡಿದ ನಂತರವಷ್ಟೇ ಪರಿಸ್ಥಿತಿ ತಣ್ಣಗಾಗಿದ್ದು.

ಒಬ್ಬ ನಟ ಅಥವಾ ಯಾವುದೇ ವ್ಯಕ್ತಿ ಬದುಕಿದ್ದಾಗಲೇ ಅವರನ್ನು 'ಸಾಯಿಸಿ' ವಿಕೃತ ಸಂತೋಷ ಪಡುವ ಕಿಡಿಗೇಡಿಗಳು ಇಂತಹ ಕೆಲಸಗಳಿಂದ ಅದೇನು ಸಾಧಿಸುತ್ತಾರೋ? ಗೊತ್ತಿಲ್ಲ.

● ಅರುಣ್



ಕಾರ್ತಿಕ್
ಅರ್ಚನಾ ಗುಪ್ತ

'ಮೈಲಾರಿ'ಗೆ 'ಜೊತೆಗಾರ'ನಿಲ್ಲ




ಸಿನಿಮಾ ಆರಂಭಕ್ಕೂ ಮುನ್ನವೇ ಶಿವರಾಜ್‌ಕುಮಾರ್ ಅವರ ಫೋಟೋ ಸೆಷನ್ ಮಾಡಿ ನಿರ್ದೇಶಕ 'ತಾಜ್ ಮಹಲ್' ಚಂದ್ರು ಅದನ್ನು 'ಮೈಲಾರಿ' ಹೆಸರಿನಲ್ಲಿ ಪತ್ರಿಕೆಗಳಿಗೆ ಹಂಚಿದ್ದರು.

ಆದರೂ 'ಮೈಲಾರಿ' ಚಂದ್ರು ಕೈತಪ್ಪಿಹೋಗಿದೆ.

ನಿರ್ಮಾಪಕ ಕನಕಪುರ ಶ್ರೀನಿವಾಸ್ ಮತ್ತು ಶ್ರೀಕಾಂತ್ 'ಮೈಲಾರಿ' ಟೈಟಲ್‌ಅನ್ನು ಅಶ್ವಿನಿ ರಾಮ್‌ಪ್ರಸಾದ್‌ರಿಂದ ಪಡೆಯಲು ಹರಸಾಹಸ ಮಾಡಿದರು. ಆದರೆ ಕಡೆಗೂ ಅವರ ಪ್ರಯತ್ನಗಳೆಲ್ಲ ವಿಫಲವಾಗಿವೆ. "ಚಿತ್ರದ ಟೈಟಲ್‌ಅನ್ನು ಬಿಟ್ಟುಕೊಡುವ ಮಾತೇ ಇಲ್ಲ" ಎಂದು ರಾಮ್‌ಪ್ರಸಾದ್ ಖಡಾಖಂಡಿತವಾಗಿ ಹೇಳಿದ್ದಾರೆ. ಮಾತ್ರವಲ್ಲ, ಇದೇ ಚಿತ್ರವನ್ನು ಇಷ್ಟರಲ್ಲೇ ತಾವು ನಿರ್ಮಿಸಲಿದ್ದು ಅದನ್ನು 'ಜೊತೆಗಾರ' ಚಿತ್ರದ ನಿರ್ದೇಶಕ ಸಿಂಗಾಮಣಿ ನಿರ್ದೇಶಿಸಲಿದ್ದಾರೆ ಎಂದೂ ಹೇಳಿದ್ದಾರೆ. ಇನ್ನು ಕಥೆ, ಸಂಭಾಷಣೆಯ ಜವಾಬ್ದಾರಿ ಮಳವಳ್ಳಿ ಸಾಯಿಕೃಷ್ಣ ವಹಿಸಿಕೊಳ್ಳುತ್ತಿದ್ದಾರೆ.

ಸದ್ಯಕ್ಕೆ 'ಜೊತೆಗಾರ' ಚಿತ್ರದಿಂದಾಗಿ ಆರ್ಥಿಕ ಸಂಕಷ್ಟದಲ್ಲಿ ಸಿಲುಕಿದ್ದ ಅವರು ಆ ಸಮಸ್ಯೆಯಿಂದ ಈಗ ಸ್ವಲ್ಪ ಮುಕ್ತಿ ಪಡೆದು ಶೀಘ್ರದಲ್ಲೇ 'ಜೊತೆಗಾರ'ನನ್ನೂ ತೆರೆಗೆ ತರಲಿದ್ದಾರಂತೆ.

ಅನ್ನದಾತರ ಸಿನಿಮಾ



ಕಳೆದ ವರ್ಷ 'ಯುವ' ಎನ್ನುವ ಸಿನಿಮಾವೊಂದು ಬಿಡುಗಡೆಯಾಗಿತ್ತು. ಸುಮಾರು ಆರು ಕೋಟಿ ಬಜೆಟ್‌ನಲ್ಲಿ ತಯಾರಾದ ಈ ಸಿನಿಮಾ ಪ್ರಚಾರದ ಕೊರತೆಯಿಂದ ಬಿಡುಗಡೆಯಾಗಿದ್ದೂ ಗೊತ್ತಾಗದಂತೆ ಮಂಗಮಾಯವಾಗಿತ್ತು. ಆ ಚಿತ್ರದಲ್ಲಿ ಮುಂಬೈನಲ್ಲಿ ನೆಲೆಸಿರುವ ಕನ್ನಡದ ಹುಡುಗ ಕಾರ್ತಿಕ್ ಶೆಟ್ಟಿ ನಾಯಕನಾಗಿ ನಟಿಸಿದ್ದ.

ಈತ ಈಗ 'ಕಾರ್ತಿಕ್' ಅನ್ನೋ ಮತ್ತೊಂದು ಚಿತ್ರದ ನಾಯಕ. ಬಾಲಿವುಡ್‌ನಲ್ಲಿ ಅಮಿತಾಭ್ ಬಚ್ಚನ್‌ರಿಂದ ಹಿಡಿದು ಅಮೀರ್ ಖಾನ್ ಸಿನಿಮಾಗಳ ತನಕ ಚಿತ್ರರಂಗದ ಶೇ. 70ರಷ್ಟು ಚಿತ್ರೀಕರಣ ಘಟಕಗಳಿಗೆ ಊಟ ಸಪ್ಲೈ ಮಾಡುವ ಮಂಗಳೂರು ಮೂಲದ ವೇಣುಗೋಪಾಲ್ ಎಂಬುವವರು ಈ ಚಿತ್ರವನ್ನು ನಿರ್ಮಿಸುತ್ತಿದ್ದಾರೆ.

ಈಗಾಗಲೇ ಹಲವಾರು ಮರಾಠಿ ಸಿನಿಮಾಗಳನ್ನು ನಿರ್ಮಿಸಿರುವ ವೇಣುಗೋಪಾಲ್ ಈ ಸಿನಿಮಾವೇನಾದರೂ ಗೆದ್ದರೆ, ಕನ್ನಡ ಚಿತ್ರರಂಗದಲ್ಲಿ ಇನ್ನಷ್ಟು ಚಿತ್ರಗಳನ್ನು ನಿರ್ಮಿಸಿ ಇಲ್ಲೂ 'ಅನ್ನದಾತ'ರಾಗುತ್ತಾರಂತೆ...!

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44